लोकहितार्थ सत्यनिष्ठा
Dedicated to Truth in Public Interest

सत्यमेव जयते

# ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ

# 74ನೇ ಸಂವಿಧಾನ ತಿದ್ದುಪಡಿ ಕಾಯ್ದೆಯ ಅನುಷ್ಠಾನದ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ

ಕರ್ನಾಟಕ ಸರ್ಕಾರ

2020ನೇ ವರ್ಷದ ವರದಿ ಸಂಖ್ಯೆ 2

# ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ

## 74ನೇ ಸಂವಿಧಾನ ತಿದ್ದುಪಡಿ ಕಾಯ್ದೆಯ ಅನುಷ್ಠಾನದ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ

ಕರ್ನಾಟಕ ಸರ್ಕಾರ

2020ನೇ ವರ್ಷದ ವರದಿ ಸಂಖ್ಯೆ. 2

## ವಿಷಯಸೂಚಿ


| ಕಂಡಿಕೆ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
|---|---|---|
| | ಪ್ರಸ್ತಾವನೆ | iii |
| | ಮುಖ್ಯಾಂಶಗಳು | v |
| **ಅಧ್ಯಾಯ–I** | **ಪರಿಚಯ** | |
| 1.1 | 74ನೇ ಸಂವಿಧಾನ ತಿದ್ದುಪಡಿ | 1 |
| 1.2 | ಕರ್ನಾಟಕದಲ್ಲಿ ನಗರೀಕರಣದ ಪ್ರವೃತ್ತಿ | 1 |
| 1.3 | ಸ್ಥಳೀಯ ಸಂಸ್ಥೆಗಳ ರಚನೆ | 1 |
| 1.4 | ಕರ್ನಾಟಕದಲ್ಲಿ ನಗರಾಡಳಿತದ ಸಾಂಸ್ಥಿಕ ರಚನೆ | 2 |
| **ಅಧ್ಯಾಯ–II** | **ಲೆಕ್ಕಪರಿಶೋಧನಾ ಚೌಕಟ್ಟು** | |
| 2.1 | ಲೆಕ್ಕಪರಿಶೋಧನಾ ಉದ್ದೇಶಗಳು | 3 |
| 2.2 | ಲೆಕ್ಕಪರಿಶೋಧನಾ ಮಾನದಂಡಗಳು | 3 |
| 2.3 | ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ | 4 |
| 2.4 | ಕೃತಜ್ಞತೆ | 5 |
| 2.5 | ಲೆಕ್ಕಪರಿಶೋಧನಾ ಅಂಶಗಳ ಸಂಯೋಜನೆ | 5 |
| **ಅಧ್ಯಾಯ–III** | **74ನೇ ಸಂವಿಧಾನ ತಿದ್ದುಪಡಿಯ ನಿಬಂಧನೆಗಳ ಅನುಪಾಲನೆ** | |
| 3.1 | ರಾಜ್ಯ ಸರ್ಕಾರದ ಶಾಸನಗಳ ಜೊತೆ 74ನೇ ಸಂವಿಧಾನದ ತಿದ್ದುಪಡಿಗಳ ಹೋಲಿಕೆ | 7 |
| **ಅಧ್ಯಾಯ–IV** | **ನಗರ ಸ್ಥಳೀಯ ಸಂಸ್ಥೆಗಳ ಸಬಲೀಕರಣ ಹಾಗೂ ಅವುಗಳ ಕಾರ್ಯವಿಧಾನ** | |
| 4.1 | ಪ್ರಕಾರ್ಯಗಳ ವಹಿಸುವಿಕೆಯ ವಾಸ್ತವ ಸ್ಥಿತಿ | 11 |
| 4.2 | ನಗರ ಸ್ಥಳೀಯ ಸಂಸ್ಥೆಗಳ ಸಬಲೀಕರಣಕ್ಕಾಗಿ ಸಾಂಸ್ಥಿಕ ಕಾರ್ಯವಿಧಾನಗಳು | 17 |
| 4.3 | ನಗರ ಸ್ಥಳೀಯ ಸಂಸ್ಥೆಗಳ ಮೇಲೆ ರಾಜ್ಯ ಸರ್ಕಾರದ ಅಧಿಕಾರ | 26 |
| 4.4 | ಅಂಗಸಂಸ್ಥೆಗಳು, ಅವುಗಳ ಕಾರ್ಯಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಮೇಲೆ ಪರಿಣಾಮ | 28 |
| **ಅಧ್ಯಾಯ–V** | **ನಗರ ಸ್ಥಳೀಯ ಸಂಸ್ಥೆಗಳ ಹಣಕಾಸಿನ ಸಂಪನ್ಮೂಲಗಳು** | |
| 5.1 | ರಾಜಸ್ವದ ಸಂಪನ್ಮೂಲಗಳು | 35 |
| 5.2 | ನಿಧಿಯ/ವೆಚ್ಚದ ಅಗತ್ಯತೆಯ ಅಂದಾಜು | 45 |
| 5.3 | ನಗರ ಸ್ಥಳೀಯ ಸಂಸ್ಥೆಗಳ ವೆಚ್ಚ | 48 |
| 5.4 | ನಗರ ಸ್ಥಳೀಯ ಸಂಸ್ಥೆಗಳ ಹಣಕಾಸಿನ ಅಧಿಕಾರಗಳು | 51 |
| **ಅಧ್ಯಾಯ–VI** | **ನಗರ ಸ್ಥಳೀಯ ಸಂಸ್ಥೆಗಳ ಮಾನವ ಸಂಪನ್ಮೂಲಗಳು** | |

| ಕಂಡಿಕೆ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
|---|---|---|
| 6.1 | ಮಾನವಬಲದ ಮೇಲೆ ಸೀಮಿತ ಅಧಿಕಾರ | 55 |
| 6.2 | ಸಿಬ್ಬಂದಿಯ ಪರ್ಯಾಪ್ತತೆ ಮತ್ತು ಕಾರ್ಯ ನಿರ್ವಹಣೆ | 59 |
| 6.3 | ಸಾಮರ್ಥ್ಯ ನಿರ್ಮಾಣ | 64 |
| 6.4 | ಕಾರ್ಯನಿರ್ವಹಣೆ | 65 |
| **ಅಧ್ಯಾಯ–VII** | ನಿರ್ಣಯ | **67** |
| | **ಅನುಬಂಧಗಳು** | **73** |


## ಅನುಬಂಧಗಳ ಪಟ್ಟಿ


| ಅನುಬಂಧ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
|---|---|---|
| 1.1 | ರಾಜ್ಯದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಸಂಘಟನಾ ರಚನೆ | 73 |
| 1.2 | ಅಂಗಸಂಸ್ಥೆಗಳು ಮತ್ತು ಅವುಗಳ ಕಾರ್ಯಗಳು | 74 |
| 2.1 | ಆಯ್ಕೆ ಮಾಡಿದ ನಗರ ಸ್ಥಳೀಯ ಸಂಸ್ಥೆಗಳ ಪಟ್ಟಿ | 75 |
| 4.1 | ರಾಜ್ಯ ಹಣಕಾಸು ಆಯೋಗದ ಶಿಫಾರಸುಗಳನ್ನು ಅನುಷ್ಠಾನಗೊಳಿಸದಿರುವುದು | 77 |
| 5.1 | ನಾಲ್ಕನೇ ರಾಜ್ಯ ಹಣಕಾಸು ಆಯೋಗವು ಗುರುತಿಸಿದ್ದ ರಾಜಸ್ವ ಸಂಪನ್ಮೂಲಗಳ ವಿವರಗಳು, ವಿಧಿಸುವಿಕೆ ಮತ್ತು ಶಾಸನಬದ್ಧ ನಿಬಂಧನೆಗಳ ಸ್ಥಿತಿ | 80 |
| 6.1 | ಪರೀಕ್ಷಾ–ತನಿಖೆ ನಡೆಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ 1000 ಜನಸಂಖ್ಯೆಗೆ ಪ್ರತಿಯಾಗಿ ಉದ್ಯೋಗಿಗಳ ಸಂಖ್ಯೆಯನ್ನು ತೋರಿಸುವ ಕೋಷ್ಟಕ | 82 |
| 6.2 | ಮೈಸೂರಿನ ಎಸ್‌ಐಯುಡಿ ನಡೆಸಿದ ತರಬೇತಿ ಕಾರ್ಯಕ್ರಮಗಳ ವಿವರಗಳನ್ನು ತೋರಿಸುವ ಕೋಷ್ಟಕ | 85 |

## ಪ್ರಸ್ತಾವನೆ

1. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಈ ವರದಿಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಕರ್ತವ್ಯಗಳು, ಅಧಿಕಾರಗಳು ಮತ್ತು ಸೇವಾ ಷರತ್ತುಗಳ ಅಧಿನಿಯಮ, 1971ರ ಅನ್ವಯ ರಾಜ್ಯಪಾಲರಿಗೆ ಸಲ್ಲಿಸಲು ತಯಾರಿಸಲಾಗಿದೆ.

2. ರಾಜ್ಯ ಸರ್ಕಾರವು ಅಧಿಸೂಚಿತ ಪ್ರದೇಶಗಳ ಸಮಿತಿಗಳನ್ನು ಹೊರತುಪಡಿಸಿ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆಯನ್ನು 2008–09ರಿಂದ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಕರ್ತವ್ಯಗಳು, ಅಧಿಕಾರಗಳು ಮತ್ತು ಸೇವಾ ಷರತ್ತುಗಳ ಅಧಿನಿಯಮ, 1971 ಪರಿಚ್ಛೇದ 14(2)ರ ಅಡಿಯಲ್ಲಿ ಮತ್ತು ಪರಿಚ್ಛೇದ 20(1)ರ ಅಡಿಯಲ್ಲಿ 2011–12ರಿಂದ ತಾಂತ್ರಿಕ ಮಾರ್ಗಸೂಚಿ ಮತ್ತು ಮೇಲ್ವಿಚಾರಣೆ ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ವಹಿಸಿತು.

3. 2014–15ರಿಂದ 2018–19ರ ಅವಧಿಯನ್ನು ವ್ಯಾಪಿಸಿದ ಈ ವರದಿಯು '74ನೇ ಸಂವಿಧಾನ ತಿದ್ದುಪಡಿ ಅಧಿನಿಯಮದ ಅನುಷ್ಠಾನ' ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ಒಳಗೊಂಡಿದೆ.

4. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಜಾರಿ ಮಾಡಿರುವ ಲೆಕ್ಕಪರಿಶೋಧನಾ ಮಾನದಂಡಗಳಿಗೆ ಅನುಗುಣವಾಗಿ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲಾಗಿದೆ.

5. ಈ ಭಾಷಾಂತರಿಸಿದ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

## ಮುಖ್ಯಾಂಶಗಳು

### 74ನೇ ಸಂವಿಧಾನ ತಿದ್ದುಪಡಿಯ ಉದ್ದೇಶ

ಭಾರತದ ಸಂವಿಧಾನವು 74ನೇ ತಿದ್ದುಪಡಿಯ ಮೂಲಕ ಪ್ರಜಾಪ್ರಭುತ್ವ ವಿಕೇಂದ್ರೀಕರಣಕ್ಕೆ ಸ್ಪಷ್ಟವಾದ ಅಧ್ಯಾದೇಶವನ್ನು ನೀಡಿತು, ಇದು ದೇಶದ ನಗರ ಪ್ರದೇಶಗಳಲ್ಲಿ ಸ್ವಯಂ-ಆಡಳಿತ ಸ್ಥಳೀಯ ಸಂಸ್ಥೆಗಳ ಮೂಲಕ ತಳಮಟ್ಟದಲ್ಲಿ ಪ್ರಜಾಪ್ರಭುತ್ವವನ್ನು ತರಲು ಸಾಂಸ್ಥಿಕ ಚೌಕಟ್ಟನ್ನು ರಚಿಸಲು ಪ್ರಯತ್ನಿಸಿತು. 74ನೇ ಸಂವಿಧಾನ ತಿದ್ದುಪಡಿ 1 ಜೂನ್ 1993ರಿಂದ ಜಾರಿಗೆ ಬಂದಿತು ಮತ್ತು 12ನೇ ಅನುಸೂಚಿಯಲ್ಲಿ ಪಟ್ಟಿ ಮಾಡಲಾದ 18 ಪ್ರಕಾರ್ಯಗಳನ್ನು ನಿರ್ವಹಿಸಲು ನಗರ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ನೀಡಿತು.

### ಈ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ ಏಕೆ?

ದೃಢವಾದ ಸಾಂಸ್ಥಿಕ ಚೌಕಟ್ಟನ್ನು ರಚಿಸುವುದರ ಜೊತೆಗೆ ಪ್ರಕಾರ್ಯಗಳು, ನಿಧಿಗಳು ಮತ್ತು ಸಿಬ್ಬಂದಿಗಳ ವರ್ಗಾವಣೆಯ ಮೂಲಕ ರಾಜ್ಯ ಸರ್ಕಾರವು ನಗರ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ನೀಡಿತ್ತೇ ಎಂಬುದನ್ನು ಖಚಿತಪಡಿಸಿಕೊಳ್ಳಲು.

**ಲೆಕ್ಕಪರಿಶೋಧನಾ ಅವಧಿ:** **2014-15 ರಿಂದ 2018-19**

**ಮಾದರಿ** **11 ಪ್ರಕಾರ್ಯಗಳು ಮತ್ತು 44 ನಗರ ಸ್ಥಳೀಯ ಸಂಸ್ಥೆಗಳು.**

### ಲೆಕ್ಕಪರಿಶೋಧನೆಯು ಏನನ್ನು ಗಮನಿಸಿತು?

**74ನೇ ಸಂವಿಧಾನ ತಿದ್ದುಪಡಿ ಕಾಯ್ದೆಯ ನಿಬಂಧನೆಗಳ ಅನುಸರಣೆ**

- ಶಾಸನಬದ್ಧ ತಿದ್ದುಪಡಿಗಳನ್ನು ಜಾರಿಗೆ ತಂದಿದ್ದರೂ ಸಹ ಅವುಗಳನ್ನು ಸಂಪೂರ್ಣವಾಗಿ ಮತ್ತು ಸ್ಫೂರ್ತಿದಾಯಕವಾಗಿ ಅನುಷ್ಠಾನಗೊಳಿಸಿರಲಿಲ್ಲ

**ನಗರ ಸ್ಥಳೀಯ ಸಂಸ್ಥೆಗಳ ಸಬಲೀಕರಣ ಮತ್ತು ಅವುಗಳ ಕಾರ್ಯವಿಧಾನ**

- ವರ್ಗಾವಣೆ ಮಾಡಬೇಕಿದ್ದ 18 ಪ್ರಕಾರ್ಯಗಳಲ್ಲಿ ಅಗ್ನಿಶಾಮಕ ಸೇವೆಗಳನ್ನು ಹೊರತುಪಡಿಸಿ ಎಲ್ಲವನ್ನೂ ವರ್ಗಾವಣೆ ಮಾಡಲಾಗಿತ್ತು.
- ಎಲ್ಲಾ ಪ್ರಕಾರ್ಯಗಳು ಕಡ್ಡಾಯವಾಗಿದ್ದರೂ, ರಾಜ್ಯ ಸರ್ಕಾರವು ಪ್ರಕಾರ್ಯಗಳನ್ನು ಕಡ್ಡಾಯ ಮತ್ತು ವಿವೇಚನಾತ್ಮಕ ಎಂದು ವರ್ಗೀಕರಿಸಿತ್ತು
- ಪ್ರಕಾರ್ಯಗಳ ವಾಸ್ತವಿಕ ಅನುಷ್ಠಾನದ ಸ್ಥಿತಿ

| ನಗರ ಸ್ಥಳೀಯ ಸಂಸ್ಥೆಗಳ ಪಾತ್ರ | ಪ್ರಕಾರ್ಯಗಳ ಸಂಖ್ಯೆ |
|---|---|
| ಪೂರ್ಣ ಅಧಿಕಾರ | 3 |
| ಯಾವುದೇ ಪಾತ್ರವಿಲ್ಲ | 2 |
| ಕೇವಲ ಅನುಷ್ಠಾನ ಸಂಸ್ಥೆ | 3 |
| ಉಭಯ ಪಾತ್ರ | 1 |
| ಸೀಮಿತ ಪಾತ್ರ/ಅಧಿಕಾರದ ಮೇಲುವ್ಯಾಪಿಸುವಿಕೆ | 8 |

- ಚುನಾವಣೆಗಳ ಸ್ಥಿತಿ ಮತ್ತು ಕೌನ್ಸಿಲ್‌ಗಳ ರಚನೆಯು ಕೆಳಕಂಡಿಂತಿತ್ತು:

| ಸ್ಥಿತಿ | ನಗರ ಸ್ಥಳೀಯ ಸಂಸ್ಥೆಗಳ ಸಂಖ್ಯೆ |
|---|---|
| ಚುನಾವಣೆಗಳು ನಡೆದಿದ್ದು ಕೌನ್ಸಿಲ್‌ಗಳನ್ನು ರಚಿಸಿದ್ದು | 63 |
| ಚುನಾವಣೆಗಳು ನಡೆದಿವೆ ಆದರೆ ಕೌನ್ಸಿಲ್‌ಗಳನ್ನು ರಚಿಸಲಾಗಿಲ್ಲ | 187 |
| ಚುನಾವಣೆ ನಡೆಯಬೇಕಿತ್ತು ಆದರೆ ನಡೆದಿಲ್ಲ | 23 |

- ಮೇಯರ್/ಅಧ್ಯಕ್ಷರ ಅಧಿಕಾರಾವಧಿ – ಮೇಯರ್‌ರವರ ಅಧಿಕಾರಾವಧಿ ಒಂದು ವರ್ಷವಾಗಿತ್ತು ಮತ್ತು ಅಧ್ಯಕ್ಷರ ಅವಧಿ 30 ತಿಂಗಳುಗಳಾಗಿದ್ದವು. ಈ ಅಧಿಕಾರಾವಧಿಗಳು ಕೌನ್ಸಿಲ್‌ನ ಅವಧಿಯೊಂದಿಗೆ ಸರಿಸಮಾನವಾಗಿರಲಿಲ್ಲ. ಇದು ದೀರ್ಘಾವಧಿಯ ಯೋಜನೆಯನ್ನು ಬಾಧಿಸಿತು ಮತ್ತು ಉನ್ನತ ಮಟ್ಟದಲ್ಲಿ ಅಸ್ಥಿರತೆಗೆ ಕಾರಣವಾಗಿತ್ತು.
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ ಯಾವುದೇ ಮಹಾನಗರ ಪಾಲಿಕೆಗಳಲ್ಲಿ ವಾರ್ಡ್ ಸಮಿತಿಗಳನ್ನು ರಚಿಸಿರಲಿಲ್ಲ. ಇದು ಸ್ಥಳೀಯ ಆಡಳಿತದಲ್ಲಿ ಸಮುದಾಯದ ಭಾಗವಹಿಸುವಿಕೆಯ ಅನುಪಸ್ಥಿತಿಯಲ್ಲಿ ಪರಿಣಮಿಸಿತು.
- ಬಾಗಲಕೋಟೆ ಜಿಲ್ಲೆಯಲ್ಲಿ ಜಿಲ್ಲಾ ಯೋಜನಾ ಸಮಿತಿಯು ಅಸ್ತಿತ್ವದಲ್ಲಿರಲಿಲ್ಲ ಮತ್ತು ರಚನೆಯಾಗಿದ್ದ 29 ಜಿಲ್ಲೆಗಳಲ್ಲಿ ಅಗತ್ಯವಿದ್ದಂತೆ ಅವು ಕಾರ್ಯ ನಿರ್ವಹಿಸುತ್ತಿರಲಿಲ್ಲ. ಹೀಗಾಗಿ, ಸಮಗ್ರ ಜಿಲ್ಲಾ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಿರಲಿಲ್ಲ.
- ಬೆಂಗಳೂರು ಪ್ರದೇಶಕ್ಕೆ ಮಹಾನಗರ ಯೋಜನಾ ಸಮಿತಿಯನ್ನು ರಚಿಸಲಾಗಿತ್ತು ಆದರೆ ಯಾವುದೇ ಅಭಿವೃದ್ಧಿ ಯೋಜನೆ ಸಿದ್ಧಪಡಿಸಿರಲಿಲ್ಲ.
- ರಾಜ್ಯ ಹಣಕಾಸು ಆಯೋಗಗಳನ್ನು ರಚಿಸುವಲ್ಲಿನ ವಿಳಂಬಗಳು ಮತ್ತು ಶಿಫಾರಸುಗಳ ಅನುಷ್ಠಾನದಲ್ಲಿನ ವಿಳಂಬಗಳು ರಾಜ್ಯ ಸರ್ಕಾರದಿಂದ ಹಣಕಾಸಿನ ವರ್ಗಾವಣೆಯಲ್ಲಿ ವಿಳಂಬವಾಗಲು ಕಾರಣವಾಯಿತು ಮತ್ತು ಇದು ನಗರ ಸ್ಥಳೀಯ ಸಂಸ್ಥೆಗಳ ರಾಜಸ್ವದ ಮೇಲೆ ಪರಿಣಾಮ ಬೀರಿತ್ತು.
- ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ಸಂಪನ್ಮೂಲಗಳಿಂದ ಕೈಗೆತ್ತಿಕೊಳ್ಳುವ ಕಾಮಗಾರಿಗಳಿಗೆ ಜಿಲ್ಲಾಡಳಿತದಿಂದ ಅನುಮೋದನೆಯನ್ನು ಪಡೆಯಬೇಕಾದ ಅಗತ್ಯತೆಯು ನಗರ ಸ್ಥಳೀಯ ಸಂಸ್ಥೆಗಳ ಸ್ವಾಯತ್ತತೆಗೆ ವಿರುದ್ಧವಾಗಿತ್ತು.
- ಅಂಗಸಂಸ್ಥೆಗಳ ಅಸ್ತಿತ್ವವು ನಗರ ಯೋಜನೆ ಮತ್ತು ಭೂಬಳಕೆಯ ನಿಯಂತ್ರಣ, ಕೊಳೆಗೇರಿ ಸುಧಾರಣೆ ಹಾಗೂ ನೀರು ಸರಬರಾಜು ಮತ್ತು ನೈರ್ಮಲ್ಯದಂತಹ ಪ್ರಕಾರ್ಯಗಳ ಅನುಷ್ಠಾನದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಸ್ವಾಯತ್ತತೆಯನ್ನು ಗಮನಾರ್ಹವಾಗಿ ಕಡಿಮೆಗೊಳಿಸಿತ್ತು.

## ನಗರ ಸ್ಥಳೀಯ ಸಂಸ್ಥೆಗಳ ಹಣಕಾಸು ಸಂಪನ್ಮೂಲಗಳು

- ನಗರ ಸ್ಥಳೀಯ ಸಂಸ್ಥೆಗಳು ಹಣಕಾಸಿನ ವರ್ಗಾವಣೆಯ ಮೇಲೆ ಅಧಿಕವಾಗಿ ಅವಲಂಬಿತವಾಗಿದ್ದವು, ಇದು ಅವರ ಒಟ್ಟು ರಾಜಸ್ವದ ಶೇಕಡಾ 63ರಷ್ಟಿತ್ತು.
- 2014–15ರಿಂದ 2018–19ರ ಅವಧಿಯಲ್ಲಿ ರಾಜ್ಯ ಹಣಕಾಸು ಆಯೋಗದ ಶಿಫಾರಸುಗಳಿಗೆ ಪ್ರತಿಯಾಗಿ ಹಣಕಾಸು ವರ್ಗಾವಣೆಯಲ್ಲಿ ₹15,564 ಕೋಟಿಗಳ ಕೊರತೆಯಿದ್ದಿತು.

- ನಗರ ಸ್ಥಳೀಯ ಸಂಸ್ಥೆಗಳು 2018–19ನೇ ವರ್ಷದ ₹295.20 ಕೋಟಿಗಳ ಕಾರ್ಯಕ್ಷಮತಾ ಅನುದಾನದ ಸಂಪೂರ್ಣ ಹಂಚಿಕೆಯನ್ನು ಇನ್ನೂ ಸ್ವೀಕರಿಸಿಬೇಕಿತ್ತು. ಅದಕ್ಕೆ ಕಾರಣಗಳನ್ನು ನೀಡಿರಲಿಲ್ಲ.
- 2018–19ನೇ ವರ್ಷದ ನಿಯೋಜಿತ ರಾಜಸ್ವವನ್ನು ಇನ್ನೂ ಬಿಡುಗಡೆ ಮಾಡಿರಲಿಲ್ಲ.
- ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ಆದಾಯವು ಅವುಗಳ ಒಟ್ಟು ರಾಜಸ್ವದಲ್ಲಿ ಶೇಕಡಾ 37ರಷ್ಟಿದ್ದಿತು. ರಾಜ್ಯದ ಕಾನೂನುಗಳು ನಗರ ಸ್ಥಳೀಯ ಸಂಸ್ಥೆಗಳಿಗೆ ತಮ್ಮದೇ ಸ್ವಂತ ಆದಾಯವನ್ನು ಕ್ರೋಢೀಕರಣ ಮಾಡಿಕೊಳ್ಳಲು ಸಂಪೂರ್ಣ ಸ್ವಾಯತ್ತತೆಯನ್ನು ನೀಡಿರಲಿಲ್ಲ.
- ನಗರ ಸ್ಥಳೀಯ ಸಂಸ್ಥೆಗಳಿಗೆ ಅಧ್ಯಾರೋಪಿಸ ಬಹುದಾದ ವಿಶ್ವಾಸಾರ್ಹ ದತ್ತಸಂಚಯದ ಅನುಪಸ್ಥಿತಿ, ದರಗಳ ಪರಿಷ್ಕರಣೆ ಮಾಡದಿರುವುದು, ಮುಂತಾದ ಕಾರಣಗಳೂ ಸಹ ಕಡಿಮೆ ಆದಾಯದ ಉತ್ಪಾದನೆಗೆ ಕೊಡುಗೆ ನೀಡಿದ್ದವು.
- ಆಯವ್ಯಯ ತಯಾರಿಕೆಯು ದೋಷಪೂರಿತವಾಗಿತ್ತು ಮತ್ತು ಅವಾಸ್ತವಿಕ ಹಾಗೂ ಅವೈಜ್ಞಾನಿಕ ಆಯವ್ಯಯದ ತಯಾರಿಕೆಯಲ್ಲಿ ಪರಿಣಮಿಸಿತು.
- ನಗರ ಸ್ಥಳೀಯ ಸಂಸ್ಥೆಗಳು ತಮ್ಮಲ್ಲಿ ಲಭ್ಯವಿದ್ದ ಹಣದಲ್ಲಿ ಸರಿಸುಮಾರು ಶೇಕಡಾ 69ರಷ್ಟು ಹಣವನ್ನು ವೆಚ್ಚ ಮಾಡಿದ್ದವು.
- ರಾಜ್ಯ ಸರ್ಕಾರವು ನಗರ ಸ್ಥಳೀಯ ಸಂಸ್ಥೆಗಳ ಹಣಕಾಸಿನ ಮತ್ತು ಆಡಳಿತಾತ್ಮಕ ಅಧಿಕಾರಗಳನ್ನು ಸೀಮಿತಗೊಳಿಸಿತ್ತು ಮತ್ತು ಅದು ಹಣ ಬಳಕೆಯನ್ನು ನಿರ್ಬಂಧಿಸಿತ್ತು.

**ನಗರ ಸ್ಥಳೀಯ ಸಂಸ್ಥೆಗಳ ಮಾನವ ಸಂಪನ್ಮೂಲಗಳು**

- ಸಿಬ್ಬಂದಿಯ ಅಗತ್ಯತೆಯನ್ನು ನಿರ್ಧರಿಸುವುದು ಮತ್ತು ಸಿಬ್ಬಂದಿಯ ನೇಮಕಾತಿಯ ಅಧಿಕಾರವು ರಾಜ್ಯ ಸರ್ಕಾರದ ಬಳಿಯಿದ್ದಿತು.
- ವರ್ಗೀಕರಣ, ನೇಮಕಾತಿ ವಿಧಾನ, ಸೇವಾ ಷರತ್ತುಗಳು, ವೇತನ ಮತ್ತು ಭತ್ಯೆ, ನಗರ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿಯ ಮೇಲೆ ಶಿಸ್ತುಕ್ರಮಗಳನ್ನು ಪ್ರಾರಂಭಿಸುವುದು, ಬೇರೆ ನಗರ ಸ್ಥಳೀಯ ಸಂಸ್ಥೆಗಳಿಗೆ ಅಥವಾ ರಾಜ್ಯ ಸರ್ಕಾರದ ಇತರೆ ಇಲಾಖೆಗಳಿಗೆ ಸಿಬ್ಬಂದಿಯ ವರ್ಗಾವಣೆ, ಮುಂತಾದವುಗಳನ್ನು ರಾಜ್ಯ ಸರ್ಕಾರವು ನಿಯಂತ್ರಿಸುತ್ತದೆ.
- ಮಂಜೂರಾತಿ ಬಲವನ್ನು ನಿರ್ಧರಿಸಲು ಕೇವಲ ಜನಸಂಖ್ಯೆಯನ್ನು ಮಾತ್ರ ಮಾನದಂಡವನ್ನಾಗಿ ಪರಿಗಣಿಸಲಾಗಿತ್ತು. ಇದು ತಪ್ಪಾಗಿದ್ದಿತು ಮತ್ತು ಜನಸಂಖ್ಯೆಯ ಏರಿಕೆಯೊಂದಿಗೆ ಪುನರಾವರ್ತಿತ ಪರಿಷ್ಕರಣೆಗಳ ಅವಶ್ಯಕತೆಯಿರುತ್ತದೆ.
- ಪರೀಕ್ಷಾ–ತನಿಕೆ ನಡೆಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಂಜೂರಾದ ಸಿಬ್ಬಂದಿ ಸಂಖ್ಯೆಯು 1,000 ಜನಸಂಖ್ಯೆಗೆ (2001) 2.24 ರಿಂದ 5.80 ನೌಕರರಿಂದ, 1,000 ಜನಸಂಖ್ಯೆಗೆ (2011) 1.94 ರಿಂದ 5.38 ನೌಕರರ ವ್ಯಾಪ್ತಿಯಲ್ಲಿದ್ದಿತು.
- ಎಲ್ಲ ಪದವೃಂದಗಳಲ್ಲೂ, ವಿಶೇಷವಾಗಿ ನಿರ್ಣಾಯಕ ತಾಂತ್ರಿಕ ಹುದ್ದೆಗಳಲ್ಲಿ ಹೆಚ್ಚಿನ ಸಂಖ್ಯೆಯ ಹುದ್ದೆಗಳು ಖಾಲಿ ಇದ್ದುದು ಪರ್ಯಾಪ್ತ ಮಾನವಶಕ್ತಿಯ ಅನುಪಸ್ಥಿತಿಯಲ್ಲಿ ಪರಿಣಮಿಸಿ ನಾಗರೀಕ ಸೇವೆಗಳ ವಿತರಣೆಯನ್ನು ಬಾಧಿಸಿತು.

- ಕಾರ್ಯನಿರ್ವಾಹಕ ಹುದ್ದೆಗಳನ್ನು ಕಂದಾಯ ಅಧಿಕಾರಿ, ವ್ಯವಸ್ಥಾಪಕರು, ವರಿಷ್ಠ ಆರೋಗ್ಯ ನಿರೀಕ್ಷಕರು, ಪ್ರಥಮ ದರ್ಜೆಯ ಸಹಾಯಕರು ಮುಂತಾದ ಕೆಎಮ್‌ಎಎಸ್–ರಹಿತ ಅಧಿಕಾರಿಗಳು, ಶಾಸನಬದ್ದ ನಿಬಂಧನೆಗಳ ವಿರುದ್ಧವಾಗಿ, ನಿಭಾಯಿಸುತ್ತಿದ್ದರು. ವ್ಯತಿರಿಕ್ತವಾಗಿ ಕೆಎಮ್‌ಎಎಸ್ ಅಧಿಕಾರಿಗಳು ಕಂದಾಯ ಅಧಿಕಾರಿಗಳು, ವ್ಯವಸ್ಥಾಪಕರು ಮತ್ತು ವರಿಷ್ಠ ಆರೋಗ್ಯ ನೀರಿಕ್ಷಕರ ಹುದ್ದೆಗಳನ್ನು ನಿಭಾಯಿಸುತ್ತಿದ್ದರು.
- ಮಹಾನಗರ ಪಾಲಿಕೆಗಳಲ್ಲಿ ಗ್ರೂಪ್ ಎ ಪದವೃಂದದ ಹೆಚ್ಚಿನ ಸಂಖ್ಯೆಯ ಹುದ್ದೆಗಳನ್ನು (ಶೇಕಡಾ 40) ನಿಯೋಜನೆಯ ಮೇಲೆ ಭರ್ತಿ ಮಾಡುವುದಕ್ಕೆ ಸಿ&ಆರ್ ನಿಯಮಗಳು ಅನುಮತಿ ನೀಡಿತ್ತು. ಕಿರಿಯ ಆರೋಗ್ಯ ನಿರೀಕ್ಷಕರು, ಪ್ರಥಮ ದರ್ಜೆಯ ಸಹಾಯಕ, ಸಮುದಾಯ ಸಂಘಟಕರು ಮುಂತಾದ ಹುದ್ದೆಗಳನ್ನು, ನಿಬಂಧನೆ ಇಲ್ಲದಿದ್ದರೂ, ನಿಯೋಜನೆಯ ಮೇಲೆ ಭರ್ತಿ ಮಾಡಲಾಗಿತ್ತು. ಇದು ಆಡಳಿತ ಮಂಡಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕರಿಗೆ ನಿಯೋಜನೆಯಲ್ಲಿರುವ ಸಿಬ್ಬಂದಿಯ ಹೊಣೆಗಾರಿಕೆಯ ಮೇಲೆ ಪರಿಣಾಮ ಬೀರುತ್ತದೆ.

- **ಲೆಕ್ಕಪರಿಶೋಧನೆಯು ಏನನ್ನು ಶಿಫಾರಸು ಮಾಡಿತು.**

- ✓ ವಿಕೇಂದ್ರೀಕರಣವನ್ನು ಸಾಧಿಸುವ ದೃಷ್ಟಿಯನ್ನು ಯಥಾವತ್ತಾದ ರೂಪಕ್ಕೆ ಪರಿವರ್ತಿಸಲು ರಾಜ್ಯ ಸರ್ಕಾರ ನಿರ್ಣಾಯಕ ಕ್ರಮವನ್ನು ತೆಗೆದುಕೊಳ್ಳುವ ಅಗತ್ಯವಿದೆ. ನಗರ ಸ್ಥಳೀಯ ಸಂಸ್ಥೆಗಳಿಗೆ ನಿಯೋಜಿಸಲಾದ ಪ್ರಕಾರ್ಯಗಳಿಗೆ ಸಂಬಂಧಪಟ್ಟಂತೆ ಅವುಗಳು ಅಗತ್ಯವಿರುವಷ್ಟು ಸ್ವಾಯತ್ತತೆಯನ್ನು ಅನುಭವಿಸುವುದನ್ನು ಖಚಿತ ಪಡಿಸಿಕೊಳ್ಳುವ ಕ್ರಮಗಳನ್ನು ತೆಗೆದು ಕೊಳ್ಳಬೇಕಾಗಿದೆ.
- ✓ ರಾಜ್ಯ ಸರ್ಕಾರವು ಗಡಿ ಗುರುತಿಸುವ ಪ್ರಕ್ರಿಯೆಯನ್ನು ಪದೇ ಪದೇ ವಿಳಂಬ ಮಾಡುತ್ತಿರುವುದರಿಂದ, ಸಮಯಕ್ಕೆ ಸರಿಯಾಗಿ ಚುನಾವಣೆಗಳು ನಡೆಯುವುದನ್ನು ಖಚಿತಪಡಿಸಿಕೊಳ್ಳಲು ಗಡಿ ಗುರುತಿಸುವ ಕೆಲಸವನ್ನು ರಾಜ್ಯ ಚುನಾವಣಾ ಆಯೋಗಕ್ಕೆ ವಹಿಸಬೇಕು.
- ✓ ವಾರ್ಡ್ ಸಮಿತಿಗಳನ್ನು ಕೆಎಮ್‌ಸಿ ಅಧಿನಿಯಮದ ಅನ್ವಯ ರಚಿಸಸಬೇಕು ಮತ್ತು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಪೋಷಿಸಿ ಪ್ರೋತ್ಸಾಹಿಸಬೇಕಾಗಿದೆ, ಇದರಿಂದ ನಾಗರೀಕರ ಆದ್ಯತೆಗಳು ನಗರ ಸ್ಥಳೀಯ ಸಂಸ್ಥೆಗಳ ನಿರ್ಧಾರಗಳಿಗೆ ಕಾರಣವಾಗುತ್ತವೆ.
- ✓ ಸೂಕ್ತವಾದ ಮತ್ತು ಅತಿಹೆಚ್ಚಾದ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಕಾರಣವಾಗುವಂತೆ ಜಿಲ್ಲಾ ಯೋಜನಾ ಸಮಿತಿ ಮತ್ತು ಮಹಾನಗರ ಯೋಜನಾ ಸಮಿತಿಗಳ ಸಂಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳಲು ಅವರುಗಳು ನಿಯಮಿತವಾಗಿ ಸಭೆ ನಡೆಸುವುದನ್ನು ಖಚಿತಪಡಿಸಿಕೊಳ್ಳಬೇಕು,

- ✓ ರಾಜ್ಯ ಹಣಕಾಸು ಆಯೋಗಗಳನ್ನು ರಚಿಸುವಲ್ಲಿ ಮತ್ತು ಶಿಫಾರಸುಗಳನ್ನು ಅನುಷ್ಠಾನ ಮಾಡುವಲ್ಲಿ ವಿಳಂಬಗಳನ್ನು ತಪ್ಪಿಸಬೇಕು. ಪ್ರಾಮಾಣಿಕ ಸ್ಥಳೀಯ ಆಡಳಿತದ ಸಂಸ್ಥೆಗಳನ್ನು ರಚಿಸುವ ಅಂತಿಮ ಉದ್ದೇಶವನ್ನು ಗಣನೆಗೆ ತೆಗೆದುಕೊಂಡು, ಹಂಚಿಕೆ ಮತ್ತು ಸಾಂಸ್ಥಿಕ ವಿಷಯಗಳಿಗೆ ಸಂಬಂಧಿಸಿದ ರಾಜ್ಯ ಹಣಕಾಸು ಆಯೋಗಗಳ ಶಿಫಾರಸುಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಸಂಪೂರ್ಣವಾಗಿ ಜಾರಿಗೆ ತರಬೇಕು.
- ✓ ನಗರ ಸ್ಥಳೀಯ ಸಂಸ್ಥೆಗಳಿಗೆ ತಾಂತ್ರಿಕ ಪರಿಣತೆಯನ್ನು ಒದಗಿಸಲು ಆಸ್ತಿ ತೆರಿಗೆ ಮಂಡಳಿಯನ್ನು ಸ್ಥಾಪಿಸುವುದು ಅಗತ್ಯವಾಗಿದೆ.
- ✓ ಯೋಜನೆ, ನಿಯಂತ್ರಣ, ಕೊಳೆಗೇರಿ ಅಭಿವೃದ್ಧಿ ಮತ್ತು ನೀರು ಸರಬರಾಜು ಹಾಗೂ ನೈರ್ಮಲ್ಯ ಪ್ರಕಾರ್ಯಗಳಲ್ಲಿ ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ನಗರ ಸ್ಥಳೀಯ ಸಂಸ್ಥೆಗಳನ್ನು ಸಂಪೂರ್ಣವಾಗಿ ಒಳಗೊಳ್ಳುವ ಅವಶ್ಯಕತೆಯಿದೆ.
- ✓ ಆಸ್ತಿ ತೆರಿಗೆ, ಜಾಹೀರಾತು ತೆರಿಗೆ, ಘನತ್ಯಾಜ್ಯ ನಿರ್ವಹಣಾ ಉಪಕರ ಮುಂತಾದ ಮೂಲಗಳ ಮೂಲಕ ರಾಜಸ್ವವನ್ನು ಹೆಚ್ಚಿಸುವ ನಗರ ಸ್ಥಳೀಯ ಸಂಸ್ಥೆಗಳ ಸಾಮರ್ಥ್ಯದ ಮೇಲಿನ ಮಿತಿಗಳನ್ನು ತುರ್ತಾಗಿ ತೆಗೆದುಹಾಕಬೇಕಾಗಿದೆ.
- ✓ ಬಂಡವಾಳ ವೆಚ್ಚದ ಅಗತ್ಯತೆಗಳನ್ನು ಮತ್ತು ಶೇಕರಿಸಲು ನಿರೀಕ್ಷಿಸಲಾಗಿರುವ ನಿಧಿಗಳ ವಾಸ್ತವಿಕ ಪ್ರಕ್ಷೇಪಣೆಗಳನ್ನು ಗಣನೆಗೆ ತೆಗೆದುಕೊಂಡು ತಮ್ಮ ಆಯವ್ಯಯವನ್ನು ವೈಜ್ಞಾನಿಕ ರೀತಿಯಲ್ಲಿ ತಯಾರಿಸಲು ನಗರ ಸ್ಥಳೀಯ ಸಂಸ್ಥೆಗಳನ್ನು ಪ್ರೇರೇಪಿಸುವ ವಿಶೇಷ ಪ್ರಯತ್ನಗಳನ್ನು ಮಾಡಬೇಕಿದೆ.
- ✓ ದಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಕಾಮಗಾರಿಗಳು ಮತ್ತು ಇತರ ವೆಚ್ಚಗಳಿಗೆ ಸಂಬಂಧಿಸಿದ ಅಧಿಕಾರಗಳ ನಿಯೋಜನೆಯನ್ನು ಪರಿಷ್ಕರಿಸಬೇಕಾಗಿದೆ.
- ✓ ಪ್ರಕಾರ್ಯಗಳನ್ನು ನಿಭಾಯಿಸಲು ಅರ್ಹ ಮಾನವ ಸಂಪನ್ಮೂಲದ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಅಗತ್ಯ ಸಿಬ್ಬಂದಿಗಳ ನಿರ್ಧರಣೆ ಮತ್ತು ನೇಮಕಾತಿಗಳ ವಿಷಯಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಮಾನವ ಸಂಪನ್ಮೂಲಗಳ ಮೇಲೆ ಸಾಕಷ್ಟು ಅಧಿಕಾರಗಳನ್ನು ವಹಿಸಬೇಕು.
- ✓ ಕೆಎಮ್‌ಎಎಸ್ ಸಿಬ್ಬಂದಿಯನ್ನು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ನಿಯೋಜಿಸಬೇಕು. ನಿರ್ದಿಷ್ಟವಾಗಿ ಹೇಳುವುದಾದರೆ, ನಗರ ಸ್ಥಳೀಯ ಸಂಸ್ಥೆಗಳು ಸಾಕಷ್ಟು ಹಿರಿತನ ಮತ್ತು ಸಾಮರ್ಥ್ಯ ಹೊಂದಿರುವ ವ್ಯಕ್ತಿಗಳ ನೇತೃತ್ವದಲ್ಲಿವೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

# 1 ಅಧ್ಯಾಯ I
## ಪರಿಚಯ

## 1.1 74ನೇ ಸಂವಿಧಾನ ತಿದ್ದುಪಡಿ

1 ಜೂನ್ 1993ರಿಂದ ಜಾರಿಗೆ ಬಂದ ಸಂವಿಧಾನದ (ಎಪ್ಪತ್ನಾಲ್ಕನೆಯ ತಿದ್ದುಪಡಿ) ಕಾಯ್ದೆ, 1992 (74ನೆಯ ಸಂವಿಧಾನದ ತಿದ್ದುಪಡಿ), ಭಾಗ IX A (ಪೌರಸಂಸ್ಥೆಗಳು) ಯನ್ನು ಸೇರಿಸಿತು. ಈ ಕಾಯ್ದೆಯು ನಗರ ಸ್ಥಳೀಯ ಸಂಸ್ಥೆಗಳಿಗೆ ಸಂವಿಧಾನಿಕ ಸ್ಥಾನವನ್ನು ನೀಡಿತು. ಸಂವಿಧಾನದ ತಿದ್ದುಪಡಿ ಕಾಯ್ದೆಯ ಅನುಚ್ಛೇದ 243ಡಬ್ಲ್ಯೂ ಸ್ಥಳೀಯ ಸಂಸ್ಥೆಗಳನ್ನು ಸ್ವಾಯತ್ತ ಸರ್ಕಾರ ಸಂಸ್ಥೆಗಳಾಗಿ ಕಾರ್ಯ ನಿರ್ವಹಿಸಲು ಬೇಕಾಗಿರುವ ಅಗತ್ಯವಾದ ಅಧಿಕಾರ ಹಾಗೂ ಆಧಿಪತ್ಯವನ್ನು ನೀಡಲು ಮತ್ತು ಜವಾಬ್ದಾರಿಗಳನ್ನು ವಹಿಸಲು ನಿಬಂಧನೆಗಳನ್ನು ರಚಿಸಲು ರಾಜ್ಯ ಶಾಸಕಾಂಗಗಳನ್ನು ಅಧಿಕೃತಿಸಿತು.

ಸಂವಿಧಾನದ 12ನೇ ಅನುಸೂಚಿಯು **ಕೋಷ್ಟಕ–4.1** ರಲ್ಲಿ ಪಟ್ಟಿ ಮಾಡಿರುವಂತೆ 18 ನಿರ್ದಿಷ್ಟ ಪ್ರಕಾರ್ಯಗಳನ್ನು ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಬೇಕಾಗಿರುತ್ತದೆ.

## 1.2 ಕರ್ನಾಟಕದಲ್ಲಿ ನಗರೀಕರಣ ಪ್ರವೃತ್ತಿ

2011ರ ಜನಗಣತಿಯ ಅನ್ವಯ, ಒಟ್ಟು 6.11 ಕೋಟಿ ಜನಸಂಖ್ಯೆಯಲ್ಲಿ 2.35 ಕೋಟಿ (ಶೇಕಡಾ 38.67) ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. 2001–2011 ಮತ್ತು 2011–2019ರ[1] ದಶಕಗಳಲ್ಲಿ ನಗರ ಜನಸಂಖ್ಯೆಯ ಬೆಳವಣಿಗೆಯ ದರವು ಕ್ರಮವಾಗಿ ಶೇಕಡಾ 31.9 ಮತ್ತು 25.4ರಷ್ಟಿತ್ತು.

ಕರ್ನಾಟಕದ ನಗರಗಳು ಸಾರ್ವಜನಿಕ ಆರೋಗ್ಯ ಸಮಸ್ಯೆಗಳು, ಬಡತನ ನಿವಾರಣೆ, ತ್ಯಾಜ್ಯ ನಿರ್ವಹಣೆ, ನೈಸರ್ಗಿಕ ಸಂಪನ್ಮೂಲಗಳ ತಗ್ಗುವಿಕೆ ಮುಂತಾದ ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಹೆಚ್ಚಿನ ಸಮಸ್ಯೆಗಳನ್ನು ಸ್ಥಳೀಯ ಮಟ್ಟದಲ್ಲಿ ಉತ್ತಮವಾಗಿ ನಿರ್ವಹಿಸಲಾಗುವುದರಿಂದ ಈ ಸನ್ನಿವೇಶದಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಪ್ರಮುಖ ಪಾತ್ರವನ್ನು ನಿರ್ವಹಿಸಬೇಕಾಗುತ್ತದೆ.

## 1.3 ಸ್ಥಳೀಯ ಸಂಸ್ಥೆಗಳ ರಚನೆ

ಕರ್ನಾಟಕದಲ್ಲಿ ಜನಸಂಖ್ಯೆ[2], ಭೌಗೋಳಿಕ ಸ್ಥಿತಿ[3], ಆರ್ಥಿಕ ಪರಿಸ್ಥಿತಿ, ಸ್ಥಳೀಯ ಆದಾಯದ ಉತ್ಪಾದನೆ ಮತ್ತು ಉದ್ಯೋಗದ ಪ್ರಮಾಣದ ಆಧಾರದ ಮೇಲೆ ನಗರ ಸ್ಥಳೀಯ ಸಂಸ್ಥೆಗಳನ್ನು ವರ್ಗೀಕರಿಸಲಾಗಿದೆ. **ಕೋಷ್ಟಕ–1.1**ರಲ್ಲಿ ತೋರಿಸಿರುವಂತೆ 280 ಸ್ಥಳೀಯ ಸಂಸ್ಥೆಗಳಿವೆ.

---

[1] ಬೆಂಗಳೂರಿನ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಪ್ರಕಾರ 2019ರ ಜನಸಂಖ್ಯೆ

[2] 3 ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆ ಇರುವುದು ಮಹಾನಗರ ಪಾಲಿಕೆ, 50,000ಕ್ಕಿಂತ ಮೇಲ್ಪಟ್ಟು ಮತ್ತು 3 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವುದು ನಗರಸಭೆ, 20,000ದಿಂದ 50,000 ಜನಸಂಖ್ಯೆ ಇರುವುದು ಪುರಸಭೆ, 10,000ಕ್ಕಿಂತ ಮೇಲ್ಪಟ್ಟು ಮತ್ತು 20,000ಕ್ಕಿಂತ ಕಡಿಮೆ ಇದ್ದಲ್ಲಿ ಪಟ್ಟಣ ಪಂಚಾಯತಿ. ಒಂದು ಪ್ರತ್ಯೇಕ ಸಮಿತಿಯ ಆಡಳಿತಕ್ಕೊಳಪಟ್ಟಿರುವಂತಹ ಪ್ರದೇಶಗಳಿಗೆ ಅಧಿಸೂಚಿತ ಪ್ರದೇಶ ಸಮಿತಿ ಎಂದು ಕರೆಯಲಾಗುತ್ತದೆ.

[3] ಜನಸಂಖ್ಯೆಯು 50,000ಕ್ಕಿಂತ ಕಡಿಮೆ ಇದ್ದರೂ ಸಹ ಮಡಿಕೇರಿಯು ಜಿಲ್ಲಾ ಕೇಂದ್ರವಾಗಿರುವುದರಿಂದ ನಗರ ಸಭೆಯೆಂದು ಪ್ರಕಟಿಸಲಾಗಿದೆ. ಹಾಗೆಯೇ ಜನಸಂಖ್ಯೆ 10,000ಕ್ಕಿಂತ ಕಡಿಮೆಯಿರುವ 10 ತಾಲ್ಲೂಕು ಕೇಂದ್ರಗಳನ್ನು ಪಟ್ಟಣ ಪಂಚಾಯಿತಿಗಳೆಂದು ಪ್ರಕಟಿಸಲಾಗಿದೆ.

**ಕೋಷ್ಟಕ–1.1: ಕರ್ನಾಟಕ ರಾಜ್ಯದಲ್ಲಿನ ಪ್ರವರ್ಗವಾರು ನಗರ ಸ್ಥಳೀಯ ಸಂಸ್ಥೆಗಳು**

| ನಗರ ಸ್ಥಳೀಯ ಸಂಸ್ಥೆಯ ಪ್ರವರ್ಗ | ನಗರ ಸ್ಥಳೀಯ ಸಂಸ್ಥೆಗಳ ಸಂಖ್ಯೆ |
|---|---|
| ಮಹಾನಗರ ಪಾಲಿಕೆಗಳು (ಸಿಸಿ) | 11 |
| ನಗರ ಸಭೆಗಳು (ಸಿಎಮ್‌ಸಿ) | 58 |
| ಪುರಸಭೆಗಳು (ಟಿಎಮ್‌ಸಿ) | 115 |
| ಪಟ್ಟಣ ಪಂಚಾಯತಿಗಳು (ಟಿಪಿ) | 92 |
| ಅಧಿಸೂಚಿತ ಪ್ರದೇಶ ಸಮಿತಿಗಳು (ಎನ್‌ಎಸಿ) | 04 |
| **ಒಟ್ಟು** | **280** |

ಆಧಾರ*:* ನಗರಾಭಿವೃದ್ಧಿ ಇಲಾಖೆಯ 2018–19ರ ವಾರ್ಷಿಕ ಆಡಳಿತಾತ್ಮಕ ವರದಿ

ಮಹಾನಗರ ಪಾಲಿಕೆಗಳು ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ, 1976 ಹಾಗೂ ಇತರೆ ನಗರ ಸ್ಥಳೀಯ ಸಂಸ್ಥೆಗಳು ಕರ್ನಾಟಕ ಪುರಸಭೆ ಅಧಿನಿಯಮ, 1964ರ ಪ್ರಕಾರ ಕಾರ್ಯ ನಿರ್ವಹಿಸುತ್ತವೆ. ಪ್ರತಿಯೊಂದು ನಗರ ಪಾಲಿಕೆ/ಸ್ಥಳೀಯ ಸಂಸ್ಥೆಯ ಪ್ರದೇಶವನ್ನು ವಾರ್ಡ್‌ಗಳನ್ನಾಗಿ ವಿಭಜಿಸಲಾಗಿದೆ. ರಾಜ್ಯ ಸರ್ಕಾರವು ಕೌನ್ಸಿಲರ್‌ಗಳ ಚುನಾವಣೆಯ ಸಲುವಾಗಿ ಇವುಗಳನ್ನು ನಿರ್ಣಯಿಸಿ ಪ್ರಕಟಿಸುತ್ತದೆ. ಅಧಿಸೂಚಿತ ಪ್ರದೇಶಗಳನ್ನು ಹೊರತುಪಡಿಸಿ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ಚುನಾಯಿತರಾದ ಕಾರ್ಪೋರೇಟರ್/ಕೌನ್ಸಿಲರ್‌ಗಳನ್ನು ಒಳಗೊಂಡ ಒಂದು ಸಂಸ್ಥೆಯನ್ನು ಹೊಂದಿರುತ್ತದೆ. ಅಧಿಸೂಚಿತ ಪ್ರದೇಶಗಳು ಜಿಲ್ಲಾಧಿಕಾರಿಗಳ ನಿಯಂತ್ರಣದಲ್ಲಿರುವ ಸಮಿತಿಯೊಂದರಿಂದ ಆಡಳಿತಕ್ಕೆ ಒಳಪಡಿರುತ್ತವೆ.

## 1.4 ಕರ್ನಾಟಕದಲ್ಲಿ ನಗರಾಡಳಿತದ ಸಾಂಸ್ಥಿಕ ರಚನೆ

ನಗರಾಭಿವೃದ್ಧಿ ಇಲಾಖೆಯು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ನೇತೃತ್ವ ಹೊಂದಿದ್ದು, ಎಲ್ಲಾ ಸ್ಥಳೀಯ ಸಂಸ್ಥೆಗಳ ಆಡಳಿತಕ್ಕೆ ಸಂಪರ್ಕಸೇತು ಇಲಾಖೆಯಾಗಿದೆ. ಡಿಸೆಂಬರ್ 1984ರಲ್ಲಿ ಸ್ಥಾಪಿತವಾದ ಪೌರಾಡಳಿತ ನಿರ್ದೇಶನಾಲಯವು, ನಗರಾಭಿವೃದ್ಧಿ ಇಲಾಖೆಯಡಿ ನೇರವಾಗಿ ಕಾರ್ಯ ನಿರ್ವಹಿಸುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು (ಬಿಬಿಎಮ್‌ಪಿ) ಹೊರತುಪಡಿಸಿ, ರಾಜ್ಯ ಸರ್ಕಾರ ಮತ್ತು ನಗರ ಸ್ಥಳೀಯ ಸಂಸ್ಥೆಗಳ ನಡುವೆ ಸಂಪರ್ಕಸೇತುವಾಗಿ ಕೆಲಸ ಮಾಡುತ್ತದೆ. ಕರ್ನಾಟಕ ಪುರಸಭೆಗಳ ಅಧಿನಿಯಮದಲ್ಲಿ ಕೊಟ್ಟಿರುವ ಅಧಿಕಾರದ ಪ್ರಕಾರವಾಗಿ, ಪೌರಾಡಳಿತ ನಿರ್ದೇಶನಾಲಯವು (ಡಿಎಮ್‌ಎ) ಪ್ರತಿದಿನ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ವರದಿ ಮಾಡಿಕೊಳ್ಳುವ ಯೋಜನಾ ನಿರ್ದೇಶಕರ ನೇತೃತ್ವ ಹೊಂದಿರುವ ಜಿಲ್ಲಾ ನಗರಾಭಿವೃದ್ಧಿ ಕೋಶಗಳ ಜಾಲದ ಮುಖಾಂತರ ನಗರ ಸ್ಥಳೀಯ ಸಂಸ್ಥೆಗಳ ಮೇಲ್ವಿಚಾರಣೆ ಮಾಡುತ್ತದೆ. ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಗರ ಸ್ಥಳೀಯ ಸಂಸ್ಥೆಗಳ ಸಾಂಸ್ಥಿಕ ರಚನೆಯನ್ನು **ಅನುಬಂಧ–1.1**ರಲ್ಲಿ ನೀಡಲಾಗಿದೆ.

ನಗರ ಸ್ಥಳೀಯ ಸಂಸ್ಥೆಗಳ ಜೊತೆಗೆ, ನಗರಾಭಿವೃದ್ಧಿ ಇಲಾಖೆಯ ಅಧೀನದಲ್ಲಿರುವ ಪ್ರಮುಖ ಅಂಗ ಸಂಸ್ಥೆಗಳಾದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಕೆಯುಡಬ್ಲ್ಯೂಎಸ್ ಮತ್ತು ಡಿಬಿ), ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಹಣಕಾಸು ನಿಗಮ (ಕೆಯುಐಡಿಎಫ್‌ಸಿ), 31 ನಗರಾಭಿವೃದ್ಧಿ ಪ್ರಾಧಿಕಾರಗಳು (ಯುಡಿಎಗಳು), 52 ನಗರ ಯೋಜನಾ ಪ್ರಾಧಿಕಾರಗಳು (ಟಿಪಿಎಗಳು), ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯೂಎಸ್‌ಎಸ್‌ಬಿ), ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಹಾಗೂ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಬಿಎಮ್‌ಆರ್‌ಡಿಎ) ನಗರದ ಮೂಲಸೌಕರ್ಯ ಮತ್ತು ಸೇವೆಗಳನ್ನು ಒದಗಿಸುವಲ್ಲಿ ನೆರವಾಗಿದ್ದವು. ವಸತಿ, ಕೈಗಾರಿಕ ಮತ್ತು ವಾಣಿಜ್ಯ ಹಾಗೂ ಸಾರಿಗೆ ಇಲಾಖೆಗಳ ಅಂಗ ಸಂಸ್ಥೆಗಳಾದ ಅನುಕ್ರಮವಾಗಿ ಕರ್ನಾಟಕ ಕೊಳಚೆಪ್ರದೇಶ ಅಭಿವೃದ್ಧಿ ಮಂಡಳಿ (ಕೆಎಸ್‌ಡಿಬಿ), ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಮತ್ತು ರಾಜ್ಯ ರಸ್ತೆ ಸಾರಿಗೆ ನಿಗಮಗಳು ಅನುಕ್ರಮವಾಗಿ ಕೂಡ ನಗರ ಸೇವೆಗಳನ್ನು ಒದಗಿಸುತ್ತಿದ್ದವು. ಅಂಗಸಂಸ್ಥೆಗಳ ಹಾಗೂ ಅವುಗಳ ಕಾರ್ಯಗಳನ್ನು **ಅನುಬಂಧ–1.2**ರಲ್ಲಿ ನೀಡಲಾಗಿದೆ.

# 2 ಅಧ್ಯಾಯ II
## *ಲೆಕ್ಕಪರಿಶೋಧನಾ ಚೌಕಟ್ಟು*

## 2.1 ಲೆಕ್ಕಪರಿಶೋಧನಾ ಉದ್ದೇಶಗಳು

ಈ ಕೆಳಗಿನವುಗಳನ್ನು ಖಚಿತಪಡಿಸುವುದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಉದ್ದೇಶಗಳಾಗಿದ್ದವು:

- 74ನೇ ಸಂವಿಧಾನ ತಿದ್ದುಪಡಿ ಕಾಯ್ದೆಯ ನಿಬಂಧನೆಗಳನ್ನು ರಾಜ್ಯ ಶಾಸನಗಳಲ್ಲಿ ಸಮರ್ಪಕವಾಗಿ ಅಳವಡಿಸಲಾಗಿದೆಯೇ?
- ಸೂಕ್ತವಾಗಿ ವಿನ್ಯಾಸಗೊಳಿಸಲಾದ ಸಂಸ್ಥೆಗಳು/ಸಾಂಸ್ಥಿಕ ವ್ಯವಸ್ಥೆ ಮತ್ತು ಅದರ ಕಾರ್ಯಚಟುವಟಿಕೆಗಳ ಮೂಲಕ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಪ್ರಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ರಾಜ್ಯ ಸರ್ಕಾರವು ಅಧಿಕಾರ ನೀಡಿತ್ತೇ?
- ನಗರ ಸ್ಥಳೀಯ ಸಂಸ್ಥೆಗಳಿಗೆ ತಮ್ಮ ಪ್ರಕಾರ್ಯಗಳಿಗೆ ಅನುಗುಣವಾಗಿ ಹಣಕಾಸಿನ ಸಂಪನ್ಮೂಲಗಳನ್ನು ಸಂಗ್ರಹಿಸಲು ಅವಕಾಶ ಮತ್ತು ಅಧಿಕಾರವಿದೆಯೇ?
- ನಗರ ಸ್ಥಳೀಯ ಸಂಸ್ಥೆಗಳಿಗೆ ತಮ್ಮ ಪ್ರಕಾರ್ಯಗಳಿಗೆ ಅನುಗುಣವಾಗಿ ಮಾನವ ಸಂಪನ್ಮೂಲವನ್ನು ಸಜ್ಜುಗೊಳಿಸಲು ಮತ್ತು ಪ್ರೋತ್ಸಾಹಿಸಲು ಅಧಿಕಾರವಿದೆಯೇ?

## 2.2 ಲೆಕ್ಕಪರಿಶೋಧನಾ ಮಾನದಂಡಗಳು

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಾಗಿ ಕೆಳಗಿನವುಗಳು ಮಾನದಂಡಗಳಾಗಿದ್ದವು.

- ✓ ಸಂವಿಧಾನದ (74ನೇ) ತಿದ್ದುಪಡಿ ಕಾಯ್ದೆ, 1992;
- ✓ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ, 1976 (ಕೆಎಮ್‌ಸಿ ಅಧಿನಿಯಮ);
- ✓ ಕರ್ನಾಟಕ ಪುರಸಭೆಗಳ ಅಧಿನಿಯಮ, 1964 (ಕೆಎಮ್ ಅಧಿನಿಯಮ):
- ✓ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961;
- ✓ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಿಗಳ ಅಧಿನಿಯಮ, 1983;
- ✓ ಮಾದರಿ ಪೌರಸಂಸ್ಥೆಗಳ ಕಾಯ್ದೆ, 2003;
- ✓ ಕರ್ನಾಟಕ ಪೌರಸಂಸ್ಥೆಗಳ ಲೆಕ್ಕಪತ್ರ ವ್ಯವಸ್ಥೆ ಮತ್ತು ಆಯವ್ಯಯ ತಯಾರಿಕೆ ನಿಯಮಗಳು, 2006;
- ✓ ಕೇಂದ್ರ ಸಾರ್ವಜನಿಕ ಆರೋಗ್ಯ ಮತ್ತು ಪರಿಸರ ತಾಂತ್ರಿಕ ಸಂಸ್ಥೆಯ ಕೈಪಿಡಿ;
- ✓ ಕೇಂದ್ರ/ರಾಜ್ಯ ಹಣಕಾಸು ಆಯೋಗಗಳ ವರದಿಗಳು;
- ✓ ಎರಡನೇ ಆಡಳಿತಾತ್ಮಕ ಸುಧಾರಣೆಗಳ ಆಯೋಗದ ವರದಿ; ಮತ್ತು
- ✓ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಆದೇಶಗಳು, ಅಧಿಸೂಚನೆಗಳು, ಸುತ್ತೋಲೆಗಳು ಮತ್ತು ಸೂಚನೆಗಳು

## 2.3 ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಏಪ್ರಿಲ್ 2014ರಿಂದ ಮಾರ್ಚ್ 2019ರ ಅವಧಿಗೆ ಎರಡು ಹಂತಗಳಲ್ಲಿ ಏಪ್ರಿಲ್‌ನಿಂದ ನವೆಂಬರ್ 2019ರವರೆಗೆ ನಡೆಸಲಾಯಿತು. ಮೊದಲನೇ ಹಂತದಲ್ಲಿ ಸಂವಿಧಾನ ತಿದ್ದುಪಡಿಯನ್ನು ರಾಜ್ಯ ಸರ್ಕಾರವು ಅನುಷ್ಠಾನಗೊಳಿಸಿರುವುದರ ಹಾಗೂ ಅಂಗಸಂಸ್ಥೆಗಳ ಲೆಕ್ಕಪರಿಶೋಧನೆಯನ್ನು ಒಳಗೊಂಡಿತ್ತು ಮತ್ತು ಎರಡನೇ ಹಂತದಲ್ಲಿ ಎಲ್ಲಾ ವರ್ಗಗಳನ್ನು ಒಳಗೊಂಡ 44 ನಗರ ಸ್ಥಳೀಯ ಸಂಸ್ಥೆಗಳು ಮತ್ತು 11 ಪ್ರಕಾರ್ಯಗಳನ್ನು ಪರೀಕ್ಷಾ–ತನಿಖೆ ಮಾಡಲಾಯಿತು. ಪ್ರತಿಯೊಂದು ವರ್ಗದ ನಗರ ಸ್ಥಳೀಯ ಸಂಸ್ಥೆಗಳಿಗೂ ಅನ್ವಯಿಸುವ 2011ರ ಜನಗಣತಿಯ ಆಧಾರದ ಮೇಲೆ ಸರಳ ಯಾದೃಚ್ಛಿಕ ಪದ್ಧತಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳನ್ನು ಆಯ್ಕೆ ಮಾಡಲಾಯಿತು. ಆಯ್ಕೆಯಾದ ನಗರ ಸ್ಥಳೀಯ ಸಂಸ್ಥೆಗಳ ಪಟ್ಟಿಯನ್ನು **ಅನುಬಂಧ–2.1**ರಲ್ಲಿ ತೋರಿಸಲಾಗಿದೆ. 12ನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ 18 ಪ್ರಕಾರ್ಯಗಳ ಪೈಕಿ ಈ ಕೆಳಗಿನ 11 ಪ್ರಕಾರ್ಯಗಳನ್ನು ಪರೀಕ್ಷಾ–ತನಿಖೆಗೆ ಆಯ್ಕೆ ಮಾಡಲಾಯಿತು.

i) ಪಟ್ಟಣ ಯೋಜನೆ ಒಳಗೊಂಡಂತೆ ನಗರ ಯೋಜನೆ;

ii) ಭೂಬಳಕೆ ನಿಯಂತ್ರಣ ಮತ್ತು ಕಟ್ಟಡಗಳ ನಿರ್ಮಾಣ;

iii) ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಯೋಜನೆಗಳು;

iv) ರಸ್ತೆ ಮತ್ತು ಸೇತುವೆಗಳು;

v) ಗೃಹಬಳಕೆ, ಕೈಗಾರಿಕೆ ಮತ್ತು ವಾಣಿಜ್ಯ ಉದ್ದೇಶಗಳಿಗಾಗಿ ನೀರು ಸರಬರಾಜು;

vi) ಸಾರ್ವಜನಿಕ ಆರೋಗ್ಯ, ನೈರ್ಮಲ್ಯ ಸಂರಕ್ಷಣೆ ಮತ್ತು ಘನತ್ಯಾಜ್ಯ ನಿರ್ವಹಣೆ;

vii) ವಿಕಲಚೇತನ ಮತ್ತು ಬುದ್ಧಿಮಾಂದ್ಯರನ್ನು ಒಳಗೊಂಡಂತೆ ಸಮಾಜದ ದುರ್ಬಲ ವರ್ಗದವರ ಹಿತಾಸಕ್ತಿಯನ್ನು ಕಾಪಾಡುವುದು;

viii) ಕೊಳೆಗೇರಿಗಳ ಸುಧಾರಣೆ ಮತ್ತು ಮೇಲ್ದರ್ಜೆಗೇರಿಸುವುದು;

ix) ನಗರ ಬಡತನ ನಿರ್ಮೂಲನೆ;

x) ಉದ್ಯಾನವನಗಳು, ತೋಟಗಳು, ಆಟದ ಮೈದಾನಗಳಂತಹ ನಗರ ಸೌಲಭ್ಯ ಮತ್ತು ಸೌಕರ್ಯಗಳನ್ನು ಒದಗಿಸುವುದು;

xi) ಬೀದಿ ದೀಪ, ವಾಹನ ನಿಲುಗಡೆ ಸ್ಥಳಗಳು, ಬಸ್ ನಿಲ್ದಾಣ, ಸಾರ್ವಜನಿಕ ಶೌಚಾಲಯದಂತಹ ಮೂಲ ಸೌಲಭ್ಯಗಳನ್ನು ಒದಗಿಸುವುದು.

2 ಏಪ್ರಿಲ್ 2019 ರಂದು ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯೊಂದಿಗೆ ನಡೆಸಿದ ಪ್ರವೇಶ ಸಭೆಯಲ್ಲಿ ಲೆಕ್ಕಪರಿಶೋಧನಾ ವಿಧಾನ, ವ್ಯಾಪ್ತಿ, ಉದ್ದೇಶಗಳು ಮತ್ತು ಮಾನದಂಡಗಳನ್ನು ವಿವರಿಸಲಾಯಿತು. ಕೊರೊನಾ ಸರ್ವವ್ಯಾಪಿ ವ್ಯಾಧಿಯಿಂದಾಗಿ ಇಲಾಖೆಯ ಮುಖ್ಯ ಅಧಿಕಾರಿಗಳು ತಮ್ಮನ್ನು ತಾವು ಕ್ವಾರಂಟೀನ್ ಮಾಡಿಕೊಂಡಿದ್ದರಿಂದ, 17 ಜುಲೈ 2020ರಂದು ನಿರ್ಗಮನ ಸಭೆಯನ್ನು ನಿಗಧಿಪಡಿಸಲಾಗಿದ್ದರೂ ನಡೆಸಲಾಗಲಿಲ್ಲ. ಇಲಾಖಾ ಉತ್ತರಗಳು ಎಲ್ಲಿಯಾದರೂ ಸ್ವೀಕೃತವಾದಲ್ಲಿ ಅವುಗಳನ್ನು ಈ ವರದಿಯಲ್ಲಿ ಗಣನೆಗೆ ತಗೆದುಕೊಳ್ಳಲಾಗಿದೆ. ಲೆಕ್ಕಪರಿಶೋಧನೆಯ ವಿಧಾನವು ದಾಖಲೆಗಳ ವಿಶ್ಲೇಷಣೆ ಮತ್ತು ಲೆಕ್ಕಪರಿಶೋಧನಾ ಪ್ರಶ್ನೆಗಳಿಗೆ ಪ್ರತಿಕ್ರಿಯೆಗಳನ್ನು ಒಳಗೊಂಡಿತ್ತು.

## 2.4 ಕೃತಜ್ಞತೆ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸುವುದಕ್ಕಾಗಿ ರಾಜ್ಯ ಸರ್ಕಾರ, ಪೌರಾಡಳಿತ ನಿರ್ದೇಶನಾಲಯ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಹಣಕಾಸು ನಿಗಮ, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ, ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ಮತ್ತು ಪರೀಕ್ಷಾ–ತನಿಖೆ ನಡೆಸಲಾದ ಸ್ಥಳೀಯ ಸಂಸ್ಥೆಗಳು ನೀಡಿದ ಸಹಕಾರ ಮತ್ತು ಸಹಾಯಕ್ಕಾಗಿ ಲೆಕ್ಕಪರಿಶೋಧನೆಯು ಕೃತಜ್ಞತೆಯನ್ನು ಸಲ್ಲಿಸುತ್ತದೆ. ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಅಂತಿಮಗೊಳಿಸಲು ನೆರವಾದ ಜನಾಗ್ರಹ ಸೆಂಟರ್ ಫಾರ್ ಸಿಟಿಜೆನ್‌ಷಿಪ್ ಅಂಡ್ ಡೆಮೋಕ್ರಾಸಿ ಸಂಸ್ಥೆಗೂ ಸಹ ಲೆಕ್ಕಪರಿಶೋಧನೆಯು ಕೃತಜ್ಞತೆಯನ್ನು ಸಲ್ಲಿಸುತ್ತದೆ.

## 2.5 ಲೆಕ್ಕಪರಿಶೋಧನಾ ಅಂಶಗಳ ಸಂಯೋಜನೆ

ಪ್ರಕಾರ್ಯಗಳು, ನಿಧಿಗಳು ಮತ್ತು ಸಿಬ್ಬಂದಿಗಳನ್ನು ವರ್ಗಾಯಿಸುವಲ್ಲಿ ಕಂಡುಬಂದ ಲೆಕ್ಕಪರಿಶೋಧನಾ ಅಂಶಗಳನ್ನು ಕೆಳಗಿನ ಅಧ್ಯಾಯಗಳಲ್ಲಿ ಪ್ರಸ್ತುತಪಡಿಸಲಾಗಿದೆ.

ಅಧ್ಯಾಯ III – 74ನೇ ಸಂವಿಧಾನದ ತಿದ್ದುಪಡಿಯ ನಿಬಂಧನೆಗಳ ಅನುಪಾಲನೆ

ಅಧ್ಯಾಯ IV – ನಗರ ಸ್ಥಳೀಯ ಸಂಸ್ಥೆಗಳ ಸಬಲೀಕರಣ ಹಾಗೂ ಅವುಗಳ ಕಾರ್ಯವಿಧಾನ

ಅಧ್ಯಾಯ V – ನಗರ ಸ್ಥಳೀಯ ಸಂಸ್ಥೆಗಳ ಹಣಕಾಸಿನ ಸಂಪನ್ಮೂಲಗಳು

ಅಧ್ಯಾಯ VI – ನಗರ ಸ್ಥಳೀಯ ಸಂಸ್ಥೆಗಳ ಮಾನವ ಸಂಪನ್ಮೂಲಗಳು

ಅಧ್ಯಾಯ VII – ನಿರ್ಣಯ

# 3

# ಅಧ್ಯಾಯ III

## 74ನೇ ಸಂವಿಧಾನ ತಿದ್ದುಪಡಿಯ ನಿಬಂಧನೆಗಳ ಅನುಪಾಲನೆ

### 3.1 ರಾಜ್ಯ ಸರ್ಕಾರದ ಶಾಸನಗಳ ಜೊತೆ 74ನೇ ಸಂವಿಧಾನದ ತಿದ್ದುಪಡಿಗಳ ಹೋಲಿಕೆ

74ನೇ ಸಂವಿಧಾನ ತಿದ್ದುಪಡಿಯು ಅನುಚ್ಛೇದ 243Q ಯಿಂದ 243ZG ವರೆಗೆ ಪೌರಸಂಸ್ಥೆಗಳಿಗೆ ಸಂಬಂಧಿಸಿದಂತೆ ಕೆಲವು ನಿಬಂಧನೆಗಳನ್ನು ಕಲ್ಪಿಸಿದೆ. **ಕೋಷ್ಟಕ–3.1**ರಲ್ಲಿ ತೋರಿಸಿರುವಂತೆ ರಾಜ್ಯ ಸರ್ಕಾರವು ಸಂವಿಧಾನ ತಿದ್ದುಪಡಿಯಲ್ಲಿರುವ ನಿಬಂಧನೆಗಳನ್ನು ಸರಿಹೊಂದುವಂತೆ ಕೆಎಮ್‌ಸಿ/ಕೆಎಮ್ ಅಧಿನಿಯಮಗಳನ್ನು ತಿದ್ದುಪಡಿ ಮಾಡುವ ಮುಖಾಂತರ ನಿಬಂಧನೆಗಳನ್ನು ಜಾರಿಗೊಳಿಸಿದೆ.

**ಕೋಷ್ಟಕ–3.1: ರಾಜ್ಯ ಸರಕಾರದ ಶಾಸನಗಳ ಜೊತೆ 74ನೇ ಸಂವಿಧಾನದ ತಿದ್ದುಪಡಿಗಳ ಹೋಲಿಕೆ**

| ಭಾರತ ಸಂವಿಧಾನದ ನಿಬಂಧನೆಗಳು | ಭಾರತದ ಸಂವಿಧಾನದ ನಿಬಂಧನೆಗಳ ಅನ್ವಯ ಅಗತ್ಯತೆಗಳು | ಕೆಎಮ್‌ಸಿ/ಕೆಮ್ ಅಧಿನಿಯಮ ನಿಬಂಧನೆಗಳು |
|---|---|---|
| ಅನುಚ್ಛೇದ 243Q | **ಪೌರಸಂಸ್ಥೆಗಳ ರಚನೆ:** ಭಾರತದ ಸಂವಿಧಾನವು ಮೂರು ವಿಧದ ಪೌರಸಂಸ್ಥೆಗಳು ಅಂದರೆ ಪರಿವರ್ತನೆ ಹೊಂದುತ್ತಿರುವ ಪ್ರದೇಶಗಳನ್ನು ನಗರ ಪಂಚಾಯತಿ, ಚಿಕ್ಕದಾದ ನಗರ ಪ್ರದೇಶಗಳನ್ನು ನಗರಸಭೆಗಳು ಮತ್ತು ದೊಡ್ಡದಾದ ನಗರ ಪ್ರದೇಶಗಳನ್ನು ಮಹಾನಗರ ಪಾಲಿಕೆಗಳೆಂದು ರಚಿಸುವ ಅವಕಾಶವನ್ನು ನೀಡಿದೆ. | ಕೆಎಮ್‌ಸಿ ಮತ್ತು ಕೆಎಮ್ ಅಧಿನಿಯಮಗಳ ಪರಿಚ್ಛೇದ 3 |
| ಅನುಚ್ಛೇದ 243R | **ಪೌರಸಂಸ್ಥೆಗಳ ಸಂಯೋಜನೆ:** ಪೌರಸಂಸ್ಥೆಯ ಎಲ್ಲಾ ಸ್ಥಾನಗಳನ್ನು ನೇರ ಚುನಾವಣೆಯ ಮೂಲಕ ಮತ್ತು ಪೌರಾಡಳಿತದ ಬಗ್ಗೆ ವಿಶೇಷ ಜ್ಞಾನವುಳ್ಳ ಜನರನ್ನು ರಾಜ್ಯ ಸರ್ಕಾರವು ನಾಮ ನಿರ್ದೇಶನ ಮಾಡುವ ಮೂಲಕ ತುಂಬ ಬಹುದಾಗಿದೆ. ನಗರ ಪ್ರದೇಶದ ವ್ಯಾಪ್ತಿಯೊಳಗೆ ಬರುವ ಲೋಕಸಭಾ ಮತ್ತು ವಿಧಾನ ಸಭೆಯ ಸದಸ್ಯರುಗಳನ್ನು ಹಾಗೂ ಆ ನಗರದ ಮತದಾರರಾಗಿ ನೋಂದಾಯಿಸಿರುವ ರಾಜ್ಯಸಭಾ ಸದಸ್ಯರುಗಳನ್ನು ಮತ್ತು ವಿಧಾನ ಪರಿಷತ್ ಸದಸ್ಯರುಗಳನ್ನು ರಾಜ್ಯ ಸರ್ಕಾರದ ಶಾಸಕಾಂಗ ಸಭೆಯು ಕಾನೂನಿನ ಮೂಲಕ ಪೌರಸಂಸ್ಥೆಗಳ ಸದಸ್ಯರುಗಳಾಗಿ ಪ್ರತಿನಿಧಿಸಲು ಅವಕಾಶ ಕಲ್ಪಿಸಿಕೊಡಬಹುದು. | ಕೆಎಮ್‌ಸಿ ಅಧಿನಿಯಮದ ಪರಿಚ್ಛೇದ 7 ಮತ್ತು ಕೆಎಮ್ ಅಧಿನಿಯಮದ ಪರಿಚ್ಛೇದ 11 |
| ಅನುಚ್ಛೇದ 243S | **ವಾರ್ಡ್ ಸಮಿತಿಯ ರಚನೆ ಮತ್ತು ಸಂಯೋಜನೆ:** ಇದು ಮೂರು ಲಕ್ಷ ಅಥವಾ ಅಧಿಕವಾಗಿ ಜನಸಂಖ್ಯೆ ಹೊಂದಿರುವ ಪೌರಸಂಸ್ಥೆಗಳಲ್ಲಿ ವಾರ್ಡ್ ಸಮಿತಿ ರಚಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಿದೆ. | ಕೆಎಮ್‌ಸಿ ಅಧಿನಿಯಮದ ಪರಿಚ್ಛೇದ 13ಹೆಚ್ |
| ಅನುಚ್ಛೇದ 243T | **ಸ್ಥಾನಗಳ ಮೀಸಲಾತಿ:** ನೇರ ಚುನಾವಣೆಯಲ್ಲಿ ಪರಿಶಿಷ್ಟ ಜಾತಿ (ಪ.ಜಾ), ಪರಿಶಿಷ್ಟ ಪಂಗಡ (ಪ.ಪಂ), ಮಹಿಳೆಯರು ಮತ್ತು ಹಿಂದುಳಿದ ವರ್ಗಗಳಿಗೆ ಸ್ಥಾನಗಳನ್ನು ಮೀಸಲಿಡಬೇಕು. | ಕೆಎಮ್‌ಸಿ ಅಧಿನಿಯಮದ ಪರಿಚ್ಛೇದಗಳು 7(2), (3), (4) ಮತ್ತು ಕೆಎಮ್ ಅಧಿನಿಯಮದ ಪರಿಚ್ಛೇದಗಳು 11(2), (3), (4) |

| ಭಾರತ ಸಂವಿಧಾನದ ನಿಬಂಧನೆಗಳು | ಭಾರತದ ಸಂವಿಧಾನದ ನಿಬಂಧನೆಗಳ ಅನ್ವಯ ಅಗತ್ಯತೆಗಳು | ಕೆಎಮ್‌ಸಿ/ಕೆಮ್ ಅಧಿನಿಯಮ ನಿಬಂಧನೆಗಳು |
|---|---|---|
| ಅನುಚ್ಛೇದ 243U | **ಪೌರಸಂಸ್ಥೆಗಳ ಅವಧಿ:** ಪೌರಸಂಸ್ಥೆಗಳಿಗೆ ತಮ್ಮ ಮೊದಲನೇ ಸಭೆಯಿಂದ ಐದು ವರ್ಷಗಳ ನಿಶ್ಚಿತ ಅವಧಿ ಇರತಕ್ಕದ್ದು ಹಾಗೂ ಅವಧಿ ಮುಗಿದ ಆರು ತಿಂಗಳೊಳಗಾಗಿ ಮರು ಚುನಾವಣೆಯನ್ನು ನಡೆಸತಕ್ಕದ್ದು. | ಕೆಎಮ್‌ಸಿ ಅಧಿನಿಯಮದ ಪರಿಚ್ಛೇದ 8 ಮತ್ತು ಕೆಎಮ್ ಅಧಿನಿಯಮದ ಪರಿಚ್ಛೇದ 18 |
| ಅನುಚ್ಛೇದ 243V | **ಸದಸ್ಯರಾಗಲು ಅನರ್ಹತೆಗಳು:** ಒಬ್ಬ ವ್ಯಕ್ತಿಯನ್ನು ಪೌರಸಂಸ್ಥೆಯ ಸದಸ್ಯನಾಗಲು ಅನರ್ಹಗೊಳಿಸಬಹುದು<br>• ಆ ವ್ಯಕ್ತಿಯು ಆ ಸಮಯದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಡಿಯಲ್ಲಿ ರಾಜ್ಯ ಶಾಸಕಾಂಗ ಚುನಾವಣೆಗೆ ಸ್ಪರ್ಧಿಸಲು ಅನರ್ಹಗೊಂಡಿದ್ದರೆ,<br>• ರಾಜ್ಯ ಶಾಸಕಾಂಗ ಮಾಡಿರುವ ಯಾವುದೇ ಕಾನೂನಿನಡಿಯಲ್ಲಿ ಆ ವ್ಯಕ್ತಿಯು ಅನರ್ಹಗೊಂಡಿದ್ದರೆ. | ಕೆಎಮ್‌ಸಿ ಅಧಿನಿಯಮದ ಪರಿಚ್ಛೇದ 26 ಮತ್ತು ಕೆಎಮ್ ಅಧಿನಿಯಮದ ಪರಿಚ್ಛೇದ 16 |
| ಅನುಚ್ಛೇದ 243W | **ಪೌರಸಂಸ್ಥೆಗಳ ಅಧಿಕಾರ, ಅಧಿಪತ್ಯ ಮತ್ತು ಜವಾಬ್ದಾರಿಗಳು:** ಎಲ್ಲ ಪೌರಸಂಸ್ಥೆಗಳಿಗೆ ದಕ್ಷತೆಯಿಂದ ಸ್ವಯಂ ಸರ್ಕಾರವನ್ನು ನಿರ್ವಹಿಸಲು ಅವಶ್ಯಕವಿರುವ ಎಲ್ಲಾ ಅಧಿಕಾರವನ್ನು ನೀಡಬೇಕಾಗಿದೆ. ರಾಜ್ಯ ಸರ್ಕಾರವು 12ನೇ ಅನುಸೂಚಿಯಲ್ಲಿರುವ ಪ್ರಕಾರ್ಯಗಳನ್ನು ನಿರ್ವಹಿಸುವ ಸಂಬಂಧವಾಗಿ ಬೇಕಾಗುವ ಅಧಿಕಾರ ಮತ್ತು ಜವಾಬ್ದಾರಿಯನ್ನು ಪೌರಸಂಸ್ಥೆಗಳಿಗೆ ನೀಡಬೇಕು. | ಕೆಎಮ್‌ಸಿ ಅಧಿನಿಯಮದ ಪರಿಚ್ಛೇದ 58 & 59 ಮತ್ತು ಕೆಎಮ್ ಅಧಿನಿಯಮದ ಪರಿಚ್ಛೇದ 87 & 91<br>ಕೆಎಮ್‌ಸಿ ಅಧಿನಿಯಮದ ಪರಿಚ್ಛೇದ 11 ಮತ್ತು ಕೆಎಮ್ ಅಧಿನಿಯಮದ ಪರಿಚ್ಛೇದ 63 |
| ಅನುಚ್ಛೇದ 243X | **ಪೌರಸಂಸ್ಥೆಗಳಿಗೆ ತೆರಿಗೆಗಳನ್ನು ವಿಧಿಸುವ ಅಧಿಕಾರ ಮತ್ತು ಪೌರಸಂಸ್ಥೆಗಳ ನಿಧಿ:**<br>• ತೆರಿಗೆ, ಸುಂಕ, ಶುಲ್ಕ ಇತ್ಯಾದಿಗಳನ್ನು ವಿಧಿಸುವ ಮತ್ತು ಸಂಗ್ರಹಿಸುವ ಅಧಿಕಾರವನ್ನು ಪೌರಸಂಸ್ಥೆಗಳು ಹೊಂದಿರಬೇಕು.<br>• ರಾಜ್ಯ ಸರ್ಕಾರವು ಪೌರಸಂಸ್ಥೆಗಳಿಗೆ ಅನುದಾನವನ್ನು ಬಿಡುಗಡೆ ಮಾಡಬೇಕು.<br>• ಪೌರಸಂಸ್ಥೆಗಳು ಹಣವನ್ನು ಜಮೆ ಮಾಡಲು ಮತ್ತು ಸೆಳೆಯಲು ಒಂದು ನಿಧಿಯನ್ನು ಸ್ಥಾಪಿಸಬೇಕು. | ಕೆಎಮ್‌ಸಿ ಅಧಿನಿಯಮದ ಅಧ್ಯಾಯ X ಮತ್ತು ಕೆಎಮ್ ಅಧಿನಿಯಮದ ಅಧ್ಯಾಯ VI |
| ಅನುಚ್ಛೇದ 243Y ಜೊತೆಗೆ ಅನುಚ್ಛೇದ 243I | **ಹಣಕಾಸು ಆಯೋಗ:** ರಾಜ್ಯ ಸರ್ಕಾರವು ಹಣಕಾಸು ಆಯೋಗವನ್ನು ರಚಿಸಬೇಕಾಗಿರುವುದು<br>• ಪೌರಸಂಸ್ಥೆಗಳ ಹಣಕಾಸಿನ ಪರಿಸ್ಥಿತಿಯನ್ನು ವಿಶ್ಲೇಷಿಸುವುದು ಮತ್ತು ಅವುಗಳ ಹಣಕಾಸಿನ ಸಂಪನ್ಮೂಲಗಳನ್ನು ಉತ್ತಮಪಡಿಸಲು ಕ್ರಮಗಳನ್ನು ರೂಪಿಸುವುದು.<br>• ರಾಜ್ಯ ಸರ್ಕಾರವು ವಿಧಿಸುವ ತೆರಿಗೆಗಳು, ಸುಂಕಗಳು, ಜಕಾತಿ ದರ ಮತ್ತು ಶುಲ್ಕಗಳಿಂದ ಪ್ರಾಪ್ತವಾಗುವ ನಿವ್ವಳ ರಾಜಸ್ವ ಸ್ವೀಕೃತಿಯನ್ನು | ಕೆಎಮ್‌ಸಿ ಅಧಿನಿಯಮದ ಪರಿಚ್ಛೇದ 503ಸಿ ಮತ್ತು ಕೆಎಮ್ ಅಧಿನಿಯಮದ ಪರಿಚ್ಛೇದ 302ಬಿ ಜೊತೆಗೆ ಕೆಪಿಆರ್ ಅಧಿನಿಯಮದ ಪರಿಚ್ಛೇದ 267 |

| ಭಾರತ ಸಂವಿಧಾನದ ನಿಬಂಧನೆಗಳು | ಭಾರತದ ಸಂವಿಧಾನದ ನಿಬಂಧನೆಗಳ ಅನ್ವಯ ಅಗತ್ಯತೆಗಳು | ಕೆಎಮ್‌ಸಿ/ಕೆಮ್ ಅಧಿನಿಯಮ ನಿಬಂಧನೆಗಳು |
|---|---|---|
| | ರಾಜ್ಯ ಸರ್ಕಾರ ಹಾಗೂ ಪೌರಸಂಸ್ಥೆಗಳ ನಡುವೆ ಹಂಚಿಕೆ ಮಾಡುವುದು.<br>• ರಾಜ್ಯದ ಸಂಚಿತ ನಿಧಿಯಿಂದ ಪೌರಸಂಸ್ಥೆಗಳಿಗೆ ಅನುದಾನವನ್ನು ಹಂಚಿಕೆ ಮಾಡುವುದು. | |
| ಅನುಚ್ಛೇದ 243Z | **ಪೌರಸಂಸ್ಥೆಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ:** ಪೌರಸಂಸ್ಥೆಗಳು ಲೆಕ್ಕಪತ್ರಗಳನ್ನು ನಿರ್ವಹಿಸಬೇಕು ಮತ್ತು ಲೆಕ್ಕಪತ್ರಗಳು ಲೆಕ್ಕಪರಿಶೋಧನೆಯಾಗಬೇಕು. | ಕೆಎಮ್‌ಸಿ ಅಧಿನಿಯಮದ ಪರಿಚ್ಛೇದ 150 ಮತ್ತು ಕೆಎಮ್ ಅಧಿನಿಯಮದ ಪರಿಚ್ಛೇದ 290 |
| ಅನುಚ್ಛೇದ 243ZA ಜೊತೆಗೆ ಅನುಚ್ಛೇದ 243K | **ಪೌರಸಂಸ್ಥೆಗಳಿಗೆ ಚುನಾವಣೆ:** ಪೌರಸಂಸ್ಥೆಗಳ ಚುನಾವಣೆಯ ಎಲ್ಲಾ ನಿರ್ವಹಣಾ ವಿಧಾನ ರಾಜ್ಯ ಚುನಾವಣಾ ಆಯೋಗದ ನಿಯಂತ್ರಣ ಮತ್ತು ಮೇಲ್ವಿಚಾರಣೆಯಲ್ಲಿರಬೇಕು. | ಕೆಪಿಆರ್ ಅಧಿನಿಯಮದ ಪರಿಚ್ಛೇದ 308, ಕೆಎಮ್‌ಸಿ ಅಧಿನಿಯಮದ ಪರಿಚ್ಛೇದ 55 ಮತ್ತು ಕೆಎಮ್ ಅಧಿನಿಯಮದ ಪರಿಚ್ಛೇದ 38. |
| ಅನುಚ್ಛೇದ 243 ZD | **ಜಿಲ್ಲಾ ಯೋಜನಾ ಸಮಿತಿ:**<br>• ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಯೋಜನಾ ಸಮಿತಿಗಳನ್ನು ರಚಿಸಬೇಕು.<br>• ಜಿಲ್ಲಾ ಯೋಜನಾ ಸಮಿತಿಗಳ ಸಂಯೋಜನೆ.<br>• ಜಿಲ್ಲಾ ಅಭಿವೃದ್ಧಿ ಯೋಜನೆಯನ್ನು ತಯಾರಿಸಬೇಕು ಮತ್ತು ರಾಜ್ಯ ಸರ್ಕಾರಕ್ಕೆ ಕಳುಹಿಸಬೇಕು. | ಕೆಪಿಆರ್ ಅಧಿನಿಯಮದ ಪರಿಚ್ಛೇದ 310, ಕೆಎಮ್‌ಸಿ ಅಧಿನಿಯಮದ ಪರಿಚ್ಛೇದ 503ಎ ಮತ್ತು ಕೆಎಮ್ ಅಧಿನಿಯಮದ ಪರಿಚ್ಛೇದ 302ಎ |
| ಅನುಚ್ಛೇದ 243ZE | **ಮಹಾನಗರ ಯೋಜನಾ ಸಮಿತಿ:** 10 ಲಕ್ಷ ಅಥವಾ ಅಧಿಕ ಜನಸಂಖ್ಯೆಯುಳ್ಳ ಪ್ರತೀ ಮಹಾನಗರಕ್ಕೆ ಒಂದು ಅಭಿವೃದ್ಧಿ ಯೋಜನೆಯ ಕರಡನ್ನು ಆ ಮಹಾನಗರದ ಇಡೀ ಪ್ರದೇಶಕ್ಕೆ ಸಿದ್ಧಪಡಿಸುವ ಸಲುವಾಗಿ ಮಹಾನಗರ ಯೋಜನಾ ಸಮಿತಿಯನ್ನು ರಚಿಸುವುದು. | ಕೆಎಮ್‌ಸಿ ಅಧಿನಿಯಮದ ಪರಿಚ್ಛೇದ 503ಬಿ |

*ಆಧಾರ: ಕೆಮ್ ಮತ್ತು ಕೆಎಮ್‌ಸಿ ಅಧಿನಿಯಮಗಳು*

ಮೇಲಿನ ಕೋಷ್ಟಕದಲ್ಲಿ ತೋರಿಸಿರುವಂತೆ ಶಾಸನಗಳು 74ನೇ ಸಂವಿಧಾನದ ತಿದ್ದುಪಡಿಯ ನಿಬಂಧನೆಗಳನ್ನು ಅನುಪಾಲನೆ ಮಾಡಿವೆ. ಸಂವಿಧಾನದ ನಿಬಂಧನೆಗಳನ್ನು ಅಧಿನಿಯಮಗಳ ಮೂಲಕ ಅನುಪಾಲನೆ ಮಾಡಿದ್ದಾಗ್ಯೂ ಅದು ಪರಿಣಾಮಕಾರಿಯಾಗಿ ಕಾರ್ಯಗತಗೊಳ್ಳದಿದ್ದರೆ ವಿಕೇಂದ್ರೀಕರಣವು ಪರಿಣಾಮಕಾರಿಯಾಗಿದೆ ಎಂಬುದು ಖಾತ್ರಿಯಾಗುವುದಿಲ್ಲ. ಅಧಿನಿಯಮಗಳ ನಿಬಂಧನೆಗಳು ನಿರ್ಣಯಾತ್ಮಕ ಕ್ರಿಯೆಗಳಿಂದ ಬೆಂಬಲಿಸಿರಲಿಲ್ಲವಾದ್ದರಿಂದ 74ನೇ ತಿದ್ದುಪಡಿಯ ಮೂಲ ಉದ್ದೇಶ ಫಲಪ್ರದವಾಗಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಮುಂದಿನ ಅಧ್ಯಾಯದಲ್ಲಿ ಚರ್ಚಿಸಿದಂತೆ, ಇದು ಪ್ರಮುಖವಾಗಿ ಪ್ರಕಾರ್ಯಗಳನ್ನು ವರ್ಗಾಯಿಸುವುದಕ್ಕೆ ಸಂಬಂಧಪಟ್ಟಂತೆ ಮತ್ತು ವಿಕೇಂದ್ರೀಕರಣವನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ಯುಕ್ತವಾದ ಸಂಸ್ಥೆಗಳ ಕಾರ್ಯವಿಧಾನವನ್ನು ರಚಿಸುವ ವಿಷಯದಲ್ಲಿ ನಿಜವಾಗಿದೆ.

# ಅಧ್ಯಾಯ IV


# 4 ನಗರ ಸ್ಥಳೀಯ ಸಂಸ್ಥೆಗಳ ಸಬಲೀಕರಣ ಹಾಗೂ ಅವುಗಳ ಕಾರ್ಯವಿಧಾನ

## 4.1 ಪ್ರಕಾರ್ಯಗಳ ವಹಿಸುವಿಕೆಯ ವಾಸ್ತವಸ್ಥಿತಿ

74ನೇ ಸಂವಿಧಾನ ತಿದ್ದುಪಡಿಯು 12ನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ 18 ವಿಷಯಗಳಿಗೆ ಸಂಬಂಧಿಸಿದಂತೆ ನಗರ ಸ್ಥಳೀಯ ಸಂಸ್ಥೆಗಳು ಪ್ರಕಾರ್ಯಗಳನ್ನು ನಿರ್ವಹಿಸಲು ಮತ್ತು ಯೋಜನೆಗಳನ್ನು ಕಾರ್ಯಗತಗೊಳಿಸಲು ಅಧಿಕಾರವನ್ನು ಹೊಂದಬೇಕಾಗಿರುತ್ತದೆ. ಕೆಎಮ್‌ಸಿ/ಕೆಎಮ್ ಅಧಿನಿಯಮಗಳಿಗೆ ತಿದ್ದುಪಡಿ ಮಾಡುವ ಮೂಲಕ ರಾಜ್ಯ ಸರ್ಕಾರವು 18 ಪ್ರಕಾರ್ಯಗಳಲ್ಲಿ, ಅಗ್ನಿಶಾಮಕ ಸೇವೆಯನ್ನು ಹೊರತು ಪಡಿಸಿ, ಉಳಿದ 17ನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಿತ್ತು. **ಕೋಷ್ಟಕ 4.1**ರಲ್ಲಿ ಸೂಚಿಸಿರುವಂತೆ 17 ಪ್ರಕಾರ್ಯಗಳ ಪೈಕಿ ಮಹಾನಗರ ಪಾಲಿಕೆಗಳಲ್ಲಿ 12 ಕಡ್ಡಾಯ ಮತ್ತು 5 ವಿವೇಚನಾತ್ಮಕವಾಗಿದ್ದವು ಮತ್ತು ಇತರೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇದು ಅನುಕ್ರಮವಾಗಿ 11 ಮತ್ತು 6 ಆಗಿತ್ತು.

ಹಲವಾರು ಪ್ರಕಾರ್ಯಗಳ ನಿರ್ವಹಣೆಯು ನಗರ ಸ್ಥಳೀಯ ಸಂಸ್ಥೆಗಳ ಜೊತೆಯಲ್ಲಿ ಅಂಗಸಂಸ್ಥೆಗಳು / ಸರ್ಕಾರಿ ಇಲಾಖೆಗಳು ಮಾಡುತ್ತಿದ್ದನ್ನು ಲೆಕ್ಕಪರಿಶೋಧನೆಯು ಗಮನಿಸಿತು. 17 ಪ್ರಕಾರ್ಯಗಳಲ್ಲಿ, ಮೂರು ಪ್ರಕಾರ್ಯಗಳಲ್ಲಿ ಮಾತ್ರ ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಪೂರ್ಣ ಜವಾಬ್ದಾರಿ ಇದ್ದಿತು; ಎರಡು ಪ್ರಕಾರ್ಯಗಳಲ್ಲಿ ಯಾವುದೇ ಪಾತ್ರವಿರಲಿಲ್ಲ, ಎಂಟು ಪ್ರಕಾರ್ಯಗಳಲ್ಲಿ ಸೀಮಿತ ಪಾತ್ರವಿದ್ದಿತು, ಮೂರು ಪ್ರಕಾರ್ಯಗಳಲ್ಲಿ ಕೇವಲ ಅನುಷ್ಠಾನ ಸಂಸ್ಥೆಗಳಾಗಿದ್ದವು ಹಾಗೂ ಒಂದು ಪ್ರಕಾರ್ಯಕ್ಕೆ ಸಂಬಂಧಿಸಿದಂತೆ ಅವುಗಳು ತಮ್ಮ ವ್ಯಾಪ್ತಿಯಲ್ಲಿ ಜವಾಬ್ದಾರರಾಗಿದಾಗಿಯೂ, ಅನುಷ್ಠಾನ ಸಂಸ್ಥೆಗಳಾಗಿಯೂ ಅವುಗಳು ಕಾರ್ಯ ನಿರ್ವಹಿಸುತ್ತಿದ್ದವು. ನಗರ ಸ್ಥಳೀಯ ಸಂಸ್ಥೆಗಳ ಪ್ರಕಾರ್ಯವಾರು ಪಾತ್ರವನ್ನು **ಚಿತ್ರ 4.1**ರಲ್ಲಿ ಚಿತ್ರಿಸಲಾಗಿದೆ.

**ಚಿತ್ರ *4.1:* ಪ್ರಕಾರ್ಯವಾರು ನಗರ ಸ್ಥಳೀಯ ಸಂಸ್ಥೆಗಳ ಪಾತ್ರ**




ವಿವಿಧ ಪ್ರಾಧಿಕಾರಗಳಿಂದ ವರ್ಗಾಯಿಸಲಾದ ಪ್ರಕಾರ್ಯಗಳ ವಾಸ್ತವಿಕ ಅನುಷ್ಠಾನ ಹಾಗೂ ಇತರರ ಜೊತೆಯಲ್ಲಿ ನಿರ್ವಹಿಸಗೊಳ್ಳುತ್ತಿರುವ ಪ್ರಕಾರ್ಯಗಳನ್ನು **ಕೋಷ್ಟಕ–4.1**ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ–*4.1:* ಪ್ರಕಾರ್ಯಗಳ ಅನುಷ್ಠಾನದ ವಾಸ್ತವಿಕ ಸ್ಥಿತಿಯನ್ನು ತೋರಿಸುವ ತಃಖ್ತೆ**

| ಕ್ರಮ ಸಂಖ್ಯೆ | ಪ್ರಕಾರ್ಯಗಳು ಕಡ್ಡಾಯ (ಕ)/ ವಿವೇಚನಾತ್ಮಕ (ವಿ) | ಚಟುವಟಿಕೆಗಳು | ಅನುಷ್ಠಾನದ ವಾಸ್ತವಿಕ ಸ್ಥಿತಿ |
|---|---|---|---|
| **ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಪೂರ್ಣ ಕಾರ್ಯವ್ಯಾಪ್ತಿಯಿರುವ ಪ್ರಕಾರ್ಯಗಳು** | | | |
| 1 | ಶವಗಳನ್ನು ಹೂಳುವುದು ಮತ್ತು ಸ್ಮಶಾನಗಳು; ಶವಗಳ ದಹನ, ರುದ್ರಭೂಮಿ **(ಕ)** | ಶವಾಗಾರ, ಸ್ಮಶಾನ ಮತ್ತು ವಿದ್ಯುತ್ ಶವಾಗಾರಗಳ ನಿರ್ಮಾಣ ಹಾಗೂ ಕಾರ್ಯಾಚರಣೆ ಮತ್ತು ನಿರ್ವಹಣೆ | ನಗರ ಸ್ಥಳೀಯ ಸಂಸ್ಥೆಗಳು ಈ ಪ್ರಕಾರ್ಯವನ್ನು ಮಾಡಲು ಸಂಪೂರ್ಣ ಜವಾಬ್ದಾರರು. |
| 2 | ದನಗಳ ದೊಡ್ಡಿ, ಪ್ರಾಣಿ ಹಿಂಸೆಯನ್ನು ತಡೆಯುವುದು **(ಕ)** | ಅಲೆದಾಡುವುಗಳನ್ನು ಹಿಡಿಯುವುದು ಮತ್ತು ಕೂಡಿ ಹಾಕುವುದು | ನಗರ ಸ್ಥಳೀಯ ಸಂಸ್ಥೆಗಳು ಈ ಪ್ರಕಾರ್ಯವನ್ನು ಮಾಡಲು ಸಂಪೂರ್ಣ ಜವಾಬ್ದಾರರು |
| | | ಗರ್ಭನಿರೋಧಕ ಮತ್ತು ರೇಬಿಸ್ ರೋಗನಿರೋಧಕ ಕೊಡುವುದು | |
| | | ಪ್ರಾಣಿಗಳ ಸುರಕ್ಷತೆಯನ್ನು ಖಾತರಿಪಡಿಸುವುದು | |
| 3 | ಕಸಾಯಿಖಾನೆಗಳ ಹಾಗೂ ಚರ್ಮ ಹದ ಮಾಡುವ ಕಾರ್ಖಾನೆಗಳ ನಿಯಂತ್ರಣ **(ಕ)** | ಪ್ರಾಣಿಗಳ ಮತ್ತು ಮಾಂಸದ ಗುಣಮಟ್ಟವನ್ನು ಖಚಿತಪಡಿಸುವುದು | ನಗರ ಸ್ಥಳೀಯ ಸಂಸ್ಥೆಗಳು ಈ ಪ್ರಕಾರ್ಯವನ್ನು ಮಾಡಲು ಸಂಪೂರ್ಣ ಜವಾಬ್ದಾರರು |
| | | ತ್ಯಾಜ್ಯದ ವಿಲೇವಾರಿ | |
| | | ಕಸಾಯಿಖಾನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆ | |
| **ನಗರ ಸ್ಥಳೀಯ ಸಂಸ್ಥೆಗಳಿಗೆ ಪಾತ್ರವಿರದ ಪ್ರಕಾರ್ಯಗಳು** | | | |
| 4 | ಪಟ್ಟಣ ಯೋಜನೆ ಒಳಗೊಂಡಂತೆ ನಗರ ಯೋಜನೆ **(ಕ)** | ಮಾಸ್ಟರ್‌ಪ್ಲಾನ್/ಅಭಿವೃದ್ಧಿ ಯೋಜನೆಗಳು/ವಲಯ ಯೋಜನೆಗಳನ್ನು ತಯಾರಿಸುವುದು | ನಗರಾಭಿವೃದ್ಧಿ/ ನಗರ ಯೋಜನಾ ಪ್ರಾಧಿಕಾರಗಳು ಮಾಸ್ಟರ್‌ಪ್ಲಾನ್ ಸಿದ್ಧಪಡಿಸುತಿದ್ದವು. ನಗರ ಸ್ಥಳೀಯ ಸಂಸ್ಥೆಗಳ ಸದಸ್ಯರು ಮತ್ತು ಕಾರ್ಯನಿರ್ವಹಣಾ ಮುಖ್ಯಸ್ಥರನ್ನು ಯೋಜನಾ ಪ್ರಾಧಿಕಾರಕ್ಕೆ ನಾಮಕರಣ ಮಾಡಲಾಗುತ್ತದೆ. |
| | | ಮಾಸ್ಟರ್‌ಪ್ಲಾನ್ ನಿಯಮಗಳನ್ನು ಜಾರಿಗೊಳಿಸುವುದು | ನಗರಾಭಿವೃದ್ಧಿ/ ನಗರ ಯೋಜನಾ ಪ್ರಾಧಿಕಾರಗಳಿಂದ ಜಾರಿಗೊಳಿಸಲಾಗುವುದು. |
| | | ಕಟ್ಟಡಗಳ ಉಪ ಕಾನೂನುಗಳನ್ನು ಮತ್ತು ಪರವಾನಗಿಗಳನ್ನು ಜಾರಿಗೊಳಿಸುವುದು | ನಗರ ಸ್ಥಳೀಯ ಸಂಸ್ಥೆಗಳ ಪಾತ್ರ ಕಟ್ಟಡಗಳ ಪರವಾನಗಿ ವಿತರಿಸುವುದು ಮತ್ತು ನವೀಕರಿಸುವುದಕ್ಕೆ ಸೀಮಿತವಾಗಿತ್ತು. |
| | | ಸಮೂಹ ವಸತಿ, ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ | ಸಮೂಹ ವಸತಿಗಳಿಗಾಗಿ ಫಲಾನುಭವಿಗಳನ್ನು ಗುರುತಿಸುವುದು ನಗರ ಸ್ಥಳೀಯ ಸಂಸ್ಥೆಗಳ ಕಾರ್ಯವಾಗಿತ್ತು. |
| 5 | ಕೊಳೆಗೇರಿ ಸುಧಾರಣೆ ಮತ್ತು ಮೇಲ್ದರ್ಜೆಗೇರಿಸುವುದು **(ವಿ)** | ಫಲಾನುಭವಿಗಳನ್ನು ಗುರುತಿಸುವುದು | ಕೊಳೆಗೇರಿ ಅಭಿವೃದ್ಧಿ ಮತ್ತು ಮೇಲ್ದರ್ಜೆಗೇರಿಸುವುದರಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಪಾತ್ರವಿಲ್ಲ. |
| | | ಕೈಗೆಟುಕುವ ಬೆಲೆಯಲ್ಲಿ ವಸತಿ | |
| | | ಮೇಲ್ದರ್ಜೇಗೇರಿಸುವುದು | |
| **ನಗರ ಸ್ಥಳೀಯ ಸಂಸ್ಥೆಗಳು ಕೇವಲ ಅನುಷ್ಠಾನಗೊಳಿಸುವ ಸಂಸ್ಥೆಗಳು** | | | |
| 6 | ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಯೋಜನೆಗಳು **(ಕ)** | ಆರ್ಥಿಕ ಚಟುವಟಿಕೆಗಳಿಗಾಗಿ ಕಾರ್ಯಕ್ರಮಗಳ ಅನುಷ್ಠಾನ | ನಗರ ಸ್ಥಳೀಯ ಸಂಸ್ಥೆಗಳು–ರಾಜ್ಯ ಹಣಕಾಸು ಆಯೋಗದ ಮುಕ್ತನಿಧಿ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ಆದಾಯ ಎರಡರಲ್ಲೂ ಶೇಕಡಾ 34.35ರಷ್ಟು ಹಣವನ್ನು ಕಾಯ್ದಿರಿಸುವ ಮೂಲಕ |
| | | ಸಾಮಾಜಿಕ ಅಭಿವೃದ್ಧಿಗಾಗಿ ಕಾರ್ಯನೀತಿಗಳು | |

| ಕ್ರಮ ಸಂಖ್ಯೆ | ಪ್ರಕಾರ್ಯಗಳು ಕಡ್ಡಾಯ (ಕ)/ ವಿವೇಚನಾತ್ಮಕ (ವಿ) | ಚಟುವಟಿಕೆಗಳು | ಅನುಷ್ಠಾನದ ವಾಸ್ತವಿಕ ಸ್ಥಿತಿ |
|---|---|---|---|
| | | | ವಸತಿ, ಉದ್ಯೋಗ, ಆರೋಗ್ಯ, ಶಿಕ್ಷಣ ಮತ್ತು ಮೂಲ ಸೌಕರ್ಯಗಳಂತಹ ಕ್ಷೇತ್ರಗಳಲ್ಲಿ ಕಲ್ಯಾಣ ಯೋಜನೆಗಳನ್ನು ಅನುಷ್ಠಾನಗೊಳಿಸುವುದು. ವೈಯಕ್ತಿಕ ಕಲ್ಯಾಣ ಚಟುವಟಿಕೆಗಳು ಮತ್ತು ಸಮುದಾಯದ ಅಭಿವೃದ್ಧಿಯ ನಡುವೆ 40:60 ಅನುಪಾತದಲ್ಲಿ ಪ.ಜಾ/ಪ.ಪಂಗೆ ಶೇಕಡಾ 24.10, ಇತರ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಶೇಕಡಾ 7.25 ಮತ್ತು ಶೇಕಡಾ 3ರಷ್ಟು ವಿಭಿನ್ನ ಸಾಮರ್ಥ್ಯವುಳ್ಳವರಿಗೆ ಹಣವನ್ನು ಹಂಚಿಕೆ ಮಾಡಲಾಗುತ್ತದೆ. ಈ ಯೋಜನೆಗಳ ಅನುಷ್ಠಾನಕ್ಕೆ ರಾಜ್ಯ ಸರ್ಕಾರವು ಮಾರ್ಗಸೂಚಿಗಳನ್ನು ನೀಡುತ್ತದೆ.<br>ಸಮಾಜಕಲ್ಯಾಣ ಇಲಾಖೆ–ಪ.ಜಾ/ಪ.ಪಂ ಮತ್ತು ಇತರೆ ದುರ್ಬಲ ವರ್ಗದ ಜನಗಳ ಕಲ್ಯಾಣ ಕಾಪಾಡುವುದು, ಪ.ಜಾ/ಪ.ಪಂಗಳ ಸಾಮಾಜಿಕ–ಆರ್ಥಿಕ ಮತ್ತು ಶೈಕ್ಷಣಿಕ ಉನ್ನತಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ಅನುಷ್ಠಾನಗೊಳಿಸುವದು, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಅನುಷ್ಠಾನ, ವಿವಿಧ ವಿದ್ಯಾರ್ಥಿವೇತನಗಳು ಮತ್ತು ವಿದ್ಯಾರ್ಥಿನಿಲಯಗಳ ನಿರ್ವಹಣೆ. |
| 7 | ವಿಕಲಚೇತನ ಮತ್ತು ಬುದ್ಧಿಮಾಂದ್ಯರನ್ನು ಒಳಗೊಂಡಂತೆ ಸಮಾಜದ ದುರ್ಬಲ ವರ್ಗದವರ ಹಿತಾಸಕ್ತಿಯನ್ನು ಕಾಪಾಡುವುದು (ವಿ) | ಫಲಾನುಭವಿಗಳನ್ನು ಗುರುತಿಸುವುದು<br>ಟ್ರೈಸೈಕಲ್‌ನಂತಹ ಉಪಕರಣಗಳನ್ನು/ ಪ್ರಯೋಜನಗಳನ್ನು ಒದಗಿಸುವುದು<br>ವಸತಿ ಕಾರ್ಯಕ್ರಮಗಳು<br>ವಿದ್ಯಾರ್ಥಿವೇತನಗಳು | ರಾಜ್ಯ ಇಲಾಖೆಗಳಾದ ಸಮಾಜ ಕಲ್ಯಾಣ, ಬುಡಕಟ್ಟು ಕಲ್ಯಾಣ, ವಿಭಿನ್ನ ಸಾಮರ್ಥ್ಯದ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಂತಹ ಅಂಗಸಂಸ್ಥೆ ಈ ಪ್ರಕಾರ್ಯಗಳಿಗೆ ಜವಾಬ್ದಾರರಾಗಿದ್ದವು. ನಗರ ಸ್ಥಳೀಯ ಸಂಸ್ಥೆಗಳು ಕೇವಲ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುವ ಒಂದು ಅಂಗವಾಗಿದ್ದವು. |
| 8 | ನಗರ ಬಡತನ ನಿರ್ಮೂಲನೆ (ವಿ) | ಫಲಾನುಭವಿಗಳನ್ನು ಗುರುತಿಸುವುದು<br>ಜೀವನೋಪಾಯ ಮತ್ತು ಉದ್ಯೋಗ<br>ಬೀದಿಬದಿ ಮಾರಾಟಗಾರರು | ನಗರ ಸ್ಥಳೀಯ ಸಂಸ್ಥೆಗಳು – ರಾಜ್ಯ ಹಣಕಾಸು ಆಯೋಗ ಮತ್ತು ಸ್ವಂತ ನಿಧಿಯ ಮೂಲಕ ಕೈಗೊಳ್ಳುವ ಕಲ್ಯಾಣ ಯೋಜನೆಗಳು.<br>ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ– ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳು |
| | | **ದ್ವಿಪಾತ್ರ ಹೊಂದಿರುವ ಪ್ರಕಾರ್ಯ** | |
| 9 | | ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆ | |

| ಕ್ರಮ ಸಂಖ್ಯೆ | ಪ್ರಕಾರ್ಯಗಳು ಕಡ್ಡಾಯ (ಕ)/ ವಿವೇಚನಾತ್ಮಕ (ವಿ) | ಚಟುವಟಿಕೆಗಳು | ಅನುಷ್ಠಾನದ ವಾಸ್ತವಿಕ ಸ್ಥಿತಿ |
|---|---|---|---|
| | ರಸ್ತೆಗಳು ಮತ್ತು ಸೇತುವೆಗಳು **(ಕ)** | ಸೇತುವೆಗಳು, ಚರಂಡಿಗಳು, ಮೇಲುಸೇತುವೆಗಳು ಮತ್ತು ಕಾಲುದಾರಿಗಳ ನಿರ್ಮಾಣ ಮತ್ತು ನಿರ್ವಹಣೆ | ನಗರ ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿರುವ ರಸ್ತೆಗಳು, ಸೇತುವೆಗಳು, ಚರಂಡಿಗಳು, ಮೇಲುಸೇತುವೆಗಳು ಮತ್ತು ಕಾಲುದಾರಿಗಳ ನಿರ್ಮಾಣ ಮತ್ತು ನಿರ್ವಹಣೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದಾಗ್ಯೂ, ಅವುಗಳು ರಾಜ್ಯದ ನಗರೋತ್ಥಾನ ಯೋಜನೆಯಡಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಅಗತ್ಯತೆ ಇದ್ದಿತು. ನಗರೋತ್ಥಾನ ಯೋಜನೆಯಡಿ ಕಾಮಗಾರಿಗಳನ್ನು ಕೌನ್ಸಿಲ್‌ಗಳು ಅನುಮೋದಿಸಿದ ಕ್ರಿಯಾ ಯೋಜನೆಗಳನ್ನು ಜಿಲ್ಲಾ ಮತ್ತು ರಾಜ್ಯ ಸಮಿತಿಗಳ ಅನುಮೋದನೆಯ ನಂತರವೇ ಕಾರ್ಯಗತಗೊಳಿಸಬೇಕಿದ್ದರಿಂದ ನಗರ ಸ್ಥಳೀಯ ಸಂಸ್ಥೆಗಳ ಸ್ವಾಯತ್ತತೆಯಲ್ಲಿ ಕೊರತೆ ಇದ್ದಿತು. ಈ ಕಾಮಗಾರಿಗಳನ್ನು ಜಿಲ್ಲಾಧಿಕಾರಿಗಳು ಜಿಲ್ಲಾ ನಗರಾಭಿವೃದ್ಧಿ ಕೋಶ ಮೂಲಕ ಮೇಲ್ವಿಚಾರಣೆ ಮಾಡುತ್ತಿದ್ದರು. |
| | **ಸೀಮಿತ ಮತ್ತು/ಅಥವಾ ರಾಜ್ಯ ಇಲಾಖೆಗಳ ಮತ್ತು/ಅಥವಾ ಅಂಗಸಂಸ್ಥೆಗಳ ಜೊತೆಯಲ್ಲಿ ನಿರ್ವಹಿಸುವ ಪ್ರಕಾರ್ಯಗಳು** | | |
| 10 | ಭೂಬಳಕೆ ನಿಯಂತ್ರಣ ಮತ್ತು ಕಟ್ಟಡಗಳ ನಿರ್ಮಾಣ **(ಕ)** | ಭೂಬಳಕೆಯನ್ನು ನಿಯಂತ್ರಿಸುವುದು<br>ಕಟ್ಟಡದ ಯೋಜನೆ/ಎತ್ತರದ ಕಟ್ಟಡಗಳನ್ನು ಅನುಮೋದಿಸುವುದು<br>ಅಕ್ರಮ ಕಟ್ಟಡಗಳನ್ನು ನೆಲಸಮ ಮಾಡುವುದು | ಭೂಬಳಕೆಯ ನಿಯಂತ್ರಣಗಳನ್ನು ಪ್ರಾಥಮಿಕವಾಗಿ ಕಂದಾಯ ಇಲಾಖೆಗೆ ವಹಿಸಲಾಗಿತ್ತು. ಆದರೆ ಕಟ್ಟಡಗಳ ನಿರ್ಮಾಣವನ್ನು ನಗರಾಭಿವೃದ್ಧಿ ಪ್ರಾಧಿಕಾರಗಳು, ಬಿಡಿಎ, ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತುಸೇವೆಗಳಂತಹ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳು ನಿಯಂತ್ರಿಸುತ್ತಿದ್ದವು. ನಗರ ಸ್ಥಳೀಯ ಸಂಸ್ಥೆಗಳ ಪಾತ್ರ ಕಟ್ಟಡ ಪರವಾನಗಿಗಳನ್ನು ನೀಡುವುದು ಮತ್ತು ಕಟ್ಟಡ ಉಪ ಕಾನೂನುಗಳ ಜಾರಿಗೊಳಿಸುವಿಕೆಗೆ ಸೀಮಿತಗೊಂಡಿತ್ತು. |
| 11 | ಗೃಹಬಳಕೆ, ಕೈಗಾರಿಕಾ ಮತ್ತು ವಾಣಿಜ್ಯ ಉದ್ದೇಶಗಳಿಗಾಗಿ ನೀರು ಸರಬರಾಜು **(ಕ)** | ನೀರು ಸರಬರಾಜು<br>ಸಂಪರ್ಕಗಳನ್ನು ಒದಗಿಸುವುದು<br>ಕಾರ್ಯಾಚರಣೆ ಮತ್ತು ನಿರ್ವಹಣೆ<br>ಶುಲ್ಕಗಳ ಸಂಗ್ರಹಣೆ | ಅಂಗಸಂಸ್ಥೆಗಳು ಆಸ್ತಿಗಳನ್ನು ನಿರ್ಮಿಸುವ ಜವಾಬ್ದಾರಿಯನ್ನು ಹೊಂದಿದ್ದವು. ನಗರ ಸ್ಥಳೀಯ ಸಂಸ್ಥೆಗಳ ಪಾತ್ರವು ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಸೀಮಿತವಾಗಿತ್ತು. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ತನಗೆ ವಹಿಸಲಾಗಿದ್ದ 10[4] ನಗರ |

[4] ಮಹಾನಗರ ಪಾಲಿಕೆಗಳು: ಹುಬ್ಬಳ್ಳಿ–ಧಾರವಾಡ, ಕಲಬುರಗಿ ಮತ್ತು ಶಿವಮೊಗ್ಗ; ನಗರಸಭೆಗಳು: ಚನ್ನಪಟ್ಟಣ, ಮಂಡ್ಯ, ರಾಮನಗರ ಮತ್ತು ವಿಜಯಪುರ; ಪುರಸಭೆಗಳು: ಕುಶಾಲನಗರ ಮತ್ತು ರಾಬರ್ಟ್‌ಸನ್‌ಪೇಟ್.

| ಕ್ರಮ ಸಂಖ್ಯೆ | ಪ್ರಕಾರ್ಯಗಳು ಕಡ್ಡಾಯ (ಕ)/ ವಿವೇಚನಾತ್ಮಕ (ವಿ) | ಚಟುವಟಿಕೆಗಳು | ಅನುಷ್ಠಾನದ ವಾಸ್ತವಿಕ ಸ್ಥಿತಿ |
|---|---|---|---|
| | | | ಸ್ಥಳೀಯ ಸಂಸ್ಥೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯಲ್ಲಿ ತೊಡಗಿಸಿಕೊಂಡಿದ್ದವು. |
| 12 | ಸಾರ್ವಜನಿಕ ಆರೋಗ್ಯ, ನೈರ್ಮಲ್ಯ ಸಂರಕ್ಷಣೆ ಮತ್ತು ಘನತ್ಯಾಜ್ಯ ನಿರ್ವಹಣೆ **(ಕ)** | ಆಸ್ಪತ್ರೆಗಳ, ಔಷಧಾಲಯಗಳ ನಿರ್ವಹಣೆ<br>ರೋಗನಿರೋಧಕ/ ವ್ಯಾಕ್ಸಿನೇಷನ್<br>ಜನನ ಮತ್ತು ಮರಣಗಳ ನೋಂದಣಿ<br>ಸಾಂಕ್ರಾಮಿಕ ಕಾಯಿಲೆಯಿಂದ ಪೀಡಿತ ಸ್ಥಳಗಳ ಸ್ವಚ್ಛತೆ ಮತ್ತು ಸೋಂಕುಮುಕ್ತ ಗೊಳಿಸುವುದು<br>ಘನತ್ಯಾಜ್ಯ ನಿರ್ವಹಣೆ<br>ಸಾರ್ವಜನಿಕ ಮಾರುಕಟ್ಟೆಗಳ ನಿಯಂತ್ರಣ ಮತ್ತು ಮೇಲ್ವಿಚಾರಣೆ | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಆಸ್ಪತ್ರೆಗಳು ಮತ್ತು ಔಷಧಾಲಯಗಳನ್ನು ನಿರ್ವಹಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದರಿಂದ ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಪಾತ್ರ ಸೀಮಿತವಾಗಿತ್ತು. ಬಿಬಿಎಮ್‌ಪಿ ಮತ್ತು ಹೆಚ್‌ಡಿಎಮ್‌ಸಿಗಳು ಮಾತ್ರ ಹೆರಿಗೆ ಆಸ್ಪತ್ರೆಗಳನ್ನು ಹೊಂದಿದ್ದವು. ನಗರ ಸ್ಥಳೀಯ ಸಂಸ್ಥೆಗಳು ರಾಜ್ಯ ಇಲಾಖೆಯೊಂದಿಗೆ ರೋಗನಿರೋಧಕ/ವ್ಯಾಕ್ಸಿನೇಷನ್ ಕಾರ್ಯಕ್ರಮಗಳನ್ನು ಕೈಗೊಂಡಿದ್ದವು. ಸಾಂಕ್ರಾಮಿಕ ಕಾಯಿಲೆಯಿಂದ ಬಾದಿತವಾಗಿದ್ದ ಪ್ರದೇಶಗಳ ಸ್ವಚ್ಛತೆ ಮತ್ತು ಸೋಂಕು ನಿವಾರಣೆಗೆ, ಘನತ್ಯಾಜ್ಯ ನಿರ್ವಹಣೆ ಮತ್ತು ಸಾರ್ವಜನಿಕ ಮಾರುಕಟ್ಟೆಗಳ ನಿಯಂತ್ರಣ ಮತ್ತು ಮೇಲ್ವಿಚಾರಣೆಗೆ ನಗರ ಸ್ಥಳೀಯ ಸಂಸ್ಥೆಗಳು ಜವಾಬ್ದಾರರಾಗಿದ್ದವು. |
| 13 | ನಗರ ವನ ನಿರ್ಮಾಣ, ಪರಿಸರ ಸಂರಕ್ಷಣೆ ಮತ್ತು ಜೀವಿ ಪರಿಸರ ಅಂಶಗಳ ಸಂವರ್ಧನೆ (ವಿ) | ಅರಣ್ಯೀಕರಣ<br>ಹಸಿರುಕರಣ<br>ಜಾಗೃತಿಗಳನ್ನು ಮೂಡಿಸುವುದು<br>ಪರಿಸರ ಸಂರಕ್ಷಣೆ ಮತ್ತು ಜೀವಿ ಪರಿಸರ ಅಂಶಗಳ ಸಂವರ್ಧನೆ<br>ಜಲಮೂಲಗಳಂತಹ ಇತರೆ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ | ಈ ಕಾರ್ಯವನ್ನು ನಿರ್ವಹಿಸುವಲ್ಲಿ ಅರಣ್ಯ ಇಲಾಖೆ ಮಹತ್ವದ ಪಾತ್ರವನ್ನು ವಹಿಸಿತ್ತು. ಮಹಾನಗರ ಪಾಲಿಕೆಗಳು ಮಾತ್ರ ಅರಣ್ಯ ಇಲಾಖೆಯ ಜೊತೆಗೆ ಅರಣ್ಯೀಕರಣ ಮತ್ತು ಜಾಗೃತಿ ಮೂಡಿಸುವ ಕೆಲಸಗಳನ್ನು ಕೈಗೊಂಡವು. ಪರಿಸರ ಸಂರಕ್ಷಣೆ ಮತ್ತು ಜೀವಿ ಪರಿಸರ ಅಂಶಗಳ ಸಂವರ್ಧನೆ ಅರಣ್ಯ ಇಲಾಖೆಯ ವಶದಲ್ಲಿಯೆ ಇದ್ದಿತ್ತು. |
| 14 | ಉದ್ಯಾನವನಗಳು, ತೋಟಗಳು, ಆಟದ ಮೈದಾನಗಳಂತಹ ನಗರ ಸೌಲಭ್ಯ ಮತ್ತು ಸೌಕರ್ಯಗಳನ್ನು ಒದಗಿಸುವುದು **(ಕ) (ವಿ)** | ಉದ್ಯಾನವನಗಳು ಹಾಗೂ ತೋಟಗಳ ನಿರ್ಮಾಣ<br>ಕಾರ್ಯಾಚರಣೆ ಮತ್ತು ನಿರ್ವಹಣೆ | ಮಹಾನಗರ ಪಾಲಿಕೆಗಳಿಗೆ ಈ ಪ್ರಕಾರ್ಯವು ಮಾಡಲೇಬೇಕಾದ ಕಾರ್ಯವಾಗಿತ್ತು ಹಾಗೂ ಇತರೆ ನಗರ ಸ್ಥಳೀಯ ಸಂಸ್ಥೆಗಳಿಗೆ ವಿವೇಚನಾತ್ಮಕ ಕಾರ್ಯವಾಗಿತ್ತು.<br>ನಗರ ಸ್ಥಳೀಯ ಸಂಸ್ಥೆಗಳು – ಉದ್ಯಾನವನಗಳ, ತೋಟಗಳ, ಆಟದ ಮೈದಾನಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಹಾಗೂ ಆಟದ ಮತ್ತು ವ್ಯಾಯಾಮಗಳ ಉಪಕರಣಗಳನ್ನು ಸ್ಥಾಪಿಸುವುದು<br>ನಗರಾಭಿವೃದ್ಧಿ ಪ್ರಾಧಿಕಾರಗಳು – ವಸತಿ ಬಡಾವಣೆಗಳ ಅನುಮೋದನೆಯ ಸಮಯದಲ್ಲಿ ಸಾರ್ವಜನಿಕ ಉದ್ಯಾನವನಗಳು ಮತ್ತು ಆಟದ |

| ಕ್ರಮ ಸಂಖ್ಯೆ | ಪ್ರಕಾರ್ಯಗಳು ಕಡ್ಡಾಯ (ಕ)/ ವಿವೇಚನಾತ್ಮಕ (ವಿ) | ಚಟುವಟಿಕೆಗಳು | ಅನುಷ್ಠಾನದ ವಾಸ್ತವಿಕ ಸ್ಥಿತಿ |
|---|---|---|---|
| | | | ಮೈದಾನಗಳಿಗಾಗಿ ಬಡಾವಣೆಯ ಒಟ್ಟು ಪ್ರದೇಶದ ಶೇಕಡಾ 15ಕ್ಕಿಂತ ಕಡಿಮೆಯಿಲ್ಲದಂತೆ ಮತ್ತು ನಾಗರಿಕ ಸೌಲಭ್ಯಗಳಿಗಾಗಿ ಬಡಾವಣೆಯ ಒಟ್ಟು ಪ್ರದೇಶದ ಶೇಕಡಾ 10ಕ್ಕಿಂತ ಕಡಿಮೆಯಿಲ್ಲದ ಹೆಚ್ಚುವರಿ ಪ್ರದೇಶವನ್ನು ಮೀಸಲಿಡುವುದು. |
| 15 | ಸಾಂಸ್ಕೃತಿ, ಶೈಕ್ಷಣಿಕ ಮತ್ತು ಸೌಂದರ್ಯ ಅಂಶಗಳ ಸಂವರ್ಧನೆ (ವಿ) | ಶಾಲೆಗಳು ಮತ್ತು ಶಿಕ್ಷಣ<br>ಜಾತ್ರೆಗಳು ಮತ್ತು ಉತ್ಸವಗಳು<br>ಸಾಂಸ್ಕೃತಿಕ ಕಟ್ಟಡಗಳು/ ಸಂಸ್ಥೆಗಳು<br>ಪರಂಪರೆ/ಪುರಾತನವಾದದ್ದು<br>ಸಾರ್ವಜನಿಕ ಸ್ಥಳಗಳನ್ನು ಸುಂದರಗೊಳಿಸುವುದು | ಶಾಲೆಗಳು ಮತ್ತು ಶಿಕ್ಷಣವನ್ನು ಶಿಕ್ಷಣ ಇಲಾಖೆಯು ನಿರ್ವಹಿಸಿತ್ತು. ನಗರ ಸ್ಥಳೀಯ ಸಂಸ್ಥೆಗಳ ಪೈಕಿ ಬಿಬಿಎಮ್‌ಪಿ ಮಾತ್ರ ಶಾಲೆಗಳನ್ನು ನಡೆಸುತ್ತಿತ್ತು. ನಗರ ಸ್ಥಳೀಯ ಸಂಸ್ಥೆಗಳು ರಾಜ್ಯ ಸರ್ಕಾರದ ಇಲಾಖೆಗಳಾದ ಕನ್ನಡ ಮತ್ತು ಸಂಸ್ಕೃತಿ, ಪುರಾತತ್ವ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರಗಳ ಜೊತೆಯಲ್ಲಿ ಸಾರ್ವಜನಿಕ ಸ್ಥಳಗಳನ್ನು ಸುಂದರಗೊಳಿಸುವುದು ಹಾಗೂ ಜಾತ್ರೆಗಳನ್ನು ಮತ್ತು ಉತ್ಸವಗಳನ್ನು ಆಯೋಜಿಸುತ್ತಿದ್ದವು. |
| 16 | ಜನನ ಮರಣಗಳ ನೋಂದಣಿ ಸೇರಿದಂತೆ ಇತರೆ ಪ್ರಮುಖ ಅಂಕಿ ಅಂಶಗಳು (ಕ) | ಮಾಹಿತಿ ಪಡೆಯಲು ಆಸ್ಪತ್ರೆಗಳು/ ಶವಾಗಾರಗಳೊಂದಿಗೆ ಸಮನ್ವಯ ಮಾಡುವುದು<br>ದತ್ತಸಂಚಯವನ್ನು ನಿರ್ವಹಿಸುವುದು ಮತ್ತು ಪರಿಷ್ಕರಿಸುವುದು | ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಉಭಯರೂ ಜನನ ಮತ್ತು ಮರಣಗಳ ದತ್ತಸಂಚಯವನ್ನು ನಿರ್ವಹಿಸುತ್ತಿದ್ದವು. ನಗರ ಸ್ಥಳೀಯ ಸಂಸ್ಥೆಗಳು ಜನನ ಮತ್ತು ಮರಣ ಪ್ರಮಾಣ ಪತ್ರಗಳನ್ನು ನೋಂದಾಯಿಸಿ ವಿತರಿಸುತ್ತವೆ. |
| 17 | ಬೀದಿ ದೀಪ, ವಾಹನ ನಿಲುಗಡೆ ಸ್ಥಳಗಳು, ಬಸ್ ನಿಲ್ದಾಣ, ಸಾರ್ವಜನಿಕ ಶೌಚಾಲಯದಂತಹ ಮೂಲ ಸೌಲಭ್ಯಗಳನ್ನು ಒದಗಿಸುವುದು (ಕ) | ಬೀದಿದೀಪಗಳ ಸ್ಥಾಪನೆ ಮತ್ತು ನಿರ್ವಹಣೆ<br>ವಾಹನ ನಿಲುಗಡೆ ಸ್ಥಳಗಳ ನಿರ್ಮಾಣ ಮತ್ತು ನಿರ್ವಹಣೆ<br>ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಮತ್ತು ನಿರ್ವಹಣೆ<br>ಬಸ್ ಮಾರ್ಗಗಳನ್ನು ನಿರ್ಧರಿಸುವುದು ಮತ್ತು ಕಾರ್ಯಾಚರಣೆ ಮಾಡುವುದು | ವಾಹನಗಳ ನಿಲುಗಡೆ ಮತ್ತು ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಾಣ ಮಾಡುವುದು ಮತ್ತು ನಿರ್ವಹಿಸುವುದು ಹಾಗೂ ಬೀದಿದೀಪಗಳನ್ನು ನಿರ್ವಹಿಸುವ ಉಸ್ತುವಾರಿಯನ್ನು ನಗರ ಸ್ಥಳೀಯ ಸಂಸ್ಥೆಗಳು ಮಾಡುತ್ತಿದ್ದವು.<br>ರಾಜ್ಯ ರಸ್ತೆ ಸಾರಿಗೆ ನಿಗಮಗಳು ಬಸ್ ನಿಲ್ದಾಣಗಳನ್ನು ಒದಗಿಸುವ ಕಾರ್ಯವ್ಯಾಪ್ತಿಯನ್ನು ಹಂಚಿಕೊಂಡಿದ್ದವು. |
| **ವರ್ಗಾವಣೆಯಾಗದ ಪ್ರಕಾರ್ಯ** | | | |
| 18 | ಅಗ್ನಿಶಾಮಕ ಸೇವೆಗಳು | ಅಗ್ನಿಶಾಮಕ ದಳಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು<br>ಎತ್ತರದ ಕಟ್ಟಡಗಳಿಗೆ ಸಂಬಂದಿಸಿದಂತೆ ಅಗ್ನಿಶಾಮಕ ಎನ್‌ಒಸಿ/ ಅನುಮೋದನೆ ಪ್ರಮಾಣಪತ್ರವನ್ನು ನೀಡುವುದು | ಈ ಪ್ರಕಾರ್ಯವನ್ನು ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತುಸೇವೆ ಇಲಾಖೆ ನಿರ್ವಹಿಸುತ್ತಿದೆ. |

ಆಧಾರ: ಕೆಎಮ್ ಮತ್ತು ಕೆಎಮ್‌ಸಿ ಅಧಿನಿಯಮಗಳು, ಅಂಗಸಂಸ್ಥೆಗಳ ಸಂಬಂಧಪಟ್ಟ ಕಾಯ್ದೆಗಳು

***ಶಿಫಾರಸು 1:*** *ವಿಕೇಂದ್ರೀಕರಣವನ್ನು ಸಾಧಿಸುವ ದೃಷ್ಟಿಯನ್ನು ಯಥಾವತ್ತಾದ ರೂಪಕ್ಕೆ ಪರಿವರ್ತಿಸಲು ರಾಜ್ಯ ಸರ್ಕಾರ ನಿರ್ಣಾಯಕ ಕ್ರಮವನ್ನು ತೆಗೆದುಕೊಳ್ಳುವ ಅಗತ್ಯವಿದೆ. ನಗರ ಸ್ಥಳೀಯ ಸಂಸ್ಥೆಗಳಿಗೆ ನಿಯೋಜಿಸಲಾದ ಪ್ರಕಾರ್ಯಗಳಿಗೆ ಸಂಬಂಧಪಟ್ಟಂತೆ ಅವುಗಳು ಅಗತ್ಯವಿರುವಷ್ಟು ಸ್ವಾಯತ್ತತೆಯನ್ನು ಅನುಭವಿಸುವುದನ್ನು ಖಚಿತ ಪಡಿಸಿಕೊಳ್ಳುವ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ.*

## 4.2 ನಗರ ಸ್ಥಳೀಯ ಸಂಸ್ಥೆಗಳ ಸಬಲೀಕರಣಕ್ಕಾಗಿ ಸಾಂಸ್ಥಿಕ ಕಾರ್ಯವಿಧಾನಗಳು

ಈಗಾಗಲೇ ಮೇಲೆ ಚರ್ಚಿಸಿದಂತೆ, ರಾಜ್ಯ ಸರ್ಕಾರವು 17 ಪ್ರಕಾರ್ಯಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಿತ್ತು. ಸೂಕ್ತವಾದ ಸಂಸ್ಥೆಗಳನ್ನು ಸ್ಥಾಪಿಸಿದಾಗ ಮತ್ತು ಸಮರ್ಪಕವಾದ ಅಧಿಕಾರ ನೀಡಿದಾಗ ಮಾತ್ರ ಈ ಪ್ರಕಾರ್ಯಗಳ ಕಾರ್ಯಾಚರಣೆ ಪರಿಣಾಮಕಾರಿಯಾಗಿರುತ್ತದೆ. **ಕೋಷ್ಟಕ–3.1**ರಲ್ಲಿ ವಿವರಿಸಿರುವ ಸಾಂಸ್ಥಿಕ ಕಾರ್ಯವಿಧಾನಗಳನ್ನು ಸ್ಥಾಪಿಸಲು 74ನೇ ಸಂವಿಧಾನ ತಿದ್ದುಪಡಿಯು ಅನುವು ಮಾಡಿಕೊಟ್ಟಿದೆ. ಅಂತಹ ಸಾಂಸ್ಥಿಕ ಕಾರ್ಯವಿಧಾನದ ಪರಿಣಾಮಕಾರಿತ್ವವನ್ನು ಈ ವಿಭಾಗವು ಚರ್ಚಿಸುತ್ತದೆ.

### *4.2.1* ರಾಜ್ಯ ಚುನಾವಣಾ ಆಯೋಗ

ರಾಜ್ಯ ಚುನಾವಣಾ ಆಯೋಗದ ಅಧಿಕಾರವು ಪಂಚಾಯಿತಿಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಎಲ್ಲ ಚುನಾವಣೆಗಳನ್ನು ನಡೆಸುವುದು ಮತ್ತು ಅವುಗಳ ಎಲ್ಲಾ ಮೇಲ್ವಿಚಾರಣೆ ಮತ್ತು ನಿಯಂತ್ರಣ ಹಾಗೂ ಮತದಾರರ ಪಟ್ಟಿಗಳನ್ನು ತಯಾರಿಸುವುದು ಒಳಗೊಂಡಿರುತ್ತದೆ. ಆದರೆ, ವಾರ್ಡ್‌ಗಳ ಗಡಿಯನ್ನು ಗುರುತಿಸುವ ಅಧಿಕಾರ, ಕೌನ್ಸಿಲ್ ಸ್ಥಾನಗಳಿಗೆ ಮೀಸಲಾತಿ ಮತ್ತು ಮೇಯರ್/ಅಧ್ಯಕ್ಷ, ಉಪಮೇಯರ್/ ಉಪಾಧ್ಯಕ್ಷರ ಸ್ಥಾನಗಳಿಗೆ ಹಾಗೂ ವಾರ್ಡ್‌ಗಳಿಗೆ ಪರ್ಯಾಯ ನೀತಿಯು ರಾಜ್ಯ ಸರ್ಕಾರದ ಬಳಿಯಿದ್ದಿತು. ಇದು ಗಡಿಯನ್ನು ಗುರುತಿಸುವ ಮತ್ತು ಚುನಾವಣಾ ಕ್ಷೇತ್ರಗಳ ಮೀಸಲಾತಿಯ ಕಾರ್ಯವನ್ನು ರಾಜ್ಯ ಚುನಾವಣಾ ಆಯೋಗಕ್ಕೆ ವಹಿಸುವ, ಭಾರತ ಸರ್ಕಾರವು ಒಪ್ಪಿಕೊಂಡಿರುವ ಎರಡನೇ ಆಡಳಿತ ಸುಧಾರಣಾ ಸಮಿತಿಯ ಶಿಫಾರಸಿಗೆ ಅನುಗುಣವಾಗಿರಲಿಲ್ಲ. ಕೇರಳ, ಮಹಾರಾಷ್ಟ್ರ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳು ವಾರ್ಡ್‌ಗಳ ಗಡಿ ಗುರುತಿಸುವಿಕೆಯನ್ನು ರಾಜ್ಯ ಚುನಾವಣಾ ಆಯೋಗಗಳಿಗೆ ವಹಿಸಿವೆ.

ಮುಂದುವರೆದು, ರಾಜ್ಯವು ವಾರ್ಡ್‌ಗಳ ಗಡಿ ಗುರುತಿಸುವಿಕೆಯ ಪ್ರಕ್ರಿಯೆಯನ್ನು ವಿಳಂಬಗೊಳಿಸಿತು ಮತ್ತು ಇದರಿಂದ ಕೌನ್ಸಿಲ್ ಚುನಾವಣೆಗಳು ವಿಳಂಬಗೊಂಡವು. 2009 ಮತ್ತು 2015ರಲ್ಲಿ ಬಿಬಿಎಮ್‌ಪಿ ವಿಷಯದಲ್ಲಿ ಇದು ಸಂಭವಿಸಿದೆ. ಪ್ರಸ್ತುತ ಬಿಬಿಎಮ್‌ಪಿ ಕೌನ್ಸಿಲ್‌ನ ಅವಧಿ ಸೆಪ್ಟೆಂಬರ್ 2020ರಲ್ಲಿ ಮುಕ್ತಾಯಗೊಳ್ಳಲಿದ್ದರೂ, ಜನವರಿ 2020ಕ್ಕೆ ಗಡಿ ಗುರುತಿಸುವ ಪ್ರಕ್ರಿಯೆಯನ್ನು ರಾಜ್ಯವು ತೆಗೆದುಕೊಂಡಿರಲಿಲ್ಲ. ರಾಜ್ಯ ಚುನಾವಣಾ ಆಯೋಗದ ಸಾರ್ವಜನಿಕ ಹಿತಾಸಕ್ತಿ ದಾವೆಗೆ ಸಂಬಂಧವಾಗಿ ಉಚ್ಚ ನ್ಯಾಯಾಲಯವು ದಂಡ ವಿಧಿಸುವ ಬಗ್ಗೆ ಸರ್ಕಾರಕ್ಕೆ ಎಚ್ಚರಿಕೆ ನೀಡಿತ್ತು. ಈ ಎಚ್ಚರಿಕೆ ನಂತರ ರಾಜ್ಯ ಸರ್ಕಾರವು ಪ್ರಾರಂಭಿಕ ಅಧಿಸೂಚನೆಯನ್ನು ಮಾರ್ಚ್ 2020ರಲ್ಲಿ ಮತ್ತು ಅಂತಿಮ ಅಧಿಸೂಚನೆಯನ್ನು ಜೂನ್ 2020ರಲ್ಲಿ ಹೊರಡಿಸಿತು.

***ಶಿಫಾರಸು–2:*** *ರಾಜ್ಯ ಸರ್ಕಾರವು ಗಡಿ ಗುರುತಿಸುವ ಪ್ರಕ್ರಿಯೆಯನ್ನು ಪದೇ ಪದೇ ವಿಳಂಬ ಮಾಡುತ್ತಿರುವುದರಿಂದ, ಸಮಯಕ್ಕೆ ಸರಿಯಾಗಿ ಚುನಾವಣೆಗಳು ನಡೆಯುವುದನ್ನು ಖಚಿತಪಡಿಸಿಕೊಳ್ಳಲು ಗಡಿ ಗುರುತಿಸುವ ಕೆಲಸವನ್ನು ರಾಜ್ಯ ಚುನಾವಣಾ ಆಯೋಗಕ್ಕೆ ವಹಿಸಬೇಕು.*

### *4.2.1.1* ಪೌರಸಂಸ್ಥೆಗಳ ಸಂಯೋಜನೆ

ಅನುಚ್ಛೇದ 243R ಪೌರಸಂಸ್ಥೆಗಳ ಸಂಯೋಜನೆಯನ್ನು ನಿಗದಿಪಡಿಸಿದೆ. ಕೆಎಮ್ ಮತ್ತು ಕೆಎಮ್‌ಸಿ ಅಧಿನಿಯಮಗಳ ಅನ್ವಯ ಮಹಾನಗರ ಪಾಲಿಕೆಗಳು ಮತ್ತು ಪೌರಸಂಸ್ಥೆಗಳು ಚುನಾಯಿತ ಕಾರ್ಪೊರೇಟರ್/ಕೌನ್ಸಿಲರ್‌ಗಳು, ನಾಮನಿರ್ದೇಶಿತ ಕಾರ್ಪೊರೇಟರ್/ಕೌನ್ಸಿಲರ್‌ಗಳು, ಪೌರಸಂಸ್ಥೆಯ ಭಾಗ ಅಥವಾ ಸಂಪೂರ್ಣವಾಗಿ ಪ್ರತಿನಿಧಿಸುವ ವಿಧಾನಸಭೆಯ ಸದಸ್ಯರು, ವಿಧಾನ ಮಂಡಲದ ಸದಸ್ಯರು, ಲೋಕಸಭಾ ಸದಸ್ಯರು, ರಾಜ್ಯಸಭಾ ಸದಸ್ಯರುಗಳನ್ನು ಒಳಗೊಂಡಿರುತ್ತದೆ. ನಾಮನಿರ್ದೇಶಿತ ಸದಸ್ಯರುಗಳಿಗೆ ಮತದಾನದ ಅಧಿಕಾರವಿರುವುದಿಲ್ಲ. ಮೇಯರ್/ಅಧ್ಯಕ್ಷರುಗಳನ್ನು ಕೌನ್ಸಿಲರ್‌ಗಳಿಂದ ಆಯ್ಕೆ ಮಾಡಲಾಗುತ್ತದೆ ಮತ್ತು ಸ್ಥಾಯಿ ಸಮಿತಿಗಳು ಅವರಿಗೆ ನೆರವು ನೀಡುತ್ತವೆ. ಮಹಾನಗರ ಪಾಲಿಕೆಗಳಲ್ಲಿ ನಾಲ್ಕು ಸ್ಥಾಯಿ ಸಮಿತಿಗಳು[5] ಹಾಗೂ ಇತರೆ ಪೌರಸಂಸ್ಥೆಗಳಲ್ಲಿ ಒಂದೇ ಒಂದು ಸ್ಥಾಯಿ ಸಮಿತಿ ಇರುತ್ತದೆ. ಆಯುಕ್ತರು/ಮುಖ್ಯಾಧಿಕಾರಿಗಳು ನಗರ ಸ್ಥಳೀಯ ಸಂಸ್ಥೆಗಳ ಕಾರ್ಯನಿರ್ವಾಹಕ ಮುಖ್ಯಸ್ಥರಾಗಿರುತ್ತಾರೆ.

### *4.2.1.2* ಸ್ಥಾನಗಳ ಮೀಸಲಾತಿ

ಅನುಚ್ಛೇದ 243T ನೇರ ಚುನಾವಣೆಯಲ್ಲಿ ಪ.ಜಾ/ಪ.ಪಂ, ಮಹಿಳೆಯರಿಗೆ ಹಾಗೂ ಹಿಂದುಳಿದ ವರ್ಗಗಳಿಗೆ ಮೀಸಲಾತಿಗಳನ್ನು ನಿಗದಿಪಡಿಸಿದೆ. ಕೆಮ್‌ಸಿ ಮತ್ತು ಕೆಎಮ್ ಅಧಿನಿಯಮಗಳು ಸಹ ರಾಜ್ಯ ಸರ್ಕಾರವು ನಿಗದಿಪಡಿಸಿದ ಪರ್ಯಾ8ಯ ನೀತಿಯಂತೆ ವಿವಿಧ ಕ್ಷೇತ್ರಗಳಿಗೆ ಮೀಸಲಾತಿಯ ಪ್ರಕಾರ ಸ್ಥಾನಗಳನ್ನು ಹಂಚಿಕೆ ಮಾಡುವ ಅವಕಾಶ ನೀಡಿವೆ. ಮಹಿಳೆಯರ ಮೀಸಲಾತಿಗೆ ಸಂಬಂಧಿಸಿದಂತೆ ಪೌರಸಂಸ್ಥೆಗಳಲ್ಲಿ ನೇರ ಚುನಾವಣೆ ಮೂಲಕ ಭರ್ತಿ ಮಾಡಬೇಕಾದ ಪ.ಜಾ/ಪ.ಪಂ ಮತ್ತು ಹಿಂದುಳಿದ ವರ್ಗಗಳ ವ್ಯಕ್ತಿಗಳ ಪ್ರತಿಯೊಂದು ಪ್ರವರ್ಗಕ್ಕೆ ಮೀಸಲಿರಿಸಿದ ಸ್ಥಾನಗಳಲ್ಲಿ ಮತ್ತು ಮೀಸಲಿಟ್ಟಿರದ ಸ್ಥಾನಗಳಲ್ಲಿ ಶೇಕಡಾ 50ಕ್ಕೂ ಮೀರದಂತೆ ಸ್ಥಾನಗಳನ್ನು ಮಹಿಳೆಯರಿಗಾಗಿ ಮೀಸಲಿರಿಸತಕ್ಕದ್ದು.

ಪ.ಜಾ, ಪ.ಪಂ, ಹಿಂದುಳಿದ ವರ್ಗ ಮತ್ತು ಮಹಿಳೆಯರಿಗಾಗಿ ಕಾಯ್ದಿರಿಸಿದ ಸ್ಥಾನಗಳು ನಿಗದಿತ ಮಾನದಂಡಗಳ ಅನ್ವಯ ಇರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು ಮತ್ತು ರಾಜ್ಯ ಸರ್ಕಾರವು ಪ್ರತಿ ಚುನಾವಣೆಗೂ ಮೀಸಲಾತಿ ನೀತಿಯ ಪ್ರಕಾರ ಕಾರ್ಪೊರೇಟರ್/ಕೌನ್ಸಿಲರ್‌ಗಳ ಸ್ಥಾನಗಳನ್ನು ಪರ್ಯಾಯ ಮಾಡುತ್ತದೆ.

### *4.2.1.3* ಚುನಾವಣೆಗಳ ಸ್ಥಿತಿ ಮತ್ತು ಕೌನ್ಸಿಲ್‌ಗಳ ರಚನೆ

ಕೆಎಮ್‌ಸಿ (ಚುನಾವಣೆ ಮತ್ತು ವಿವಿಧ ನಿಬಂಧನೆಗಳು) ನಿಯಮಗಳು 1977 ಮತ್ತು ಕೆಎಮ್ (ಕೌನ್ಸಿಲರ್‌ಗಳ ಚುನಾವಣೆ) ನಿಯಮಗಳು, 1977ರಲ್ಲಿ ನಿಗದಿಪಡಿಸಿರುವಂತೆ, ಚುನಾವಣೆಯನ್ನು ರಾಜ್ಯ ಚುನಾವಣಾ ಆಯೋಗ ನಡೆಸಬೇಕು. ನಗರ ಸ್ಥಳೀಯ ಸಂಸ್ಥೆಗಳಿಗಾಗಿ ಚುನಾವಣೆಗಳನ್ನು ಅವಧಿ ಮುಗಿಯುವ ಮೊದಲೇ ಪೂರ್ಣಗೊಳಿಸಬೇಕು. ವಿಸರ್ಜನೆಯಾದ ಸಂದರ್ಭಗಳಲ್ಲಿ ವಿಸರ್ಜನೆಯಾದ ದಿನಾಂಕದಿಂದ ಆರು ತಿಂಗಳೊಳಗಾಗಿ ಚುನಾವಣೆಯನ್ನು ನಡೆಸಬೇಕು. ಮುಂದುವರೆದು, ಭಾರತದ ಸಂವಿಧಾನದ ಅನುಚ್ಛೇದ 243U(3)(ಎ) ಮತ್ತು ಕೆಎಮ್‌ಸಿ ಹಾಗೂ ಕೆಎಮ್ ಕಾಯ್ದೆಗಳ ನಿಬಂಧನೆಗಳು, ಮೊದಲ ಸಭೆಯ ದಿನಾಂಕದಿಂದ ನಗರ ಸ್ಥಳೀಯ ಸಂಸ್ಥೆಗಳ ಕಾರ್ಪೊರೇಟರ್‌ಗಳಿಗೆ/ಕೌನ್ಸಿಲರ್‌ಗಳಿಗೆ ಐದು ವರ್ಷಗಳ ನಿಗದಿತ ಅವಧಿಯನ್ನು ನಿಗದಿಪಡಿಸಿವೆ. ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಚುನಾವಣೆಗಳ ಸ್ಥಿತಿ ಹಾಗೂ ಕೌನ್ಸಿಲ್‌ಗಳ ರಚನೆಯನ್ನು **ಕೋಷ್ಟಕ–4.2**ರಲ್ಲಿ ನೀಡಲಾಗಿದೆ.

---

[5] ತೆರಿಗೆ, ಹಣಕಾಸು ಮತ್ತು ಮೇಲ್ಮನವಿ; ಸಾರ್ವಜನಿಕ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ; ನಗರ ಯೋಜನೆ ಮತ್ತು ಸುಧಾರಣೆ; ಮತ್ತು ಲೆಕ್ಕಪತ್ರಗಳು.

**ಕೋಷ್ಟಕ–*4.2:* ನಗರ ಸ್ಥಳೀಯ ಸಂಸ್ಥೆಗಳಲ್ಲಿ ಚುನಾವಣೆಗಳ ಸ್ಥಿತಿ ಮತ್ತು ಕೌನ್ಸಿಲ್‌ಗಳ ರಚನೆ**

| ನಗರ ಸ್ಥಳೀಯ ಸಂಸ್ಥೆಗಳ ಒಟ್ಟು ಸಂಖ್ಯೆ | 280 |
|---|---|
| ಅಧಿಸೂಚಿತ ಪ್ರದೇಶಗಳ ಸಂಖ್ಯೆ | 4 |
| ಹೊಸದಾಗಿ ಸ್ಥಾಪಿಸಲಾದ ನಗರ ಸ್ಥಳೀಯ ಸಂಸ್ಥೆಗಳು (ಪಟ್ಟಣ ಪಂಚಾಯತಿಗಳು) | 3 |
| 2015–16ರಿಂದ 2017–18ನೇ ಅವಧಿಯಲ್ಲಿ ಚುನಾವಣೆ ನಡೆದಿದ್ದು ಮತ್ತು ಕೌನ್ಸಿಲ್‌ಗಳನ್ನು ರಚಿಸಿದ್ದು | 58 |
| 2019–20ನೇ ಸಾಲಿನಲ್ಲಿ ಚುನಾವಣೆಗಳು ನಡೆಯಬೇಕಾಗಿದ್ದು, ಆದರೆ ವಾರ್ಡ್‌ಗಳಲ್ಲಿನ ಮೀಸಲಾತಿ ನೀತಿ ಸಂಬಂಧಿಸಿದಂತೆ ಪ್ರಕರಣಗಳು ನ್ಯಾಯಾಲಯದಲ್ಲಿರುವುದರಿಂದ ನಡೆದಿರಲಿಲ್ಲ. | 23 |
| ಆಗಸ್ಟ್ 2018–ಜನವರಿ 2020ರ ಅವಧಿಯಲ್ಲಿ ನಡೆದ ಚುನಾವಣೆಗಳು | 192 |
| ಚುನಾವಣೆ ನಡೆದಿದ್ದು ಮತ್ತು ಕೌನ್ಸಿಲ್‌ಗಳನ್ನು ರಚಿಸಿದ್ದು | 5 |
| ಚುನಾವಣೆಗಳು ನಡೆದಿದ್ದವು, ಆದರೆ ಮೇಯರ್/ಉಪಮೇಯರ್ ಮತ್ತು ಅಧ್ಯಕ್ಷ/ಉಪಾಧ್ಯಕ್ಷ ಹುದ್ದೆಗಳಿಗೆ ಸರ್ಕಾರ ಕೈಗೊಂಡ ಮೀಸಲಾತಿ ಪರ್ಯಾಯ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಪ್ರಕರಣಗಳು ಇರುವುದರಿಂದ ಕೌನ್ಸಿಲ್‌ಗಳು ರಚನೆಯಾಗಿರಲಿಲ್ಲ. | 187 |

*ಆಧಾರ: ರಾಜ್ಯ ಚುನಾವಣಾ ಆಯೋಗ ಮತ್ತು ಪೌರಾಡಳಿತ ನಿರ್ದೇಶನಾಲಯ ಒದಗಿಸಿರುವ ಮಾಹಿತಿ.*

210 ನಗರ ಸ್ಥಳೀಯ ಸಂಸ್ಥೆಗಳಲ್ಲಿ (187+23) ಯಾವುದೇ ಕೌನ್ಸಿಲ್‌ಗಳು ಇರಲಿಲ್ಲವೆಂಬುದನ್ನು ಮೇಲಿನಿಂದ ಗಮನಿಸಬಹುದು. ಚುನಾಯಿತ ಕೌನ್ಸಿಲ್‌ಗಳ ಅನುಪಸ್ಥಿತಿಯಲ್ಲಿ ಪ್ರಜಾಪ್ರಭುತ್ವದ ಅತ್ಯಗತ್ಯ ಅಂಶವಾಗಿರುವ ನಿರ್ಧಾರ ಮತ್ತು ಅನುಷ್ಠಾನದಲ್ಲಿ ಚುನಾಯಿತ ಪ್ರತಿನಿಧಿಗಳ ಪಾಲ್ಗೊಳ್ಳುವಿಕೆ ಇಲ್ಲವಾಗಿತ್ತು. ಇದಲ್ಲದೆ, ಕೌನ್ಸಿಲ್‌ಗಳಿಲ್ಲದ ನಗರ ಸ್ಥಳೀಯ ಸಂಸ್ಥೆಗಳನ್ನು ನಾಗರೀಕರು ಹೊಣೆಗಾರರನ್ನಾಗಿ ಮಾಡಲಾಗುವುದಿಲ್ಲ. ರಾಜ್ಯ ಸರ್ಕಾರವು ಈ 210 ನಗರ ಸ್ಥಳೀಯ ಸಂಸ್ಥೆಗಳಿಗೆ ಆಡಳಿತಾಧಿಕಾರಿಗಳನ್ನು[6] ನೇಮಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆಡಳಿತಾಧಿಕಾರಿಗಳಿಗೆ ಸಹಾಯ ಮಾಡಲು ಅಧಿಸೂಚನೆಯ ಮೂಲಕ ಸಲಹಾ ಸಮಿತಿಯನ್ನು[7] ರಚಿಸಲು ಕಾಯ್ದೆಗಳು ಅವಕಾಶ ಕಲ್ಪಿಸಿದ್ದರೂ ಯಾವುದೇ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅವುಗಳನ್ನು ರಚಿಸಿರಲಿಲ್ಲ. ಕಲ್ಯಾಣ ಯೋಜನೆಗಳಿಗೆ ಅರ್ಹ ಫಲಾನುಭವಿಗಳನ್ನು ಗುರುತಿಸುವುದು, ಅಭಿವೃದ್ಧಿ ಕಾರ್ಯಗಳಿಗೆ ಆದ್ಯತೆ ನೀಡುವುದು ಮುಂತಾದ ಸಾರ್ವಜನಿಕ ಹಿತಾಸಕ್ತಿಗಳನ್ನು ಒಳಗೊಂಡ ನೀತಿಗಳ ವಿಷಯದಲ್ಲಿ ಕಾರ್ಯಗಳನ್ನು ಅನುಷ್ಠಾನಗೊಳಿಸುವಲ್ಲಿ ಇದು ಪರಿಣಾಮ ಬೀರಿತು.

### *4.2.2* ಮೇಯರ್/ಅಧ್ಯಕ್ಷರು

ಮೇಯರ್/ಅಧ್ಯಕ್ಷರು ನಗರದ ಮೊದಲ ಪ್ರಜೆ. ಕೌನ್ಸಿಲ್‌ಗೆ ಚುನಾಯಿತರಾದ ಸದಸ್ಯರುಗಳಿಂದ ಮೇಯರ್ ಆಯ್ಕೆಯಾಗುತ್ತಾರೆ, ಪೌರಸಂಸ್ಥೆಯ ಪ್ರತಿಯೊಂದು ಸಭೆಯ ಅಧ್ಯಕ್ಷತೆಯನ್ನು ವಹಿಸುವ ಅಧಿಕಾರ ಹೊಂದಿದ್ದಾರೆ, ಪರಿಶೀಲನೆಯ ಮಾಡುವ ಅಧಿಕಾರವಿದೆ, ಕಾರ್ಪೊರೇಶನ್/ಕೌನ್ಸಿಲ್‌ಗಳ ಯಾವುದೇ ನಿರ್ಣಯಗಳನ್ನು ಕಾರ್ಯಗತಗೊಳಿಸಲು ಆಯುಕ್ತರು/ಮುಖ್ಯಾಧಿಕಾರಿಗೆ (ಕಾರ್ಯ ನಿರ್ವಾಹಕ ಅದಿಕಾರಿ) ನಿರ್ದೇಶನಗಳನ್ನು ನೀಡಬಹುದು ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಯಾವುದೇ

[6] ಕೆಎಮ್‌ಸಿ ಅಧಿನಿಯಮದ ಪರಿಚ್ಛೇದಗಳು 99 ಮತ್ತು 100 ಹಾಗೂ ಕೆಎಮ್ ಅಧಿನಿಯಮದ ಪರಿಚ್ಛೇದಗಳು 315 ಮತ್ತು 316.

[7] ಕೆಎಮ್‌ಸಿ ಅಧಿನಿಯಮದ ಪರಿಚ್ಛೇದ 99 (6)ರ ಅನ್ವಯ ಸಲಹಾ ಸಮಿತಿಯು ಈ ಕಾಯಿದೆಯಡಿ ಕೌನ್ಸಿಲರ್‌ಗಳಾಗಲು ಅರ್ಹರಾಗಿರುವ ಹದಿನೈದಕ್ಕಿಂತ ಕಡಿಮೆ ಮತ್ತು ಇಪ್ಪತ್ತೈದಕ್ಕಿಂತ ಹೆಚ್ಚು ವ್ಯಕ್ತಿಗಳನ್ನು ಒಳಗೊಂಡಿರುವುದು. ಕೆಎಮ್ ಅಧಿನಿಯಮದ ನಿಬಂಧನೆಗಳು ಅಂತಹ ಯಾವುದೇ ಸ್ಥಿತಿಯನ್ನು ನಿಗದಿಪಡಿಸಿರಲಿಲ್ಲ.

ದಾಖಲೆಗಳನ್ನು ತರಿಸಿಕೊಳ್ಳಬಹುದು. ಮೇಯರ್/ಅಧ್ಯಕ್ಷರೊಂದಿಗೆ ಸಮಾಲೋಚಿಸಿ ಸರ್ಕಾರವು ಆಯುಕ್ತರು/ಮುಖ್ಯಾಧಿಕಾರಿ ಮತ್ತು ಕೌನ್ಸಿಲ್‌ನ ಕಾರ್ಯದರ್ಶಿಗಳನ್ನು ನೇಮಿಸುತ್ತದೆ.

ಭಾರತ ಸರ್ಕಾರದ ನಗರಾಭಿವೃದ್ಧಿ ಸಚಿವಾಲಯವು ಪ್ರಕಟಿಸಿದ ಮಾದರಿ ಮುನಿಸಿಪಲ್ ಕಾನೂನು, 2003ರಲ್ಲಿ ಮೇಯರ್/ಅಧ್ಯಕ್ಷರ ಅಧಿಕಾರಾವಧಿಯು ಪೌರಸಂಸ್ಥೆಗಳ ಕಾಲಾವಧಿಗೆ ಸರಿಸಮಾನವಾಗಿರಬೇಕು ಎಂದು ಸೂಚಿಸುತ್ತದೆ. ಪೌರಸಂಸ್ಥೆಗಳ ಮೇಯರ್/ಅಧ್ಯಕ್ಷರ ಹುದ್ದೆಗಳನ್ನು ಪ.ಜಾ, ಪ.ಪಂ ಮತ್ತು ಮಹಿಳೆಯರಿಗೆ ನಿಯಮಗಳಲ್ಲಿ ಸೂಚಿಸಲಾದ ಮಟ್ಟಿಗೆ ಮತ್ತು ರೀತಿಯಲ್ಲಿ ಮೀಸಲಿಡಬೇಕು.

ಕರ್ನಾಟಕದಲ್ಲಿ ಮಹಾನಗರ ಪಾಲಿಕೆಗಳ ಮೇಯರ್/ಉಪಮೇಯರ್‌ಗಳ ಅಧಿಕಾರಾವಧಿಯು ಚುನಾವಣೆಯ ದಿನಾಂಕದಿಂದ ಒಂದು ವರ್ಷವಾದರೆ ಇತರೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅವಧಿಯು ಚುನಾವಣೆಯ ದಿನಾಂಕದಿಂದ ಮೂವತ್ತು ತಿಂಗಳಾಗಿರುತ್ತದೆ. ಮೇಯರ್ ಮತ್ತು ಉಪಮೇಯರ್/ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಹುದ್ದೆಗಳನ್ನು ವಿವಿಧ ವರ್ಗಗಳಾದ ಪ.ಜಾ/ಪ.ಪಂ, ಹಿಂದುಳಿದ ವರ್ಗ, ಮಹಿಳಾ ಮತ್ತು ಸಾಮಾನ್ಯ ವರ್ಗಗಳಿಗೆ ಮೀಸಲಿಡಲಾಗಿತ್ತು ಮತ್ತು ಪರ್ಯಾಯ ಮಾಡಲಾಗಿತ್ತು. ಆದ್ದರಿಂದ ಮೇಯರ್‌ಗೆ ಒಂದು ವರ್ಷದ ಅವಧಿ ಪರಿಣಾಮಕಾರಿ ಸುಧಾರಣೆಗಳನ್ನು ಕೈಗೊಳ್ಳಲು ತುಂಬಾ ಕಡಿಮೆಯಿದ್ದಿತು ಮತ್ತು ನಾಯಕತ್ವದ ಬದಲಾವಣೆಯಿಂದ ಆದ್ಯತೆಗಳಲ್ಲಿ ಬದಲಾವಣೆಯಾಗುವ ಸಾಧ್ಯತೆಯಿರುತ್ತದೆ. ಬಹಳಷ್ಟು ಸಲ, ಮೇಯರ್‌ಗಳು ತಾವು ಘೋಷಿಸಿದ ಯೋಜನೆಗಳು ಕೊನೆಯ ಹಂತ ತಲುಪುವುದನ್ನು ನೋಡಲು ಸಹ ಸಿಗದಿರಬಹುದು. ಹೀಗಾಗಿ, ದೀರ್ಘಾವಧಿಯ ಅವಶ್ಯಕತೆಯಿದೆ. ದೇಶದ ವಿವಿಧ ನಗರಗಳಲ್ಲಿನ ಮೇಯರ್‌ಗಳ ಅಧಿಕಾರಾವಧಿ ಮತ್ತು ಅಧಿಕಾರಗಳ ಹೋಲಿಕೆ ಈ ಕೆಳಗಿನವುಗಳನ್ನು ತಿಳಿಯಪಡಿಸಿತು.

| | |
|---|---|
| **ಮೇಯರ್‌ಗಳ ಅಧಿಕಾರಾವಧಿ** | ದೇಶದ ಕನಿಷ್ಠ 16 ನಗರಗಳು[8] ಕೌನ್ಸಿಲ್‌ಗಳ ಅವಧಿಗೆ ಸಮನಾಗಿ ಐದು ವರ್ಷಗಳ ಮೇಯರ್‌ಗಳ ಅಧಿಕಾರಾವಧಿಯನ್ನು ಹೊಂದಿದೆ. |
| **ಚುನಾವಣಾ ವಿಧಾನ** | ಮೇಲಿನ 16 ನಗರಗಳ ಪೈಕಿ ಆರರಲ್ಲಿ[9] ಮೇಯರ್‌ಗಳ ಹುದ್ದೆಗೆ ನೇರ ಚುನಾವಣೆಯಿದೆ. |
| **ಮೇಯರ್ ಪಾತ್ರ** | ಕೋಲ್ಕತ್ತಾದ ಮೇಯರ್ ಕಾರ್ಯನಿರ್ವಾಹಕ ಮುಖ್ಯಸ್ಥರಾಗಿದ್ದಾರೆ. ಎಲ್ಲ ಯೋಜನೆಗಳಿಗೆ ಮೇಯರ್ ಅನುಮೋದನೆ ನೀಡಬೇಕಾಗಿದೆ. ಮೇಯರ್ ಅನುಮೋದನೆ ನೀಡುವ ಅಧಿಕಾರ ಸಹ ಹೊಂದಿದ್ದಾರೆ, ಬಿಲ್‌ಗಳಿಗೆ ಸಹಿ ಮಾಡುವ ಮತ್ತು ಅನುಮೋದನೆ ಮಾಡುವ ಅಧಿಕಾರವಿದೆ ಮತ್ತು ಸೇವಾ ಕಾರ್ಯಗಳನ್ನು ನಿರ್ವಹಿಸಲು ನಿರ್ದೇಶಿಸಬಹುದು. ಕೊಲ್ಕತ್ತಾ ಹೊರತುಪಡಿಸಿ, ಕೊಚ್ಚಿ ಮತ್ತು ಜೈಪುರದ ಮೇಯರ್‌ಗಳು ಸಹ ಎಲ್ಲ ಯೋಜನೆಗಳಿಗೆ ಅನುಮೋದನೆ ನೀಡುತ್ತಾರೆ ಮತ್ತು ಬಿಲ್‌ಗಳಿಗೆ ಸಹಿ ಮಾಡುವ ಮತ್ತು ಅನುಮೋದನೆ ನೀಡುವ ಅಧಿಕಾರವನ್ನು ಹೊಂದಿರುತ್ತಾರೆ. |
| **ಸಿಬ್ಬಂದಿಯ ಮೇಲೆ ಅಧಿಕಾರ** | ಕೌನ್ಸಿಲ್‌ನಿಂದ ಅನುಮೋದನೆ ಪಡೆದ ನಂತರ ಕಾರ್ಯದರ್ಶಿ ಮತ್ತು ಗೆಜೆಟ್ ಶ್ರೇಣಿಯಲ್ಲಿರುವ ಇತರೆ ಸರ್ಕಾರಿ ಅಧಿಕಾರಿಗಳನ್ನು ಹೊರತುಪಡಿಸಿ ಯಾವುದೇ ಅಧಿಕಾರಿಗಳನ್ನು ಅಮಾನತ್ತುಗೊಳಿಸುವ ಅಧಿಕಾರವನ್ನು ಕೊಚ್ಚಿಯ ಮೇಯರ್ ಹೊಂದಿದ್ದಾರೆ. |

[8] ಭೋಪಾಲ್, ಭುವನೇಶ್ವರ್, ಚೆನ್ನೈ, ಡೆಹ್ರಾಡೂನ್, ಗುವಹಾಟಿ, ಹೈದರಾಬಾದ್, ಜೈಪುರ, ಕಾನ್ಪುರ, ಕೋಲ್ಕತ್ತ, ಲಕ್ನೋ, ಲೂಧಿಯಾನ, ಪಟ್ನ, ರಾಯಪುರ, ರಾಂಚಿ, ತಿರುವನಂತಪುರಂ ಮತ್ತು ವಿಶಾಖಪಟ್ಟಣ.

[9] ಭೋಪಾಲ್, ಡೆಹ್ರಾಡೂನ್, ಕಾನ್ಪುರ, ಲಕ್ನೋ, ರಾಯಪುರ ಮತ್ತು ರಾಂಚಿ.

ಈ ನಿಬಂಧನೆಗಳನ್ನು ರಾಜ್ಯದ ವಿವೇಚನೆಗೆ ಬಿಟ್ಟಿರುವುದರಿಂದ ಮೇಯರ್‌ಗಳ ಅಧಿಕಾರವು ಬೇರೆ ಬೇರೆ ನಗರಗಳಲ್ಲಿ ಬದಲಾಗುತ್ತದೆ. ಮೇಲಿನ ಉದಾಹರಣೆಗಳೊಂದಿಗೆ ಹೋಲಿಸಿದರೆ, ಕರ್ನಾಟಕದ ನಗರಗಳ ಮೇಯರ್‌ಗಳು ದುರ್ಬಲ ನೆಲೆಗಟ್ಟಿನಲ್ಲಿದ್ದಾರೆ.

### *4.2.3* ವಾರ್ಡ್ ಸಮಿತಿಗಳು

ಮೂರು ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಎಲ್ಲ ಪೌರಸಂಸ್ಥೆಗಳಲ್ಲಿ ವಾರ್ಡ್ ಸಮಿತಿಗಳಿಗೆ ಸಂವಿಧಾನವು ಅವಕಾಶ ನೀಡುತ್ತದೆ. ಕೆಎಮ್‌ಸಿ ಅಧಿನಿಯಮಯ ಪರಿಚ್ಛೇದ 13ಹೆಚ್ ಅನ್ವಯ, ಎಲ್ಲಾ ಮಹಾನಗರ ಪಾಲಿಕೆಗಳು ವಾರ್ಡ್‌ಗಳ ಸಮಿತಿಯನ್ನು ರಚಿಸಬೇಕು. ಈ ಸಂಸ್ಥೆಗಳ ಅವಧಿಯು ಕೌನ್ಸಿಲ್‌ನ ಅವಧಿಯೊಂದಿಗೇ ಸಮನಾಗಿರುತ್ತದೆ. ವಾರ್ಡ್ ಸಮಿತಿಗಳು ಪೌರಸಂಸ್ಥೆ ಮತ್ತು ನಾಗರಿಕರ ನಡುವಿನ ಸೇತುವೆಯಾಗಿ ಕಾರ್ಯನಿರ್ವಹಿಸುವವು ಮತ್ತು ನೆರೆಹೊರೆಯ ಆಡಳಿತದ ಸಂಸ್ಥೆಗಳಾಗಿ ಕಾರ್ಯ ನಿರ್ವಹಿಸುವವು ಹಾಗೂ ಚುನಾಯಿತ ಪ್ರತಿನಿಧಿಗಳು ಮತ್ತು ನಾಗರಿಕರ ನಡುವೆ ಬಾಂಧವ್ಯವನ್ನು ಹೆಚ್ಚಿಸಿ ಸ್ಥಳೀಯ ಮಟ್ಟದ ಯೋಜನೆಯಲ್ಲಿ ನಾಗರಿಕರ ಭಾಗವಹಿಸುವಿಕೆಗೆ ವೇದಿಕೆಯನ್ನು ಒದಗಿಸುವುದು. ನಿಧಿಯ ಹಂಚಿಕೆಗಾಗಿ ವಾರ್ಡ್ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುವುದು ಮತ್ತು ಸಲ್ಲಿಸುವುದು, ನಿಗದಿಪಡಿಸಿದ ನಿಧಿಯ ಸೂಕ್ತವಾದ ಬಳಕೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಸಾರ್ವಜನಿಕ ಉಪಯುಕ್ತತೆಗಳ ನಿರ್ವಹಣೆ ಹಾಗೂ ನಿಗಮದ ಆಸ್ತಿಗಳನ್ನು ರಕ್ಷಿಸುವುದು ಮುಂತಾದ ಕರ್ತವ್ಯಗಳನ್ನು ಅವುಗಳು ನಿರ್ವಹಿಸಬೇಕಾಗಿತ್ತು.

ಬಿಬಿಎಮ್‌ಪಿ ಹೊರತುಪಡಿಸಿ ಯಾವುದೇ ಮಹಾನಗರ ಪಾಲಿಕೆಗಳಲ್ಲಿ ವಾರ್ಡ್ ಸಮಿತಿಗಳನ್ನು ರಚಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಸ್ಥಳೀಯ ಆಡಳಿತದಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಸುಗಮಗೊಳಿಸುವ ಉದ್ದೇಶವನ್ನು ಇದು ಸೋಲಿಸಿತು. ಸಮುದಾಯದ ಭಾಗವಹಿಸುವಿಕೆಯ ಅನುಪಸ್ಥಿತಿಯು ಅಭಿವೃದ್ಧಿ ಕಾರ್ಯಗಳ ಆದ್ಯತೆ, ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯ ಮೇಲ್ವಿಚಾರಣೆ ಮಾಡದಿರುವುದು, ಸೃಜಿಸಿದ ಸ್ವತ್ತುಗಳ ಬಳಕೆ ಮತ್ತು ನಿರ್ವಹಣೆ ಇತ್ಯಾದಿಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.

***ಶಿಫಾರಸು–3: ವಾರ್ಡ್ ಸಮಿತಿಗಳನ್ನು ಕೆಎಮ್‌ಸಿ ಅಧಿನಿಯಮದ ಅನ್ವಯ ರಚಿಸಬೇಕು ಮತ್ತು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಪೋಷಿಸಿ ಪ್ರೋತ್ಸಾಹಿಸಬೇಕಾಗಿದೆ, ಇದರಿಂದ ನಾಗರೀಕರ ಆದ್ಯತೆಗಳು ನಗರ ಸ್ಥಳೀಯ ಸಂಸ್ಥೆಗಳ ನಿರ್ಧಾರಗಳಿಗೆ ಕಾರಣವಾಗುತ್ತವೆ.***

### *4.2.4* ಜಿಲ್ಲಾ ಯೋಜನಾ ಸಮಿತಿ

ಅನುಚ್ಛೇದ 243ZD, ಪಂಚಾಯಿತಿಗಳು ಮತ್ತು ಪೌರಸಂಸ್ಥೆಗಳು ಸಿದ್ಧಪಡಿಸಿದ ಯೋಜನೆಗಳ ಕ್ರೋಢೀಕರಣಕ್ಕಾಗಿ ಜಿಲ್ಲಾ ಯೋಜನಾ ಸಮಿತಿಯ ಸ್ಥಾಪನೆಗೆ ಅವಕಾಶ ಒದಗಿಸುತ್ತದೆ. ಪ್ರಾದೇಶಿಕ ಯೋಜನೆ; ನೀರು ಮತ್ತು ಇತರ ಭೌತಿಕ ಮತ್ತು ನೈಸರ್ಗಿಕ ಸಂಪನ್ಮೂಲಗಳ ಹಂಚಿಕೆ; ಮೂಲಸೌಕರ್ಯದ ಸಮಗ್ರ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ ಹಾಗೂ ಆರ್ಥಿಕ ಅಥವಾ ಇತರ ಲಭ್ಯವಿರುವ ಸಂಪನ್ಮೂಲಗಳ ವ್ಯಾಪ್ತಿ ಮತ್ತು ವರ್ಗ, ಇವುಗಳನ್ನು ಸೇರಿದಂತೆ ಪಂಚಾಯಿತಿಗಳ ಮತ್ತು ಪೌರಸಂಸ್ಥೆಗಳ ನಡುವಿನ ಸಾಮಾನ್ಯ ಹಿತಾಸಕ್ತಿಗೆ ಸಂಬಂಧಿಸಿದ ವಿಷಯಗಳ ಮೇಲೆ ಸಮಗ್ರ ಜಿಲ್ಲಾ ಅಭಿವೃದ್ಧಿ ಯೋಜನೆಯನ್ನು (ಡಿಡಿಪಿ) ಜಿಲ್ಲಾ ಯೋಜನಾ ಸಮಿತಿಯು ಸಿದ್ಧಪಡಿಸಬೇಕು. ರಾಜ್ಯ ಯೋಜನೆಯಲ್ಲಿ ಸೇರಿಸುವುದಕ್ಕಾಗಿ ಡಿಡಿಪಿಯನ್ನು ವಿಕೇಂದ್ರೀಕೃತ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ (ಡಿಪಿಡಿಸಿ)[10]

[10] ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ ಪರಿಚ್ಛೇದ 310ಬಿ ಅನ್ವಯ, ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿ ಯೋಜನೆ ಮತ್ತು ವಾರ್ಷಿಕ ಆರ್ಥಿಕ ಯೋಜನೆಯನ್ನು ಪರಿಶೀಲಿಸಲು ಕರ್ನಾಟಕ ವಿಕೇಂದ್ರೀಕೃತ ಯೋಜನೆ

ಮೂಲಕ ರಾಜ್ಯ ಸರ್ಕಾರಕ್ಕೆ ಕಳುಹಿಸಬೇಕು. ಇದಲ್ಲದೆ, ರಾಜ್ಯ ಸರ್ಕಾರವು ಹೊರಡಿಸಿದ (ಏಪ್ರಿಲ್ 2001) ಸುತ್ತೋಲೆಯ ಅನ್ವಯ ಜಿಲ್ಲಾ ಯೋಜನಾ ಸಮಿತಿಯು ನಿಯಮಿತವಾಗಿ ಸಭೆಗಳನ್ನು ನಡೆಸಬೇಕು. ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಂದ ವಾರ್ಷಿಕ ವಂತಿಗೆಯ ಮೂಲಕ ಜಿಲ್ಲಾ ಯೋಜನಾ ಸಮಿತಿಗಳು ಹಣವನ್ನು ಸಂಗ್ರಹಿಸಬೇಕಾಗಿತ್ತು.

ಬಾಗಲಕೋಟೆ ಜಿಲ್ಲೆಯನ್ನು ಹೊರತುಪಡಿಸಿ, ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಯೋಜನಾ ಸಮಿತಿಗಳನ್ನು ರಚಿಸಲಾಗಿತ್ತು ಮತ್ತು ಡಿಪಿಡಿಸಿ ಇನ್ನೂ ರಚನೆಯಾಗಿರಲಿಲ್ಲ. ಜಿಲ್ಲಾ ಯೋಜನಾ ಸಮಿತಿಗಳನ್ನು ರಚಿಸಲಾಗಿದ್ದರೂ, ನಿಯಮಿತವಾಗಿ ಸಭೆಗಳನ್ನು ನಡೆಸಿರಲಿಲ್ಲ ಮತ್ತು ಪರೀಕ್ಷಾ–ತನಿಖೆ ನಡೆಸಿದ್ದ 44 ನಗರ ಸ್ಥಳೀಯ ಸಂಸ್ಥೆಗಳು ಇರುವ 26 ಜಿಲ್ಲೆಗಳಲ್ಲಿ ಯಾವುದೇ ಜಿಲ್ಲೆಯಲ್ಲಿಯೂ ಒಟ್ಟಾರೆ ಜಿಲ್ಲೆಗೆ ಕ್ರೋಢೀಕೃತ ಡಿಡಿಪಿಯನ್ನು ತಯಾರಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪರೀಕ್ಷಾ–ತನಿಖೆ ನಡೆಸಿದ ಯಾವುದೇ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಿರಲಿಲ್ಲ. ಕುಂದಾಪುರ ಪುರಸಭೆಯನ್ನು ಹೊರತುಪಡಿಸಿ, ಪರೀಕ್ಷಾ–ತನಿಖೆ ನಡೆಸಿದ ಇತರ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಯಾವುದೂ ಜಿಲ್ಲಾ ಯೋಜನಾ ಸಮಿತಿಗೆ ವಂತಿಗೆಯನ್ನು ನೀಡಿರಲಿಲ್ಲ. ಸ್ಥಳೀಯ ಅಗತ್ಯತೆಗಳು ಮತ್ತು ಸಾಮಾನ್ಯ ಹಿತಾಸಕ್ತಿಗಳಾದ ಕುಡಿಯುವ ನೀರು, ರಸ್ತೆಗಳು ಮತ್ತು ಒಳಚರಂಡಿ ವ್ಯವಸ್ಥೆ, ಘನತ್ಯಾಜ್ಯ ನಿರ್ವಹಣೆ ಇತ್ಯಾದಿಗಳನ್ನು ಗಣನೆಗೆ ತೆಗೆದುಕೊಂಡು ಜಿಲ್ಲಾ ಯೋಜನಾ ಸಮಿತಿಯು ಸಮಗ್ರ ಡಿಡಿಪಿಯನ್ನು ಸಿದ್ಧಪಡಿಸದಿರುವುದು ನಗರ ಸ್ಥಳೀಯ ಸಂಸ್ಥೆಗಳಿಗೆ ವಹಿಸಲಾದ ಪ್ರಕಾರ್ಯಗಳ ಪರಿಣಾಮಕಾರಿ ಅನುಷ್ಠಾನವನ್ನು ಬಾಧಿಸಿತು.

### *4.2.5* ಮಹಾನಗರ ಯೋಜನಾ ಸಮಿತಿ

ಪ್ರತಿಯೊಂದು ಮಹಾನಗರ ಪ್ರದೇಶಕ್ಕಾಗಿ ಅಂಥ ಇಡೀ ಪ್ರದೇಶಕ್ಕೆ ಅಭಿವೃದ್ಧಿ ಯೋಜನೆಯ ಕರಡನ್ನು ಸಿದ್ಧಪಡಿಸಲು ಪ್ರತಿ ಮಹಾನಗರ ಪ್ರದೇಶದಲ್ಲಿ[11] ಮಹಾನಗರ ಯೋಜನಾ ಸಮಿತಿಯನ್ನು ರಚಿಸಬೇಕೆಂದು ಅನುಚ್ಛೇದ 243ZE ಅಧ್ಯಾದೇಶ ನೀಡುತ್ತದೆ. ಕೆಎಮ್‌ಸಿ ಅಧಿನಿಯಮ, 1976ರ ಪರಿಚ್ಛೇದ 503ಬಿ ಬೆಂಗಳೂರು ಮಹಾನಗರ ಪ್ರದೇಶಕ್ಕೆ ಅಭಿವೃದ್ಧಿ ಯೋಜನೆಯ ಕರಡನ್ನು ಸಿದ್ಧಪಡಿಸಲು ಮಹಾನಗರ ಯೋಜನಾ ಸಮಿತಿಯನ್ನು ರಚನೆ ಮಾಡಬೇಕೆಂದು ನಿಗದಿಪಡಿಸುತ್ತದೆ. ಬೆಂಗಳೂರು ಮಹಾನಗರ ಯೋಜನಾ ಸಮಿತಿ ನಿಯಮಗಳು, 2013ಅನ್ನು ಕೆಎಮ್‌ಸಿ ಅಧಿನಿಯಮ, 1976ರ ಪರಿಚ್ಛೇದ 503 ಎ ಮತ್ತು ಬಿ ಅಡಿಯಲ್ಲಿ ರೂಪಿಸಲಾಯಿತು ಮತ್ತು 4 ಜನವರಿ 2014ರಂದು ಸೂಚಿಸಲಾಯಿತು.

ಮಹಾನಗರ ಯೋಜನಾ ಸಮಿತಿಯನ್ನು 2014ರಲ್ಲಿ ಸ್ಥಾಪಿಸಿದ್ದರೂ ಸಹ ಅದು ನಿಗದಿಪಡಿಸಿದಂತೆ ಕಾರ್ಯ ನಿರ್ವಹಿಸುತ್ತಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅದರ ಸ್ಥಾಪನೆಯ ನಂತರ, ಮೂರು ತಿಂಗಳಿಗೊಮ್ಮೆ ಸಭೆ ನಡೆಸಬೇಕು ಎಂಬ ಷರತ್ತಿನ ಹೊರತಾಗಿಯೂ ಮಹಾನಗರ ಯೋಜನಾ ಸಮಿತಿಯು ಕೇವಲ ಮೂರು ಬಾರಿ (ಜೂನ್ 2016, ಡಿಸೆಂಬರ್ 2016 ಮತ್ತು ಜನವರಿ 2018) ಸಭೆ ಸೇರಿತ್ತು. ಅಲ್ಲದೆ, ಮಹಾನಗರ ಪ್ರದೇಶದ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದ ಯಾವುದೇ ಮಹತ್ವದ ವಿಷಯಗಳನ್ನು ಹಾಗೂ ಪ್ರಾದೇಶಿಕ ಯೋಜನೆ; ನೀರು ಮತ್ತು ಇತರ ಭೌತಿಕ ಮತ್ತು ನೈಸರ್ಗಿಕ ಸಂಪನ್ಮೂಲಗಳ ಹಂಚಿಕೆ; ಮೂಲಸೌಕರ್ಯದ ಸಮಗ್ರ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ ಇವುಗಳನ್ನು ಒಳಗೊಂಡಂತೆ ಸ್ಥಳೀಯ ಪ್ರಾಧಿಕಾರಗಳ ನಡುವಿನ ಒಂದೇ ಹಿತಾಸಕ್ತಿಯ ಯಾವುದೇ ವಿಷಯಗಳನ್ನು

---

ಮತ್ತು ಅಭಿವೃದ್ಧಿ ಸಮಿತಿಯನ್ನು ರಚಿಸಬೇಕಿದೆ. ಮುಖ್ಯಮಂತ್ರಿಯವರು ಅಧ್ಯಕ್ಷರಾಗಿರುತ್ತಾರೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ನಗರಾಭಿವೃದ್ಧಿ, ಹಣಕಾಸು ಹಾಗೂ ಯೋಜನಾ ಇಲಾಖೆಯ ಮಂತ್ರಿಗಳು ಸದಸ್ಯರಾಗಿರುತ್ತಾರೆ.

[11] ಒಂದು ಮಿಲಿಯನ್ ಜನಸಂಖ್ಯೆಯಿರುವ ಪ್ರದೇಶವನ್ನು ಮಹಾನಗರ ಪ್ರದೇಶವೆಂದು ವ್ಯಾಖ್ಯಾನಿಸಬಹುದು.

ಚರ್ಚಿಸಲಿಲ್ಲ. ತತ್ಪರಿಣಾಮವಾಗಿ ಬೆಂಗಳೂರು ಮಹಾನಗರ ಪ್ರದೇಶದ ಸಮಗ್ರ ಅಭಿವೃದ್ಧಿ ಯೋಜನೆಯನ್ನು ಇಲ್ಲಿಯವರೆಗೆ ಸಿದ್ಧಪಡಿಸಿರಲಿಲ್ಲ.

***ಶಿಫಾರಸು 4: ಸೂಕ್ತವಾದ ಮತ್ತು ಅತಿಹೆಚ್ಚಾದ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಕಾರಣವಾಗುವಂತೆ ಜಿಲ್ಲಾ ಯೋಜನಾ ಸಮಿತಿ ಮತ್ತು ಮಹಾನಗರ ಯೋಜನಾ ಸಮಿತಿಗಳ ಸಂಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳಲು ಅವರುಗಳು ನಿಯಮಿತವಾಗಿ ಸಭೆ ನಡೆಸುವುದನ್ನು ಖಚಿತಪಡಿಸಿಕೊಳ್ಳಬೇಕು.***

### 4.2.6 ರಾಜ್ಯ ಹಣಕಾಸು ಆಯೋಗ

ಸಂವಿಧಾನ ತಿದ್ದುಪಡಿಯ ಕಾಯ್ದೆ ಪ್ರಾರಂಭವಾದ ಒಂದು ವರ್ಷದೊಳಗೆ ಮತ್ತು ತದನಂತರ ಪ್ರತಿ ಐದು ವರ್ಷಗಳ ಅವಧಿ ಮುಗಿದ ನಂತರ ರಾಜ್ಯ ಸರ್ಕಾರವು ರಾಜ್ಯ ಹಣಕಾಸು ಆಯೋಗವನ್ನು (ಆಯೋಗ) ರಚಿಸುವುದಕ್ಕೆ ಭಾರತದ ಸಂವಿಧಾನದ ಅನುಚ್ಛೇದ 243I ಕಡ್ಡಾಯ ಮಾಡಿದೆ. ಸ್ಥಳೀಯ ಹಣಕಾಸು ಸಂಸ್ಥೆಗಳ ಆರ್ಥಿಕ ಸ್ಥಿತಿಯನ್ನು ಪರಿಶೀಲಿಸಿ ನಿಧಿಯ ಹಂಚಿಕೆಗಾಗಿ ರಾಜ್ಯಪಾಲರಿಗೆ ಶಿಫಾರಸುಗಳನ್ನು ಮಾಡುವುದು ಆಯೋಗದ ಅಧ್ಯಾದೇಶವಾಗಿದೆ. ಕೆಎಮ್ ಮತ್ತು ಕೆಎಮ್‌ಸಿ ಕಾಯ್ದೆಗಳಲ್ಲಿ ತಿದ್ದುಪಡಿ ಮಾಡುವ ಮೂಲಕ ರಾಜ್ಯ ಸರ್ಕಾರ ಆಯೋಗದ ರಚನೆಗಾಗಿ ಅವಕಾಶ ಒದಗಿಸಿತು.

#### 4.2.6.1 ರಾಜ್ಯ ಹಣಕಾಸು ಆಯೋಗವನ್ನು ರಚಿಸುವಲ್ಲಿ ಮತ್ತು ಶಿಫಾರಸುಗಳ ಅನುಷ್ಠಾನದಲ್ಲಿ ವಿಳಂಬ

ಸಾಂವಿಧಾನಿಕ ನಿಬಂಧನೆಗಳು ಮತ್ತು ಕಾಯ್ದೆಗಳ ಅನ್ವಯ, 6ನೇ ಆಯೋಗದ ಶಿಫಾರಸುಗಳ ಅನುಷ್ಠಾನವು 2019–20ರಿಂದ ಪ್ರಾರಂಭವಾಗಬೇಕಿತ್ತು. ಆದರೆ, ಪ್ರಸ್ತುತ 4ನೇ ಆಯೋಗದ ಶಿಫಾರಸುಗಳನ್ನು 2018–19ರಿಂದ 2022–23ರವರೆಗೆ, ಒಂಬತ್ತು ವರ್ಷಗಳ ವಿಳಂಬ ದೊಂದಿಗೆ ಜಾರಿ ಮಾಡಲಾಗುತ್ತಿದೆ. **ಕೋಷ್ಟಕ–4.3ರಲ್ಲಿ** ತೋರಿಸಿರುವಂತೆ ಆಯೋಗದ ರಚನೆಯಲ್ಲಿ/ ಆಯೋಗದ ಶಿಫಾರಸುಗಳ ಅನುಷ್ಠಾನದಲ್ಲಿ ವಿಳಂಬವಾಗಿರುವುದು ಇದಕ್ಕೆ ಕಾರಣವಾಗಿತ್ತು.

**ಕೋಷ್ಟಕ–*4.3:* ರಾಜ್ಯ ಹಣಕಾಸು ಆಯೋಗದ ರಚನೆ ಮತ್ತು ಶಿಫಾರಸುಗಳ ಅನುಷ್ಠಾನದಲ್ಲಿ ವಿಳಂಬವನ್ನು ತೋರಿಸುವ ತಃಖ್ತೆ**

| ಆಯೋಗ | ಸಂವಿಧಾನದ ಅನ್ವಯ ಈ ಅವಧಿಯಲ್ಲಿ ರಚಿತವಾಗಬೇಕಿತ್ತು | ಹಿಂದಿನ ಆಯೋಗಗಳ ಉಲ್ಲೇಖದೊಂದಿಗೆ ರಚಿತವಾಗಬೇಕಿದ್ದು | ವಾಸ್ತವಿಕವಾಗಿ ರಚಿಸಿದ್ದು | ವಿಳಂಬ ದಿನಗಳಲ್ಲಿ | ಸಲ್ಲಿಸಿದ ದಿನಾಂಕ | ಒಪ್ಪಿಕೊಂಡ ದಿನಾಂಕ | ವಿಳಂಬ ದಿನಗಳಲ್ಲಿ | ವ್ಯಾಪಿಸಿದ್ದ ಅವಧಿ |
|---|---|---|---|---|---|---|---|---|
| ಮೊದಲನೇ | 31 ಮೇ 1994 ರೊಳಗೆ | ಅನ್ವಯವಾಗುವುದಿಲ್ಲ | 10.06.1994 | 10 | 05.08.1996 | 31.03.1997 | 238 | 1997–98 ರಿಂದ 2001–02 |
| ಎರಡನೇ | 1999–2000 | ಜೂನ್ 1999 | 25.10.2000 | 474 | 23.12.2002 | 29.06.2006 | 1,284 | 2006–07 ರಿಂದ 2010–11 |
| ಮೂರನೇ | 2004–05 | ಅಕ್ಟೋಬರ್ 2005 | 28.08.2006 | 327 | ಡಿಸೆಂಬರ್ 2009 | 31.10.2011 | 669 | 2011–12 ರಿಂದ 2015–16 |
| ನಾಲ್ಕನೇ | 2009–10 | ಆಗಸ್ಟ್ 2011 | 21.12.2015 | 1,600 | ಮೇ 2018 | 07.12.2018 | 190 | 2018–19 ರಿಂದ 2022–23 |

ಆಧಾರ: ಆಯೋಗದ ವರದಿಗಳು ಮತ್ತು ನಗರಾಭಿವೃದ್ಧಿ ಇಲಾಖೆಯು ಒದಗಿಸಿದ ಮಾಹಿತಿ

ಆಯೋಗಗಳ ರಚನೆಯಲ್ಲಿ ಮತ್ತು ಆಯೋಗಗಳ ಶಿಫಾರಸುಗಳನ್ನು ಅನುಷ್ಠಾನಗೊಳಿಸುವುದರಲ್ಲಿನ ವಿಳಂಬವು ಹಿಂದಿನ ಆಯೋಗಗಳ ಶಿಫಾರಸುಗಳ ಆಧಾರದ ಮೇಲೆ ನಗರ ಸ್ಥಳೀಯ ಸಂಸ್ಥೆಗಳಿಗೆ ಹಣವನ್ನು ವಿತರಿಸುವಲ್ಲಿ ಪರಿಣಮಿಸಿತು (2002–03, 2003–04, 2004–05 ಮತ್ತು 2005–06 – 1 ನೇ ಆಯೋಗ; 2016–17 ಮತ್ತು 2017–18 –3ನೇ ಆಯೋಗ), ಇದು ನಗರ ಸ್ಥಳೀಯ ಸಂಸ್ಥೆಗಳ

ಆರ್ಥಿಕ ಸ್ಥಿತಿಯ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡಿತ್ತು. ಅದರ ಪರಿಣಾಮಗಳನ್ನು ***ಕಂಡಿಕೆ 5.1.1.1*** ರಲ್ಲಿ ಚರ್ಚಿಸಲಾಗಿದೆ. ಬಿಹಾರ ಮತ್ತು ತಮಿಳುನಾಡು ಸರ್ಕಾರಗಳು 6ನೇ ಆಯೋಗವನ್ನು ರಚಿಸಿದ್ದರೆ, ಹಿಮಾಚಲ ಪ್ರದೇಶ, ಮಧ್ಯಪ್ರದೇಶ, ಮಹಾರಾಷ್ಟ್ರ, ಪಂಜಾಬ್, ರಾಜಸ್ಥಾನ ಮತ್ತು ಉತ್ತರ ಪ್ರದೇಶ ಸರ್ಕಾರಗಳು 5ನೇ ಆಯೋಗವನ್ನು ರಚಿಸಿವೆ ಹಾಗೂ ದೆಹಲಿ ಮತ್ತು ಕೇರಳದಲ್ಲಿ ಆಯೋಗಗಳು 5ನೇ ವರದಿಯನ್ನು ಸಲ್ಲಿಸಿವೆ.

#### *4.2.6.2* ಆಯೋಗದ ಶಿಫಾರಸುಗಳಿಗೆ ರಾಜ್ಯ ಸರ್ಕಾರದ ಪ್ರತಿಕ್ರಿಯೆ

ಆಯೋಗದ ಶಿಫಾರಸುಗಳನ್ನು ರಾಜ್ಯ ಸರ್ಕಾರ ಒಟ್ಟಾರೆಯಾಗಿ ಅಥವಾ ಕೆಲವು ಮಾರ್ಪಾಡುಗಳೊಂದಿಗೆ ಸ್ವೀಕರಿಸಬಹುದು. ರಾಜ್ಯ ಸರ್ಕಾರವು ಕೆಲವು ಶಿಫಾರಸುಗಳನ್ನು ಮಾರ್ಪಾಡುಗಳೊಂದಿಗೆ ಒಪ್ಪಿಕೊಂಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು ಮತ್ತು ಇತರ ಶಿಫಾರಸುಗಳ ಕುರಿತು ಇನ್ನೂ ಕ್ರಮ ಕೈಗೊಂಡಿರಲಿಲ್ಲ. ಹಣ ವರ್ಗಾವಣೆಗೆ ಸಂಬಂಧಿಸಿದಂತೆ ಆಯೋಗವಾರು ಪ್ರಮುಖ ಶಿಫಾರಸುಗಳನ್ನು ಮತ್ತು ಅವುಗಳ ಮಾರ್ಪಾಡುಗಳನ್ನು **ಕೋಷ್ಟಕ–4.4**ರಲ್ಲಿ ನೀಡಲಾಗಿದೆ.

**ಕೋಷ್ಟಕ–*4.4:* ಆಯೋಗವಾರು ಪ್ರಮುಖ ಶಿಫಾರಸುಗಳು ಮತ್ತು ಅವುಗಳ ಮಾರ್ಪಾಡುಗಳು**

| ಆಯೋಗ | ಶಿಫಾರಸುಗಳು | ಮಾರ್ಪಾಡುಗಳು |
|---|---|---|
| **ಮೊದಲನೇ** | ರಾಜ್ಯ ಸರ್ಕಾರದ ಸಾಲಯೇತರ ಒಟ್ಟು ಸ್ವಂತ ರಾಜಸ್ವದ (ಎನ್‌ಎಲ್‌ಜಿಒಆರ್‌ಆರ್) ಶೇಕಡಾ 5.4ರಷ್ಟು ನಗರ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ. | ಸಾಲಯೇತರ ಒಟ್ಟು ಸ್ವಂತ ರಾಜಸ್ವ ಸ್ವೀಕೃತಿಗಳ (ಎನ್‌ಎಲ್‌ಜಿಒಆರ್‌ಆರ್) ಶೇಕಡಾ 5.4ರಷ್ಟನ್ನು ಹಂತ ಹಂತವಾಗಿ ಅಂದರೆ ಐದು ವರ್ಷಗಳ ಅವಧಿಯಲ್ಲಿ ಶೇಕಡಾ 3.6ರಿಂದ ಶೇಕಡಾ 5.40ರವರೆಗೆ ಹಂಚಿಕೆ. |
| **ಎರಡನೇ** | ರಾಜ್ಯ ಸರ್ಕಾರದ ಸಾಲಯೇತರ ಒಟ್ಟು ಸ್ವಂತ ರಾಜಸ್ವದ (ಎನ್‌ಎಲ್‌ಜಿಒಆರ್‌ಆರ್) ಶೇಕಡಾ 8 ರಷ್ಟು ನಗರ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ. | ಎನ್‌ಎಲ್‌ಎನ್‌ಒಆರ್‌ಆರ್‌ನ ಶೇಕಡಾ 8ರಷ್ಟನ್ನು ಹಂತಹಂತವಾಗಿ ಅಂದರೆ ಐದು ವರ್ಷಗಳ ಅವಧಿಯಲ್ಲಿ ಪ್ರತಿ ವರ್ಷ ಶೇಕಡಾ 0.5ರಷ್ಟು ಹೆಚ್ಚಳದೊಂದಿಗೆ ಶೇಕಡಾ 6ರಿಂದ 8 ರವರೆಗೆ ಹಂಚಿಕೆ. |
| **ಮೂರನೇ** | ರಾಜ್ಯ ಸರ್ಕಾರದ ನಿವ್ವಳ ಸ್ವಂತ ರಾಜಸ್ವ ಸ್ವೀಕೃತಿಗಳಲ್ಲಿ (ಎನ್‌ಒಆರ್‌ಆರ್) ಶೇಕಡಾ 10ರಷ್ಟು ನಗರ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ | ಎನ್‌ಎಲ್‌ಎನ್‌ಒಆರ್‌ಆರ್‌ನ ಶೇಕಡಾ 10ರಷ್ಟನ್ನು ಹಂತಹಂತವಾಗಿ ಅಂದರೆ ಐದು ವರ್ಷಗಳ ಅವಧಿಯಲ್ಲಿ ಪ್ರತಿ ವರ್ಷ ಶೇಕಡಾ 0.5ರಷ್ಟು ಹೆಚ್ಚಳದೊಂದಿಗೆ ಶೇಕಡಾ 8.5 ರಿಂದ ಶೇಕಡಾ 10 ರಷ್ಟು ಹಂಚಿಕೆ. |
| **ನಾಲ್ಕನೇ** | ಬಿಬಿಎಂಪಿ ಹೊರತುಪಡಿಸಿ ನಗರ ಸ್ಥಳೀಯ ಸಂಸ್ಥೆಗಳಿಗೆ ವಿನಿಯೋಗಿಸಬೇಕಾದ ರಾಜ್ಯದ ಎನ್‌ಎಲ್‌ಎನ್‌ಒಆರ್‌ಆರ್ ಶೇ 12 ರಷ್ಟು ಹಂಚಿಕೆ. | ಎನ್‌ಎಲ್‌ಎನ್‌ಒಆರ್‌ಆರ್‌ನ ಶೇಕಡಾ 12ರಷ್ಟು ಹಂತಹಂತವಾಗಿ ಅಂದರೆ ಐದು ವರ್ಷಗಳ ಅವಧಿಯಲ್ಲಿ ಪ್ರತಿ ವರ್ಷ ಶೇಕಡಾ 0.5 ರಷ್ಟು ಹೆಚ್ಚಳದೊಂದಿಗೆ ಶೇಕಡಾ 10.5ರಿಂದ 12 ರಷ್ಟು ಹಂಚಿಕೆ |

ಆಧಾರ: ಆಯೋಗದ ವರದಿಗಳು ಮತ್ತು ಸರ್ಕಾರಿ ಆದೇಶಗಳು

ಹಂಚಿಕೆಗೆ ಸಂಬಂಧಿಸಿದ ಶಿಫಾರಸುಗಳಲ್ಲದೆ, ಆಯೋಗಗಳು ನಗರ ಸ್ಥಳೀಯ ಸಂಸ್ಥೆಗಳನ್ನು ದೀರ್ಘಾವಧಿಯಲ್ಲಿ ಬಲಪಡಿಸುವ ಹಲವಾರು ಸಾಂಸ್ಥಿಕ ಕ್ರಮಗಳನ್ನು ಶಿಫಾರಸು ಮಾಡಿವೆ. ಕ್ರಮವನ್ನು ಇನ್ನೂ ಪ್ರಾರಂಭಿಸಬೇಕಾಗಿರುವ ಶಿಫಾರಸುಗಳ ಉದಾಹರಣಾ ಪಟ್ಟಿಯನ್ನು ಕೆಳಗೆ ನೀಡಲಾಗಿದೆ:

- ಪೌರಸಂಸ್ಥೆಗಳ ಕ್ರಿಯಾತ್ಮಕ ಅಗತ್ಯತೆಗಳಿಗೆ ಅನುಗುಣವಾಗಿ ವೆಚ್ಚದ ಅಧಿಕಾರಕ್ಕೆ ಸಂಬಂಧಿಸಿದ ನಿಯಮಗಳ ನಿಯಮಿತ ಪರಿಷ್ಕರಣೆ;

- ಮಾನವ ಸಂಪನ್ಮೂಲ ನಿರ್ವಹಣಾ ನೀತಿಯನ್ನು ರೂಪಿಸುವುದು ಮತ್ತು ಅದರಲ್ಲಿ ನಿಯಮಿತವಾಗಿ ನೇಮಕಾತಿ ಮತ್ತು ಸಿಬ್ಬಂದಿಗಳ ತರಬೇತಿ ಇರಬೇಕು;
- ಚುನಾಯಿತ ನಗರ ಸ್ಥಳೀಯ ಸಂಸ್ಥೆಗಳೊಂದಿಗೆ ನಗರ ನಾಗರಿಕ ಸೇವಾ ಸಂಸ್ಥೆಗಳ ಏಕೀಕರಣ;
- ಬಿಡಿಎ ಸೇರಿದಂತೆ ಅಸ್ತಿತ್ವದಲ್ಲಿರುವ ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ಆಯಾ ಚುನಾಯಿತ ಪೌರಸಂಸ್ಥೆಗಳ ಅಡಿಯಲ್ಲಿ ತರಬೇಕು. ಕೊಳೆಗೇರಿ ಸುಧಾರಣೆಯನ್ನು ಸಹ ಈ ಸಂಸ್ಥೆಗಳ ಅಡಿಯಲ್ಲಿ ತರಬೇಕು;
- ಎಲ್ಲಿ ಪಟ್ಟಣ ಯೋಜನಾ ಘಟಕಗಳು ಅಸ್ತಿತ್ವದಲ್ಲಿವೆಯೋ ಅವುಗಳನ್ನು ಪೌರಸಂಸ್ಥೆಗಳಿಗೆ ವರ್ಗಾಯಿಸಬಹುದು. ನಗರ ವನ ನಿರ್ಮಾಣದಂತಹ ಕಾರ್ಯಗಳನ್ನು ಸಹ ಚುನಾಯಿತ ಪೌರಸಂಸ್ಥೆಗಳಿಗೆ ವಹಿಸಬೇಕು;
- ಪೌರಸಂಸ್ಥೆಯ ನೌಕರರ ಸೇವಾ ಷರತ್ತುಗಳಿಗೆ ಸಂಬಂಧಿಸಿದ ಎಲ್ಲಾ ನಿರ್ಧಾರಗಳನ್ನು ಆಯಾ ನಗರ ಸ್ಥಳೀಯ ಸಂಸ್ಥೆಗಳು ತೆಗೆದುಕೊಳ್ಳಬೇಕು;
- ಅನರ್ಹ ವ್ಯಕ್ತಿಗಳನ್ನು ಪುರಸಭೆಗಳ ಮತ್ತು ಪಟ್ಟಣ ಪಂಚಾಯತಿಗಳ ಮುಖ್ಯಾಧಿಕಾರಿಗಳನ್ನಾಗಿ ನೇಮಿಸುವ ಅಭ್ಯಾಸವನ್ನು ನಿಲ್ಲಿಸಬೇಕು;
- ಆದಾಯದ ಮೂಲವಾಗಿ ಪಾರ್ಕಿಂಗ್ ಶುಲ್ಕವನ್ನು ಬಳಕೆ ಮಾಡುವುದು;
- ನೀರು ಸರಬರಾಜಿನ ಪೂರ್ಣ ವೆಚ್ಚ ವಸೂಲಾತಿ;
- ಐಐಎಂಬಿ, ಐಐಎಸ್ಸಿ, ಐಐಟಿ ಮತ್ತು ಇತರ ಪ್ರಮುಖ ಸಂಸ್ಥೆಗಳ ಸಹಕಾರದೊಂದಿಗೆ ನಗರ ನಿರ್ವಹಣೆಗೆ ನಗರ ವ್ಯವಸ್ಥಾಪಕರು/ನಗರ ವಿಶೇಷತೆಗಳಿಗೆ ತರಬೇತಿ ನೀಡುವ ಸಂಸ್ಥೆಯ ರಚನೆ.

ಮೇಲಿನ ಶಿಫಾರಸುಗಳ ಅನುಷ್ಠಾನವನ್ನು ಮಾಡಿದ್ದರೆ 74ನೇ ಸಂವಿಧಾನ ತಿದ್ದುಪಡಿ ಕಾಯ್ದೆಯ ಉದ್ದೇಶಗಳ ಸಾಕ್ಷಾತ್ಕಾರಕ್ಕೆ ಗಮನಾರ್ಹ ಕೊಡುಗೆ ನೀಡುತ್ತಿತ್ತು. ಅನುಷ್ಠಾನಗೊಳ್ಳದಿರುವುದು ವಿಕೇಂದ್ರೀಕರಣವನ್ನು ಸಾಧಿಸುವ ಪ್ರಕ್ರಿಯೆಗೆ ನಿಜವಾದ ಹಿನ್ನಡೆಯಾಗಿತ್ತು.

ಶಿಫಾರಸುಗಳ ವಿವರವಾದ ಪಟ್ಟಿ ಮತ್ತು ರಾಜ್ಯ ಸರ್ಕಾರದಿಂದ ಅವುಗಳ ಅನುಸರಣೆಯನ್ನು **ಅನುಬಂಧ-4.1** ರಲ್ಲಿ ನೀಡಲಾಗಿದೆ.

***ಶಿಫಾರಸು-5: ರಾಜ್ಯ ಹಣಕಾಸು ಆಯೋಗಗಳನ್ನು ರಚಿಸುವಲ್ಲಿ ಮತ್ತು ಶಿಫಾರಸುಗಳನ್ನು ಅನುಷ್ಠಾನ ಮಾಡುವಲ್ಲಿ ವಿಳಂಬಗಳನ್ನು ತಪ್ಪಿಸಬೇಕು. ಪ್ರಾಮಾಣಿಕ ಸ್ಥಳೀಯ ಆಡಳಿತದ ಸಂಸ್ಥೆಗಳನ್ನು ರಚಿಸುವ ಅಂತಿಮ ಉದ್ದೇಶವನ್ನು ಗಣನೆಗೆ ತೆಗೆದುಕೊಂಡು, ಹಂಚಿಕೆ ಮತ್ತು ಸಾಂಸ್ಥಿಕ ವಿಷಯಗಳಿಗೆ ಸಂಬಂಧಿಸಿದ ರಾಜ್ಯ ಹಣಕಾಸು ಆಯೋಗಗಳ ಶಿಫಾರಸುಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಸಂಪೂರ್ಣವಾಗಿ ಜಾರಿಗೆ ತರಬೇಕು.***

### *4.2.7* ಆಸ್ತಿ ತೆರಿಗೆ ಮಂಡಳಿ

13ನೇ ಹಣಕಾಸು ಆಯೋಗವು 1980ರಲ್ಲಿ ರಚನೆಯಾದ ಪಶ್ಚಿಮ ಬಂಗಾಳ ಮೌಲ್ಯಮಾಪನ ಮಂಡಳಿಯ ಮಾದರಿಯಲ್ಲಿ ಆಸ್ತಿ ತೆರಿಗೆ ಮಂಡಳಿಯನ್ನು (ಮಂಡಳಿ) ರಚಿಸಬೇಕೆಂದು ಅಧ್ಯಾದೇಶಿಸಿತು. ಆಸ್ತಿ ತೆರಿಗೆಯನ್ನು ನಿರ್ಣಯಿಸಲು ಸ್ವತಂತ್ರ ಮತ್ತು ಪಾರದರ್ಶಕ ಕಾರ್ಯವಿಧಾನವನ್ನು ಜಾರಿಗೆ ತರಲು ರಾಜ್ಯದ ಎಲ್ಲ ಪೌರಸಂಸ್ಥೆಗಳಿಗೆ ಮತ್ತು ಮಹಾನಗರ ಪಾಲಿಕೆಗಳಿಗೆ ಮಂಡಳಿಯು ಸಹಾಯ ಮಾಡಬೇಕಾಗಿತ್ತು. ಮಾರ್ಚ್ 2012ರ ತಿದ್ದುಪಡಿಯ ಮೂಲಕ ಸೇರಿಸಿದ ಕೆಎಮ್‌ಸಿ ಅಧಿನಿಯಮದ ಅಧ್ಯಾಯ IX-A ಅಡಿಯಲ್ಲಿನ 102ಎ ಯಿಂದ 102ವೈ ಪರಿಚ್ಛೇದಗಳು ಕರ್ನಾಟಕ ಆಸ್ತಿ ತೆರಿಗೆ ಮಂಡಳಿಯ ಸ್ಥಾಪನೆಗೆ ಅವಕಾಶ ನೀಡುತ್ತವೆ.

ಆಸ್ತಿ ತೆರಿಗೆ ಮಂಡಳಿ ರಚನೆಗೆ ಅಧಿಸೂಚನೆ ಹೊರಡಿಸಲಾಗಿದ್ದರೂ (ಮಾರ್ಚ್ 2013), ಇಲ್ಲಿಯವರೆಗೆ ಸದಸ್ಯರನ್ನು ನೇಮಕ ಮಾಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತತ್ಪರಿಣಾಮವಾಗಿ, ಆಸ್ತಿ ತೆರಿಗೆಯನ್ನು ಮೌಲ್ಯಮಾಪನ ಮಾಡಲು ಮತ್ತು ಪರಿಷ್ಕರಿಸಲು ನಗರ ಸ್ಥಳೀಯ ಸಂಸ್ಥೆಗಳಿಗೆ ತಾಂತ್ರಿಕ ಮಾರ್ಗದರ್ಶನದ ಕೊರತೆಯಿದ್ದಿತು. ಹೀಗೆ, ಕೆಎಮ್‌ಸಿ ಕಾಯ್ದೆಯ ತಿದ್ದುಪಡಿಯು 13ನೇ ಕೇಂದ್ರ ಹಣಕಾಸು ಆಯೋಗದ ತೀರ್ಪಿನ ಅನ್ವಯ ಕಾರ್ಯಕ್ಷಮತೆ ಅನುದಾನವನ್ನು ಪಡೆಯುವ ಷರತ್ತುಗಳನ್ನು ಪೂರೈಸುವ ಮೇಲ್ನೋಟದ ಕಾರ್ಯವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಆಸ್ತಿ ತೆರಿಗೆ ಮಂಡಳಿಯ ಸಂವಿಧಾನದ ಬಗ್ಗೆ ವಿವರವಾಗಿ ಚರ್ಚಿಸುವ 2017ನೇ ವರ್ಷದ ವರದಿ ಸಂಖ್ಯೆ 5ರ ಕಂಡಿಕೆ 6.1.26ಕ್ಕೆ ಉಲ್ಲೇಖವನ್ನು ಆಹ್ವಾನಿಸಲಾಗಿದೆ.

***ಶಿಫಾರಸು–6: ನಗರ ಸ್ಥಳೀಯ ಸಂಸ್ಥೆಗಳಿಗೆ ತಾಂತ್ರಿಕ ಪರಿಣತಿಯನ್ನು ಒದಗಿಸಲು ಆಸ್ತಿ ತೆರಿಗೆ ಮಂಡಳಿಯನ್ನು ಕಾರ್ಯಾಚರಣೆ ಮಾಡುವ ಅಗತ್ಯವಿದೆ.***

## 4.3 ನಗರ ಸ್ಥಳೀಯ ಸಂಸ್ಥೆಗಳ ಮೇಲೆ ರಾಜ್ಯ ಸರ್ಕಾರದ ಅಧಿಕಾರ

ನಗರ ಸ್ಥಳೀಯ ಸಂಸ್ಥೆಗಳ ಮೇಲೆ ರಾಜ್ಯ ಸರ್ಕಾರವು ಅತಿಕ್ರಮಿಸುವಂತಹ ಅಧಿಕಾರವನ್ನು ಹೊಂದಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು, ಮತ್ತು ಅದು ಸಂವಿಧಾನದ ತಿದ್ದುಪಡಿಯ ಮನೋಭಾವಕ್ಕೆ ವಿರುದ್ಧವಾಗಿತ್ತು. ಕೆಲವು ನಿಬಂಧನೆಗಳನ್ನು **ಕೋಷ್ಟಕ–4.5** ರಲ್ಲಿ ನೀಡಲಾಗಿದೆ.

**ಕೋಷ್ಟಕ–*4.5:* ನಗರ ಸ್ಥಳೀಯ ಸಂಸ್ಥೆಗಳ ಮೇಲೆ ರಾಜ್ಯ ಸರ್ಕಾರದ ಅತಿಕ್ರಮಣದ ಅಧಿಕಾರವನ್ನು ತೋರಿಸುವ ತ:ಖ್ತೆ**

| ಕ್ರಮ ಸಂಖ್ಯೆ | ವಿಷಯ | ನಿಬಂಧನೆ |
|---|---|---|
| 1 | ನಿಯಮಗಳನ್ನು ರಚಿಸಲು ಅಧಿಕಾರ | ರಾಜ್ಯ ಶಾಸಕಾಂಗದ ಅನುಮೋದನೆಯ ನಂತರ ರಾಜ್ಯ ಸರ್ಕಾರವು ಗೆಜೆಟ್‌ನಲ್ಲಿ ಅಧಿಸೂಚನೆ ಮೂಲಕ ಕೆಎಮ್‌ಸಿ/ಕೆಎಎಮ್ ಅಧಿನಿಯಮಗಳ ನಿಯಮಗಳನ್ನು ರಚಿಸಬಹುದು (ಕೆಎಮ್‌ಸಿ ಅಧಿನಿಯಮದ ಪರಿಚ್ಛೇದ 421 ಮತ್ತು ಕೆಎಮ್ ಅಧಿನಿಯಮದ ಪರಿಚ್ಛೇದ 323). |
| 2 | ನಗರ ಸ್ಥಳೀಯ ಸಂಸ್ಥೆಗಳು ತೆಗೆದುಕೊಂಡ ನಿರ್ಣಯ /ನಿರ್ಧಾರವನ್ನು ರದ್ದುಗೊಳಿಸಲು ಅಥವಾ ಅಮಾನತ್ತಿನಲ್ಲಿಡಲು ಅಧಿಕಾರ | ನಗರ ಸ್ಥಳೀಯ ಸಂಸ್ಥೆಗಳು ತೆಗೆದುಕೊಂಡ ನಿರ್ಣಯ ಅಥವಾ ನಿರ್ಧಾರವನ್ನು, ಅದು ಕಾನೂನುಬದ್ಧವಾಗಿ ಅಂಗೀಕರಿಸಲ್ಪಟ್ಟಿಲ್ಲದಿದ್ದರೆ ಅಥವಾ ಕೆಎಮ್‌ಸಿ ಮತ್ತು ಕೆಎಮ್ ಅಧಿನಿಯಮಯಗಳಿಂದ ನೀಡಲ್ಪಟ್ಟ ಅಧಿಕಾರಕ್ಕಿಂತ ಹೆಚ್ಚಿನದಾಗಿದೆ ಎಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ, ಬೇರೆ ಯಾವುದೇ ಕಾನೂನು ಅಥವಾ ಮಾನವ ಜೀವಕ್ಕೆ, ಆರೋಗ್ಯ, ಸಾರ್ವಜನಿಕ ಸುರಕ್ಷತೆ ಅಥವಾ ಕೋಮು ಸೌಹಾರ್ದತೆಗೆ ಅಪಾಯವಾಗುವ ಸಾಧ್ಯತೆ ಇದ್ದರೆ ಅಥವಾ ಸರ್ಕಾರ ಹೊರಡಿಸಿದ ನಿರ್ದೇಶನಗಳನ್ನು ಉಲ್ಲಂಘಿಸಿದರೆ ರಾಜ್ಯ ಸರ್ಕಾರವು ಅದನ್ನು ರದ್ದುಗೊಳಿಸಬಹುದು (ಕೆಎಮ್‌ಸಿ ಅಧಿನಿಯಮದ ಪರಿಚ್ಛೇದ 98 ಮತ್ತು ಕೆಎಮ್ ಅಧಿನಿಯಮದ ಪರಿಚ್ಛೇದ 306). |

| ಕ್ರಮ ಸಂಖ್ಯೆ | ವಿಷಯ | ನಿಬಂಧನೆ |
|---|---|---|
| 3 | ನಗರ ಸ್ಥಳೀಯ ಸಂಸ್ಥೆಗಳನ್ನು ವಿಸರ್ಜಿಸುವ ಅಧಿಕಾರ | ಸಮಂಜಸವಾದ ಅವಕಾಶವನ್ನು ನೀಡಿದ ನಂತರ ನಗರ ಸ್ಥಳೀಯ ಸಂಸ್ಥೆಗಳಿಗೆ ವಿಧಿಸಿರುವ ಯಾವುದೇ ಕರ್ತವ್ಯಗಳ ನಿರ್ವಹಣೆಯಲ್ಲಿ ಅವು ವಿಫಲವಾದರೆ ಅಥವಾ ತಪ್ಪಿತಸ್ಥರಾದರೆ ರಾಜ್ಯ ಸರ್ಕಾರವು ಗೆಜೆಟ್‌ನಲ್ಲಿನ ಅಧಿಸೂಚನೆಯ ಮೂಲಕ ನಗರ ಸ್ಥಳೀಯ ಸಂಸ್ಥೆಗಳನ್ನು ವಿಸರ್ಜಿಸಬಹುದು. ನಗರ ಸ್ಥಳೀಯ ಸಂಸ್ಥೆಗಳನ್ನು ವಿಸರ್ಜಿಸುವ ಆದೇಶವನ್ನು ರಾಜ್ಯ ವಿಧಾನಸಭೆಯ ಉಭಯ ಸದನಗಳ ಮುಂದೆ ಕಾರಣಗಳೊಂದಿಗೆ ಮಂಡಿಸಬೇಕು. ನಗರ ಸ್ಥಳೀಯ ಸಂಸ್ಥೆಗಳನ್ನು ವಿಸರ್ಜಿಸಿದ್ದ ಅವಧಿಯಲ್ಲಿ ರಾಜ್ಯ ಸರ್ಕಾರವು ಆಡಳಿತಾಧಿಕಾರಿಯನ್ನು ನೇಮಿಸಬಹುದು (ಕೆಎಮ್‌ಸಿ ಅಧಿನಿಯಮದ ಪರಿಚ್ಛೇದಗಳು 99 ಮತ್ತು 100 ಹಾಗೂ ಕೆಎಮ್ ಅಧಿನಿಯಮದ ಪರಿಚ್ಛೇದಗಳು 315 ಮತ್ತು 316). |
| 4 | ಸರ್ಕಾರದಿಂದ ಉಪ ಕಾನೂನುಗಳ ಮಂಜೂರಾತಿ | ಕೆಎಮ್‌ಸಿ ಅಧಿನಿಯಮದ ಪರಿಚ್ಛೇದ 423 ಮತ್ತು ಕೆಎಮ್ ಅಧಿನಿಯಮದ ಪರಿಚ್ಛೇದ 324 (1) ನಗರ ಸ್ಥಳೀಯ ಸಂಸ್ಥೆಗಳಗೆ ಉಪ–ಕಾನೂನುಗಳನ್ನು ರಚಿಸಲು ಅಧಿಕಾರ ನೀಡುತ್ತದೆ. ಆದರೆ ನಗರ ಸ್ಥಳೀಯ ಸಂಸ್ಥೆಗಳು ರಚಿಸಿದ ಉಪ–ಕಾನೂನುಗಳು ಸರ್ಕಾರವು ಅನುಮೋದಿಸದ ಹೊರತು ಮಾನ್ಯವಾಗಿರುವುದಿಲ್ಲ (ಕೆಎಮ್‌ಸಿ ಅಧಿನಿಯಮದ ಪರಿಚ್ಛೇದ 425 ಮತ್ತು ಕೆಎಮ್ ಅಧಿನಿಯಮದ ಪರಿಚ್ಛೇದ 324 (5)). |
| 5 | ಹೆಚ್ಚುವರಿ ಹಣವನ್ನು ಠೇವಣಿ ಮಾಡಲು ಮತ್ತು ಹೂಡಿಕೆ ಮಾಡಲು ಅನುಮತಿ | ಕೆಎಮ್‌ಸಿ ಅಧಿನಿಯಮದ ಪರಿಚ್ಛೇದ 166, 167 ಮತ್ತು ಕೆಎಮ್ ಅಧಿನಿಯಮದ ಪರಿಚ್ಛೇದ 85 ಪೌರಸಂಸ್ಥೆಯ ಕೌನ್ಸಿಲ್‌ಗಳಿಗೆ ಹೆಚ್ಚುವರಿ ಹಣವನ್ನು ಠೇವಣಿ ಇರಿಸಲು ಮತ್ತು ಹೂಡಿಕೆ ಮಾಡಲು ಅವಕಾಶ ಮಾಡಿಕೊಡುತ್ತದೆ ಆದರೆ ಸರ್ಕಾರದಿಂದ ಮೊದಲೇ ಅನುಮೋದನೆ ಪಡೆದಿರಬೇಕು. |
| 6 | ಹಣವನ್ನು ಸಾಲ ಪಡೆಯಲು ಮಂಜೂರಾತಿ | ಕೆಎಮ್‌ಸಿ ಅಧಿನಿಯಮದ ಪರಿಚ್ಛೇದ 154 ಮತ್ತು ಕೆಎಮ್ ಅಧಿನಿಯಮದ ಪರಿಚ್ಛೇದ 86 ಪೌರಸಂಸ್ಥೆಯ ಕೌನ್ಸಿಲ್‌ಗಳಿಗೆ ಮತ್ತು ಮಹಾನಗರ ಪಾಲಿಕೆಗಳಿಗೆ ಹಣವನ್ನು ಸಾಲ ಪಡೆಯಲು ಅವಕಾಶ ಮಾಡಿಕೊಡುತ್ತವೆ, ಆದರೆ ಅದಕ್ಕೆ ಸರ್ಕಾರದಿಂದ ಮೊದಲೇ ಅನುಮೋದನೆ ಪಡೆದಿರಬೇಕು. |
| 7 | ಆಸ್ತಿ ಗುತ್ತಿಗೆ/ಮಾರಾಟ | ಕೆಎಮ್‌ಸಿ ಅಧಿನಿಯಮದ ಪರಿಚ್ಛೇದ 176 ಮತ್ತು ಕೆಎಮ್ ಅಧಿನಿಯಮದ ಪರಿಚ್ಛೇದ 72 ಪೌರಸಂಸ್ಥೆಯ ಕೌನ್ಸಿಲ್‌ಗಳು ಮತ್ತು ಮಹಾನಗರ ಪಾಲಿಕೆಗಳು ತಮಗೆ ಸೇರಿದ ಚರ ಮತ್ತು ಸ್ಥಿರ ಆಸ್ತಿಗಳನ್ನು ಗುತ್ತಿಗೆ ಅಥವಾ ಮಾರಾಟ ಮಾಡಲು ಅನುಮತಿಸುತ್ತದೆ, ಆದರೆ ಕೆಲವು ನಿರ್ಬಂಧಗಳಿವೆ ಮತ್ತು ಸರ್ಕಾರದ ಪೂರ್ವ ಅನುಮತಿಯನ್ನು ಪಡೆದಿರಬೇಕು. |

ಆಧಾರ: ಕೆಎಮ್ ಮತ್ತು ಕೆಎಮ್‌ಸಿ ಕಾಯ್ದೆಗಳು

### *4.3.1* ಜಿಲ್ಲಾ ನಗರಾಭಿವೃದ್ಧಿ ಕೋಶ

ನಗರ ಸ್ಥಳೀಯ ಸಂಸ್ಥೆಗಳ ಸಹಕಾರದೊಂದಿಗೆ ಪೌರಸಂಸ್ಥೆಗಳ ಪ್ರದೇಶಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳನ್ನು ಅಭಿವೃದ್ಧಿಪಡಿಸಲು, ರೂಪಿಸಲು ಮತ್ತು ಕಾರ್ಯಗತಗೊಳಿಸಲು ಜಿಲ್ಲಾಧಿಕಾರಿಗಳ ನಿಯಂತ್ರಣದಲ್ಲಿರುವ ಜಿಲ್ಲಾ ನಗರಾಭಿವೃದ್ಧಿ ಕೋಶಗಳನ್ನು (ಡಿಯುಡಿಸಿ) ರಚಿಸಲಾಯಿತು (ಜೂನ್ 2003).

ಯೋಜನಾ ನಿರ್ದೇಶಕರು, ಡಿಯುಡಿಸಿ, ಇವರು ನಗರ ಸ್ಥಳೀಯ ಸಂಸ್ಥೆಗಳು ಮತ್ತು ಜಿಲ್ಲಾ ಮಟ್ಟದ ಸರ್ಕಾರದ ನಡುವಿನ ಮುಖ್ಯ ಕೊಂಡಿಯಾಗಿದ್ದರು. ಪೌರ ನಿಧಿಗಳು ಸೇರಿದಂತೆ ವಿವಿಧ ನಿಧಿಗಳ ಅಡಿಯಲ್ಲಿ ಕೈಗೊಳ್ಳಬೇಕಾದ ಅಭಿವೃದ್ಧಿ ಕಾರ್ಯಗಳಿಗಾಗಿ ನಗರ ಸ್ಥಳೀಯ ಸಂಸ್ಥೆಗಳು ಕಾರ್ಯ ಯೋಜನೆಗಳನ್ನು ಸಿದ್ಧಪಡಿಸುತ್ತಿದ್ದವು. ಈ ಕ್ರಿಯಾ ಯೋಜನೆಗಳನ್ನು ಅನುಮೋದನೆಗಾಗಿ ಆಯಾ ಕೌನ್ಸಿಲ್‌ಗಳ ಮುಂದೆ ಮಂಡಿಸಲಾಗುತ್ತಿತ್ತು. ತರುವಾಯ, ಮತ್ತೆ ಅನುಮೋದನೆಗಾಗಿ ಅವುಗಳನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಲಾಗುತ್ತಿತ್ತು. ಜಿಲ್ಲಾಧಿಕಾರಿಗಳ ಅನುಮೋದನೆಯ ಮೇರೆಗೆ, ನಗರ ಸ್ಥಳೀಯ ಸಂಸ್ಥೆಗಳು ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್‌ಗಳನ್ನು ಆಹ್ವಾನಿಸುತ್ತಿದ್ದವು. ಕೌನ್ಸಿಲ್‌ಗಳ ಅನುಮೋದನೆಯ ನಂತರ ಡಿಯುಡಿಸಿಯಿಂದ ಅನುಮೋದನೆ ಪಡೆಯುವ ವ್ಯವಸ್ಥೆಯು ದೇಶದ ಪ್ರಜಾಪ್ರಭುತ್ವ ಚೌಕಟ್ಟಿನಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಸ್ವಾಯತ್ತತೆಯನ್ನು ಒದಗಿಸುವ 74ನೇ ಸಂವಿಧಾನ ತಿದ್ದುಪಡಿಯ ಉದ್ದೇಶಕ್ಕೆ ವಿರುದ್ಧವಾಗಿತ್ತು.

## 4.4 ಅಂಗಸಂಸ್ಥೆಗಳು, ಅವುಗಳ ಕಾರ್ಯಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಮೇಲೆ ಪರಿಣಾಮ

ಪ್ರಮುಖ ನಾಗರಿಕ ಪ್ರಕಾರ್ಯಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ವಹಿಸುವುದು 74ನೇ ಸಂವಿಧಾನ ತಿದ್ದುಪಡಿಯ ಉದ್ದೇಶವಾಗಿತ್ತು. ಆದರೆ, ನಗರ/ಪಟ್ಟಣ ಯೋಜನೆ, ಭೂಬಳಕೆ ನಿಯಂತ್ರಣ, ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಕೊಳೆಗೇರಿ ಅಭಿವೃದ್ಧಿಯಂತಹ ಪ್ರಕಾರ್ಯಗಳನ್ನು, **ಕೋಷ್ಟಕ 4.1** ರಲ್ಲಿ ಈಗಾಗಲೇ ಸೂಚಿಸಿರುವಂತೆ ಅಂಗಸಂಸ್ಥೆಗಳು ನಿರ್ವಹಿಸುತ್ತಿವೆ. ಈ ಅಂಗಸಂಸ್ಥೆಗಳನ್ನು ಸರ್ಕಾರವು ನಿಯಂತ್ರಿಸುತ್ತದೆ ಮತ್ತು ಈ ಅಂಗಸಂಸ್ಥೆಗಳು ನಗರ ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳನ್ನು ಒಳಗೊಂಡಿರದ ತಮ್ಮದೇ ಆದ ಆಡಳಿತ ಮಂಡಳಿಗಳನ್ನು ಹೊಂದಿರುತ್ತವೆ. ಅವಿಗಳು ನಗರ ಸ್ಥಳೀಯ ಸಂಸ್ಥೆಗಳಿಗಲ್ಲದೆ ನೇರವಾಗಿ ರಾಜ್ಯ ಸರ್ಕಾರಕ್ಕೆ ಬದ್ಧರಾಗಿರುತ್ತಾರೆ. ಸಾಂವಿಧಾನಿಕ ತಿದ್ದುಪಡಿಗೆ ಮುಂಚಿತವಾಗಿ ಅಧಿಸೂಚನೆಗಳ ಮೂಲಕ ಬಹಳಷ್ಟು ಅಂಗಸಂಸ್ಥೆಗಳನ್ನು ಸ್ಥಾಪಿಸಲಾಗಿದ್ದರಿಂದ ಮತ್ತು ಆಯಾ ಕಾಯ್ದೆಗಳಿಂದ ಅವುಗಳ ಆಡಳಿತವನ್ನು ನಡೆಸಲಾಗುವುದರಿಂದ ಸಾಂವಿಧಾನಿಕ ತಿದ್ದುಪಡಿಯನ್ನು ಅನುಸರಿಸಲು ಸರ್ಕಾರವು ಈ ಕಾಯ್ದೆಗಳನ್ನು ತಿದ್ದುಪಡಿ ಮಾಡಿ ಆ ಮೂಲಕ ಅವುಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಬದ್ಧರನ್ನಾಗಿ ಮಾಡಬೇಕಿತ್ತು. ಅಂಗಸಂಸ್ಥೆಗಳಿಗೆ ಪ್ರಕಾರ್ಯಗಳನ್ನು ನಿಯೋಜಿಸುವ ವ್ಯವಸ್ಥೆಯು ವಿಕೇಂದ್ರೀಕರಣದ ಪ್ರಮುಖ ಉದ್ದೇಶ, ಅಂದರೆ ಜನರಿಗೆ ಹೊಣೆಗಾರರಾಗಿರುವುದನ್ನು ದುರ್ಬಲಗೊಳಿಸುತ್ತದೆ.

ಪರೀಕ್ಷಾ–ತನಿಖೆ ನಡೆಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಂಗಸಂಸ್ಥೆಗಳ ಪಾತ್ರ ಮತ್ತು ಹಂಚಿಕೆಯ ಪ್ರಕಾರ್ಯಗಳ ಮೇಲೆ ಅದರ ಪ್ರಭಾವವನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

### *4.4.1* ನಗರಾಭಿವೃದ್ಧಿ ಪ್ರಾಧಿಕಾರಗಳು – ನಗರ ಯೋಜನೆ ಮತ್ತು ಭೂಬಳಕೆ ನಿಯಂತ್ರಣ

(i) ನಗರ ಯೋಜನೆ ಮತ್ತು ಭೂಬಳಕೆ ನಿಯಂತ್ರಣದ ಪ್ರಕಾರ್ಯಗಳನ್ನು ನಗರಾಭಿವೃದ್ಧಿ ಪ್ರಾಧಿಕಾರಗಳು (ಯುಡಿಎ) ಮತ್ತು ನಗರ ಯೋಜನಾ ಪ್ರಾಧಿಕಾರಗಳು (ಟಿಪಿಎ) ನಿರ್ವಹಿಸುತ್ತವೆ. ರಾಜ್ಯ

ಸರ್ಕಾರವು ರಾಜ್ಯದಲ್ಲಿನ ಪ್ರಮುಖ ನಗರ ಪ್ರದೇಶಗಳ ಯೋಜಿತ ಅಭಿವೃದ್ಧಿಗಾಗಿ (ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1987ರ ಅಡಿಯಲ್ಲಿ) 31 ಯುಡಿಎಗಳನ್ನು ಸ್ಥಾಪಿಸಿತು ಮತ್ತು ಯುಡಿಎಗಳ ಅಡಿಯಲ್ಲಿ ವ್ಯಾಪಿಸಿರದ ನಗರ ಸ್ಥಳೀಯ ಸಂಸ್ಥೆಗಳಿಗೆ ಮಾಸ್ಟರ್‌ಪ್ಲಾನ್ ತಯಾರಿಸಲು ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಅಧಿನಿಯಮದ ಪರಿಚ್ಛೇದ 4–ಸಿ ಅಡಿಯಲ್ಲಿ 52 ಟಿಪಿಎಗಳನ್ನು ಸ್ಥಾಪಿಸಿತು. ಟಿಪಿಎಗಳು ವಸತಿ, ವಾಣಿಜ್ಯ, ಕೈಗಾರಿಕೆ, ಕೃಷಿ, ಮನರಂಜನೆ, ಶೈಕ್ಷಣಿಕ ಮತ್ತು ಇತರ ಉದ್ದೇಶಗಳಿಗಾಗಿ ಭೂ ಬಳಕೆಯ ವಲಯದ ಜೊತೆಗೆ ವಲಯ ನಿಬಂಧನೆಗಳಿಗೂ ಜವಾಬ್ದಾರರಾಗಿದ್ದವು.

74ನೇ ಸಂವಿಧಾನ ತಿದ್ದುಪಡಿ ಕಾಯ್ದೆಯಲ್ಲಿ ನಿರೀಕ್ಷಿಸಿದಂತೆ ವಿಕೇಂದ್ರೀಕರಣ ಕ್ರಮಗಳ ಅನುಷ್ಠಾನವನ್ನು ನಿಗದಿಪಡಿಸಿದ ಜೆಎನ್‌ಎನ್‌ಯುಆರ್‌ಎಮ್ ಅಡಿಯಲ್ಲಿ ರಾಜ್ಯ ಮಟ್ಟದ ಕಡ್ಡಾಯ ಸುಧಾರಣೆಗಳನ್ನು ಅನುಸರಿಸಲು, ಈ ಕೆಳಗಿನವುಗಳನ್ನು ಅನುಸರಿಸಬೇಕಾಗಿತ್ತು.

(ಎ) ಅಂಗಸಂಸ್ಥೆಗಳ ಕಾರ್ಯವನ್ನು ಯೋಜಿಸುವಲ್ಲಿ ಮತ್ತು ನಾಗರಿಕರಿಗೆ ಸೇವೆಗಳನ್ನು ತಲುಪಿಸುವಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಅರ್ಥಪೂರ್ಣ ಒಡನಾಟ ಮತ್ತು ತೊಡಗಿಸಿಕೊಳ್ಳುವಿಕೆಯನ್ನು ರಾಜ್ಯವು ಖಚಿತಪಡಿಸಿಕೊಳ್ಳಬೇಕು ಮತ್ತು

(ಬಿ) ಚುನಾಯಿತ ನಗರ ಸ್ಥಳೀಯ ಸಂಸ್ಥೆಗಳನ್ನು ನಗರ ಯೋಜನೆ ಕಾರ್ಯದೊಂದಿಗೆ ನಿಯೋಜಿಸುವುದು ಅಥವಾ ಸಂಯೋಜಿಸುವುದು.

ನಗರ ಸ್ಥಳೀಯ ಸಂಸ್ಥೆಗಳಿಗೆ ಯೋಜನಾ ಪ್ರಕಾರ್ಯಗಳನ್ನು ಹಂಚಿಕೆ ಮಾಡಲು ರಾಜ್ಯ ಸರ್ಕಾರ ಆದೇಶಗಳನ್ನು ನೀಡಿತ್ತು (ಡಿಸೆಂಬರ್ 2009) ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು, ಅದರಲ್ಲಿ ಯುಡಿಎಗಳು/ಟಿಪಿಎಗಳು ಮಾಸ್ಟರ್ ಪ್ಲ್ಯಾನ್‌ಗಳನ್ನು ಸಿದ್ಧಪಡಿಸುವುದನ್ನು ಮುಂದುವರಿಸುತ್ತವೆ ಮತ್ತು ಹಾಗೆ ಸಿದ್ಧಪಡಿಸಿದ ಪ್ಲ್ಯಾನ್‌ಗಳನ್ನು ಕರಡು ಮತ್ತು ಅಂತಿಮ ಹಂತಗಳೆರಡರಲ್ಲೂ ಪರಿಶೀಲನೆ ಮತ್ತು ಟಿಪ್ಪಣಿಗಳಿಗಾಗಿ ಆಯಾ ನಗರ ಸ್ಥಳೀಯ ಸಂಸ್ಥೆಗಳಿಗೆ ಕಳುಹಿಸಬೇಕು ಎಂದು ತಿಳಿಸಲಾಗಿತ್ತು. ಇದು ಅಧಿಕಾರ ಹಂಚಿಕೆಯ ಮನೋಭಾವಕ್ಕೆ ಸಂಪೂರ್ಣವಾಗಿ ಹೊಂದಿಕೆಯಾಗುತ್ತಿರಲಿಲ್ಲ. ಆದಾಗ್ಯೂ, ಈ ವಿಧಾನವನ್ನು ಸಹ ಅನುಸರಿಸುತ್ತಿರಲಿಲ್ಲ. ಯುಡಿಎಗಳು/ಟಿಪಿಎಗಳು ನಗರ ಸ್ಥಳೀಯ ಸಂಸ್ಥೆಗಳ ಟಿಪ್ಪಣಿಗಳಿಲ್ಲದೇ ಯೋಜನೆಗಳನ್ನು ನೇರವಾಗಿ ಸರ್ಕಾರಕ್ಕೆ ಸಲ್ಲಿಸುತ್ತಿದ್ದವು.

ಮುಂದುವರೆದು, ಕೆಎಮ್‌ಸಿ ಅಧಿನಿಯಮದ ಪರಿಚ್ಛೇದ 503ಎ ಮತ್ತು ಕೆಎಮ್ ಅಧಿನಿಯಮದ 302ಎ ನಿಗದಿಪಡಿಸಿದಂತೆ ಪ್ರತಿವರ್ಷ ಪೌರಸಂಸ್ಥೆಗಳು ಮತ್ತು ಮಹಾನಗರ ಪಾಲಿಕೆಗಳು ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993ರ ಪರಿಚ್ಛೇದ 310ರ ಅಡಿಯಲ್ಲಿ ರಚಿಸಲಾದ ಜಿಲ್ಲಾ ಯೋಜನಾ ಸಮಿತಿಗೆ ಸಲ್ಲಿಸಬೇಕು. ಕೆಎಮ್‌ಸಿ ಅಧಿನಿಯಮದ ಪರಿಚ್ಛೇದ 505ರ ಅನ್ವಯ, ಮಹಾನಗರ ಪಾಲಿಕೆಯು ಯೋಜನಾ ಪ್ರಾಧಿಕಾರದ ಒಪ್ಪಿಗೆಯೊಂದಿಗೆ ಅಂತಹ ಅಧಿಕಾರವನ್ನು ಚಲಾಯಿಸುತ್ತದೆ ಅಥವಾ ಅಂತಹ ಕಾರ್ಯಗಳನ್ನು ನಿರ್ವಹಿಸುತ್ತದೆ ಅಥವಾ ಅಂತಹ ಭೂಬಳಕೆ ಅಥವಾ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದಂತೆ ಅಂತಹ ಕರ್ತವ್ಯಗಳನ್ನು ನಿರ್ವಹಿಸುತ್ತದೆ. ಹೀಗೆ, ಭೂಬಳಕೆಗೆ ಸಂಬಂಧಿಸಿದ ವಿಷಯಗಳನ್ನು ಮುಖ್ಯವಾಗಿ ಯುಡಿಎ/ಟಿಪಿಎ ಗಳಗೆ ವಹಿಸಲಾಗಿತ್ತು. ಟಿಪಿಎಗಳು ಅನುಮೋದಿಸಿದ ಮಾಸ್ಟರ್ ಪ್ಲ್ಯಾನ್ ಅಡಿಯಲ್ಲಿ ಬರುವ ಪ್ರದೇಶಗಳಿಗೆ ಸಂಬಂಧಿಸಿದಂತೆ ಮಹಾನಗರ ಪಾಲಿಕೆಗಳು/ಪೌರಸಂಸ್ಥೆಗಳು ಕಟ್ಟಡ ಪರವಾನಗಿಗಳನ್ನು ಮಾತ್ರ ನೀಡುತ್ತಿದ್ದವಾದರೆ ಯುಡಿಎಗಳ ಸಂಬಂಧದಲ್ಲಿ ಎಲ್ಲೆಲ್ಲಿ ಬಡಾವಣೆಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಿಲ್ಲವೋ, ಅಲ್ಲಿ ಕಟ್ಟಡ ಪರವಾನಗಿಗಳನ್ನು ಸಹ ಯುಡಿಎಯಿಂದಲೇ ನೀಡಲಾಗುತ್ತಿತ್ತು.

ಪರೀಕ್ಷಾ–ತನಿಖೆ ನಡೆಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಲೆಕ್ಕಪರಿಶೋಧನೆಯು ಕೆಳಗಿನವುಗಳನ್ನು ಸಹ ಗಮನಿಸಿತು:

- ಯುಡಿಎ ಮತ್ತು ಟಿಪಿಎಗಳು ಕ್ರಮವಾಗಿ ಏಳು ಮತ್ತು 37 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಾಸ್ಟರ್ ಪ್ಲ್ಯಾನ್ ಮತ್ತು ಅಭಿವೃದ್ಧಿ ಯೋಜನೆಗಳನ್ನು ತಯಾರಿಸಿದ್ದವು. ಈ ಪ್ರಾಧಿಕಾರಗಳು ಕೌನ್ಸಿಲ್‌ಗಳಿಗೆ ವರದಿ ಮಾಡುವುದನ್ನು ಖಚಿತಪಡಿಸಿಕೊಳ್ಳಲು ಯಾವುದೇ ಕಾರ್ಯವಿಧಾನ/ಶಿಷ್ಟಾಚಾರಗಳನ್ನು ಸ್ಥಾಪಿಸಿರಲಿಲ್ಲ.
- ಮಹಾನಗರ ಪಾಲಿಕೆಗಳಲ್ಲಿನ ನಗರ ಯೋಜನೆ ಮತ್ತು ಸುಧಾರಣಾ ಸ್ಥಾಯಿ ಸಮಿತಿ ಮತ್ತು ಇತರ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಸಾಮಾನ್ಯ ಸ್ಥಾಯಿ ಸಮಿತಿಗಳು ಕೇವಲ ಕಟ್ಟಡ ಪರವಾನಗಿಗಳ ವಿಷಯವನ್ನು ಪರಿಶೀಲಿಸುತ್ತಿದ್ದವು ಆದರೆ ಯೋಜನಾ ಸಂಬಂಧಿತ ಅಂಶಗಳನ್ನು ವಿಮರ್ಶಿಸಿರಲಿಲ್ಲ.
- ಯುಡಿಎ/ಟಿಪಿಎಗಳು ಬಡಾವಣೆ ನಕ್ಷೆಗಳ ಮಂಜೂರಾತಿಗಾಗಿ ಸಂಗ್ರಹಿಸಿದ ಮೊತ್ತವನ್ನು ಮತ್ತು ಅಭಿವೃದ್ಧಿ ಶುಲ್ಕವನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಜಮೆ ಮಾಡಿರಲಿಲ್ಲ. ಸಂಗ್ರಹಿಸಿದ ಮೊತ್ತವನ್ನು ಟಿಪಿಎಗಳು ಸರ್ಕಾರಕ್ಕೆ ಜಮೆ ಮಾಡಿದರೆ, ಯುಡಿಎಗಳು ಆ ಮೊತ್ತವನ್ನು ತಮ್ಮಲ್ಲೇ ಉಳಿಸಿಕೊಂಡಿದ್ದವು. ಇದು ನಗರ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚುವರಿ ಆದಾಯದಿಂದ ವಂಚಿತಗೊಳಿಸಿತು. ಜೈಪುರ ಅಭಿವೃದ್ಧಿ ಪ್ರಾಧಿಕಾರವು ಉತ್ಪತ್ತಿಯಾಗುವ ಭೂಮಾರಾಟ ಆದಾಯದ ಶೇಕಡಾ 15ರಷ್ಟು ಪಾಲನ್ನು ಜೈಪುರ ಮುನ್ಸಿಪಲ್ ಕಾರ್ಪೊರೇಶನ್‌ಗೆ ಪಾವತಿಸಿದಂತೆ ಯುಡಿಎ/ಟಿಪಿಎಗಳು ನಗರ ಸ್ಥಳೀಯ ಸಂಸ್ಥೆಗಳೊಂದಿಗೆ ಆದಾಯ ಹಂಚಿಕೊಳ್ಳುವುದನ್ನು ರಾಜ್ಯ ಸರ್ಕಾರ ಪರಿಗಣಿಸಬಹುದು.
- ಈ ಪ್ರಾಧಿಕಾರಗಳ ನಿಯಂತ್ರಣದಲ್ಲಿರುವ ಬಡಾವಣೆಗಳನ್ನು ಅಭಿವೃದ್ಧಿಯ ನಂತರ ನಿರ್ವಹಣೆಗಾಗಿ ನಗರ ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಲಾಗಿತ್ತು. ಕೇವಲ ರಸ್ತೆಗಳು ಮತ್ತು ಉದ್ಯಾನವನಗಳನ್ನು ಮಾತ್ರ ಹಸ್ತಾಂತರಿಸಿ ನಾಗರೀಕ ಸೌಕರ್ಯ ನಿವೇಶನಗಳನ್ನು ಯುಡಿಎ/ಟಿಪಿಎಗಳು ತಮ್ಮಲ್ಲೇ ಉಳಿಸಿಕೊಂಡಿದ್ದವು.

ಹೀಗೆ, ನಗರ ಯೋಜನೆ ಮತ್ತು ಭೂಬಳಕೆಯ ನಿಯಂತ್ರಣ ಪ್ರಕಾರ್ಯಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಯಾವುದೇ ಪಾತ್ರವಿರಲಿಲ್ಲ ಅಥವಾ ಪಾತ್ರವು ಸೀಮಿತವಾಗಿತ್ತು. ಆದ್ದರಿಂದ, ಈ ಪ್ರಕಾರ್ಯಗಳ ವರ್ಗಾವಣೆಯು ಕೇವಲ ಪತ್ರಾಚಾರದಲ್ಲಿದ್ದಿತು ಮತ್ತು ವಾಸ್ತವವಾಗಿರಲಿಲ್ಲ. ಒಂದನೇ ರಾಜ್ಯ ಹಣಕಾಸು ಆಯೋಗವು ವಾಸ್ತವವಾಗಿ ಬಿಡಿಎ ಸೇರಿದಂತೆ ಅಸ್ತಿತ್ವದಲ್ಲಿರುವ ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ಆಯಾ ಚುನಾಯಿತ ಪೌರಸಂಸ್ಥೆಗಳ ಅಡಿಯಲ್ಲಿ ತರಬೇಕೆಂದು ಶಿಫಾರಸು ಮಾಡಿತ್ತು.

(ii) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯನ್ನು (ಕೆಐಎಡಿಬಿ) 1966ರಲ್ಲಿ ಸ್ಥಾಪಿಸಲಾಯಿತು ಮತ್ತು ಕೈಗಾರಿಕೆಗಳ ತ್ವರಿತ ಮತ್ತು ಕ್ರಮಬದ್ಧವಾದ ಸ್ಥಾಪನೆ ಮತ್ತು ಅಭಿವೃದ್ಧಿಯನ್ನು ಉತ್ತೇಜಿಸುವ ಮತ್ತು ಕರ್ನಾಟಕ ರಾಜ್ಯದ ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕಾ ಮೂಲಸೌಕರ್ಯ ಮತ್ತು ಇತರ ಸೌಲಭ್ಯಗಳನ್ನು ಒದಗಿಸುವ ಜವಾಬ್ದಾರಿಯನ್ನು ಅದು ಹೊಂದಿತ್ತು. ಕೆಐಎಡಿಬಿ ತನ್ನದೇ ಆದ ವಲಯ ನಿಬಂಧನೆಗಳನ್ನು ಅಧಿಸೂಚಿಸಿತ್ತು, ಕೈಗಾರಿಕಾ ಪ್ರದೇಶಗಳಲ್ಲಿ ಕಟ್ಟಡಗಳ ನಿರ್ಮಾಣಕ್ಕಾಗಿ ಉಪಕಾನೂನುಗಳನ್ನು ತಯಾರಿಸಿತ್ತು ಮತ್ತು ಕಟ್ಟಡ ನಕ್ಷೆಗಳ ಅನುಮೋದನೆಗಾಗಿ ಶುಲ್ಕವನ್ನು ಸಂಗ್ರಹಿಸುತ್ತಿತ್ತು. ಕೆಐಎಡಿಬಿ ಮಾರ್ಚ್ 2018ರ ಅಂತ್ಯದಲ್ಲಿದ್ದಂತೆ ರಾಜ್ಯದಲ್ಲಿ 18,865 ಘಟಕಗಳನ್ನು ಒಳಗೊಂಡ 153 ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಿತ್ತು.

74ನೇ ಸಂವಿಧಾನ ತಿದ್ದುಪಡಿಯ ಅನುಸರಣೆಗಾಗಿ, ಕೆಎಮ್ ಅಧಿನಿಯಮಕ್ಕೆ ತಿದ್ದುಪಡಿ ಮಾಡುವ ಮೂಲಕ ರಾಜ್ಯ ಸರ್ಕಾರವು ಕೈಗಾರಿಕಾ ಉಪನಗರಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ 364ಎ ಯಿಂದ 364ಕ್ಯೂ ವರೆಗಿನ ಪರಿಚ್ಛೇದಗಳನ್ನು ಹೊಂದಿರುವ ಅಧ್ಯಾಯ VIA ಯನ್ನು ಪರಿಚಯಿಸಿತು (ಆಗಸ್ಟ್ 2003). ಪರಿಚ್ಛೇದ 364ಎ ಅನುಸಾರವಾಗಿ, ರಾಜ್ಯಪಾಲರು ಅಂತಹ ಪ್ರದೇಶವನ್ನು ಅಧಿಸೂಚನೆಯ ಮೂಲಕ ಕೈಗಾರಿಕಾ ಉಪನಗರ ಎಂದು ಸೂಚಿಸಬಹುದು ಮತ್ತು ಪರಿಚ್ಛೇದ 364ಬಿ ಅನ್ವಯ ಪ್ರತಿ ಕೈಗಾರಿಕಾ ಉಪನಗರಕ್ಕೆ ಕೈಗಾರಿಕಾ ಉಪನಗರ ಪ್ರಾಧಿಕಾರ ಇರುತ್ತದೆ. ಪರಿಚ್ಛೇದ 364ಜೆ ರಂತೆ ಕೈಗಾರಿಕಾ

ಉಪನಗರ ಪ್ರಾಧಿಕಾರವು ಉಪನಗರಗಳಲ್ಲಿರುವ ಎಲ್ಲಾ ಕಟ್ಟಡಗಳು ಮತ್ತು ಜಮೀನುಗಳ ಮೇಲೆ ಆಸ್ತಿ ತೆರಿಗೆಯನ್ನು ವಿಧಿಸುತ್ತದೆ, ಇದಕ್ಕಾಗಿ ಕೆಎಮ್ ಕಾಯ್ದೆಯ 94ರಿಂದ 115ನೆ ಪರಿಚ್ಛೇದಗಳ ನಿಬಂಧನೆಗಳು ಅವಶ್ವಯವಿರುವ ಬದಲಾವಣೆಗಳೊಂದಿಗೆ ಅನ್ವಯವಾಗುತ್ತವೆ. ಇದಲ್ಲದೆ, ಕೈಗಾರಿಕಾ ಉಪನಗರ ಪ್ರಾಧಿಕಾರವು ಸಂಗ್ರಹಿಸಿದ ಆಸ್ತಿ ತೆರಿಗೆಯ ಶೇಕಡಾ 30 ರಷ್ಟನ್ನು ಕೈಗಾರಿಕಾ ಉಪನಗರ ಪ್ರದೇಶವನ್ನು ಹೊಂದಿರುವ ಸ್ಥಳೀಯ ಪ್ರಾಧಿಕಾರಕ್ಕೆ ಜಮೆ ಮಾಡಲಾಗುವುದು.

ರಾಜ್ಯ ಸರ್ಕಾರವು ಕರ್ನಾಟಕ ಕೈಗಾರಿಕಾ ನೀತಿ 2014–19ನ್ನು (ಅಕ್ಟೋಬರ್ 2014) ಘೋಷಿಸಿತು. ನೀತಿಯ ಕಂಡಿಕೆ 5.1.7.1ರ ಅನ್ವಯ, ಕೆಎಮ್ ಅಧಿನಿಯಮದ ಪರಿಚ್ಛೇದ 364ಎ ಅಡಿಯಲ್ಲಿ ಪೀಣ್ಯ, ಮೈಸೂರು, ಬೊಮ್ಮಸಂದ್ರ, ಬೆಳಗಾವಿ ಮತ್ತು ಹುಬ್ಬಳ್ಳಿಗಳಲ್ಲಿನ ದೊಡ್ಡ ಕೈಗಾರಿಕಾ ಪ್ರದೇಶಗಳು ಮತ್ತು ಎಸ್ಟೇಟ್‌ಗಳನ್ನು ಕೈಗಾರಿಕಾ ಉಪನಗರ ಪ್ರದೇಶಗಳನ್ನಾಗಿ ಘೋಷಿಸಲು ಹಾಗೂ ಪರಿಚ್ಛೇಧ 364ಬಿ(2)ರ ಅನ್ವಯ ಆಯಾ ಉಪನಗರಗಳಲ್ಲಿ ಪ್ರಾಧಿಕಾರಗಳನ್ನು ಸ್ಥಾಪಿಸಲು ಪ್ರಸ್ತಾವಿಸಲಾಯಿತು ಮತ್ತು ಕಂಡಿಕೆ 5.1.7.2ರ ಅನ್ವಯ ಅಧಿಸೂಚಿತ ಕೈಗಾರಿಕಾ ಪ್ರದೇಶಗಳು/ಎಸ್ಟೇಟ್‌ಗಳು/ಉಪನಗರಗಳಲ್ಲಿನ ಕೈಗಾರಿಕಾ ಘಟಕಗಳ ಕಟ್ಟಡ ನಿರ್ಮಾಣ ನಕ್ಷೆಯನ್ನು ಅನುಮೋದಿಸಲು ಕೆಐಎಡಿಬಿಗೆ ಸೂಕ್ತ ಅಧಿಕಾರವನ್ನು ನಿಯೋಜಿಸಲು ಕೆಎಮ್ ಅಧಿಸೂಚನೆಗೆ ತಿದ್ದುಪಡಿ ತರಲು ಪ್ರಸ್ತಾವಿಸಲಾಯಿತು. ಇದಲ್ಲದೆ, ಕಂಡಿಕೆ 5.1.7.4ರ ಅನ್ವಯ, ಉಪನಗರಗಳನ್ನು ಘೋಷಿಸುವವರೆಗೆ, ಕೆಐಎಡಿಬಿಯು ಎಲ್ಲಾ ಕೈಗಾರಿಕೆಗಳಿಂದ ಆಸ್ತಿ ತೆರಿಗೆ, ಉಪಕರ, ಇತ್ಯಾದಿಗಳನ್ನು ಸಂಗ್ರಹಿಸಿ ಅತ್ಯಲ್ಪ ಸೇವಾ ಶುಲ್ಕವನ್ನು ಕಡಿತ ಮಾಡಿ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಿಗಳಿಗೆ ಪಾವತಿಸಬೇಕಿತ್ತು.

ಕ್ರಿಯಾತ್ಮಕವಾಗಿದ್ದರೂ ಸಹ ಕೈಗಾರಿಕಾ ಉಪನಗರಗಳನ್ನು ಘೋಷಿಸಿಲ್ಲದಿರುವುದನ್ನು ಮತ್ತು ಕೆಐಎಡಿಬಿ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳಿಗೆ ಆಸ್ತಿ ತೆರಿಗೆಯನ್ನು ಪಾವತಿಸದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕಟ್ಟಡ ನಿರ್ಮಾಣ ನಕ್ಷೆಗಳ ಅನುಮೋದನೆಗೆ ಸಂಬಂಧಿಸಿದಂತೆ ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರವನ್ನು ಕೈಗಾರಿಕಾ ಘಟಕಗಳಿಗೆ ಅಗತ್ಯ ಶಾಸನಬದ್ಧ ತಿದ್ದುಪಡಿಗಳಿಲ್ಲದೆ ಕೆಐಎಡಿಬಿ ಚಲಾಯಿಸುತ್ತಿತ್ತು ಎಂಬುದು ಮೇಲಿನಿಂದ ಸ್ಪಷ್ಟವಾಗುತ್ತದೆ. ಕೆಐಎಡಿಬಿಯಿಂದ ಆಸ್ತಿ ತೆರಿಗೆಯನ್ನು ಜಮೆ ಮಾಡದಿರುವುದು ನಗರ ಸ್ಥಳೀಯ ಸಂಸ್ಥೆಗಳಿಗೆ ಅವರ ಹಕ್ಕಿನ ಆದಾಯದಿಂದ ವಂಚಿಸಿದಂತಾಯಿತು. ಮಹಾನಗರ ಪಾಲಿಕೆಯು[12] ನೀಡಿದ ಮಾಹಿತಿಯ ಅನ್ವಯ, ಮಾರ್ಚ್ 2020ರ ಅಂತ್ಯಕ್ಕೆ ಕೆಐಎಡಿಬಿ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಗೆ ₹22.91 ಕೋಟಿಗಳ (ದಂಡ ಸೇರಿದಂತೆ) ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿತ್ತು.

### *4.4.2* ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ–ಕೊಳೆಗೇರಿ ಸುಧಾರಣೆ ಮತ್ತು ಮೇಲ್ದರ್ಜೆಗೇರಿಸುವುದು

ಕೊಳೆಗೇರಿ ಸುಧಾರಣೆ ಮತ್ತು ಮೇಲ್ದರ್ಜೆಗೇರಿಸುವುದನ್ನು ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ (ಕೆಎಸ್‌ಡಿಬಿ) ನಡೆಸುತ್ತಿದೆ. ಕರ್ನಾಟಕ ಕೊಳೆಗೇರಿ ಪ್ರದೇಶಗಳ (ಸುಧಾರಣೆ ಮತ್ತು ತೆರವು) ಕಾಯ್ದೆಯ 1973ರ ನಿಬಂಧನೆಗಳ ಅಡಿಯಲ್ಲಿ 1975ರಲ್ಲಿ ಕೆಎಸ್‌ಡಿಬಿಯನ್ನು ರಚಿಸಲಾಯಿತು. ಅಧಿಸೂಚಿತ ಕೊಳೆಗೇರಿಗಳ ಅಭಿವೃದ್ಧಿಯು ಕೆಎಸ್‌ಡಿಬಿ ಹೊಣೆಗಾರಿಕೆಯಾಗಿತ್ತು ಮತ್ತು ನಂತರ ಅವುಗಳನ್ನು ಹೆಚ್ಚಿನ ನಿರ್ವಹಣೆ ಮತ್ತು ಸಂರಕ್ಷಣೆಗಾಗಿ ನಗರ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಬೇಕಿತ್ತು. ಒಂದನೇ ರಾಜ್ಯ ಹಣಕಾಸು ಆಯೋಗವು ಕೊಳೆಗೇರಿ ಸುಧಾರಣೆಯನ್ನು ನಗರ ಸ್ಥಳೀಯ ಸಂಸ್ಥೆಗಳ ನಿಯಂತ್ರಣಕ್ಕೆ ತರಲು ಶಿಫಾರಸು ಮಾಡಿತ್ತು ಆದರೆ ಅದನ್ನು ಅನುಪಾಲಿಸಿರಲಿಲ್ಲ.

[12] ಪರೀಕ್ಷಾ–ತನಿಖೆ ನಡೆಸಿದ ಇತರೆ ನಗರ ಸ್ಥಳೀಯ ಸಂಸ್ಥೆಗಳಿಂದ ಮಾಹಿತಿಯನ್ನು ನಿರೀಕ್ಷಿಸಲಾಗಿದೆ.

74ನೇ ಸಂವಿಧಾನ ತಿದ್ದುಪಡಿ ಕಾಯ್ದೆಯ ಪರಿಣಾಮವಾಗಿ ತಿದ್ದುಪಡಿ ಮಾಡಿದ ಕೆಎಮ್ ಮತ್ತು ಕೆಎಮ್‌ಸಿ ಅಧಿನಿಯಮಗಳು ಈ ಪ್ರಕಾರ್ಯವನ್ನು ನಗರ ಸ್ಥಳೀಯ ಸಂಸ್ಥೆಗಳ ವಿವೇಚನಾತ್ಮಕ ಪ್ರಕಾರ್ಯವಾಗಿದೆ ಎಂದು ನಿಗದಿಪಡಿಸಿವೆ. ಹೀಗಾಗಿ ಪರೀಕ್ಷಾ–ತನಿಖೆ ನಡೆಸಿದ ಯಾವುದೇ ನಗರ ಸ್ಥಳೀಯ ಸಂಸ್ಥೆಗಳು ಈ ಪ್ರಕಾರ್ಯವನ್ನು ಕೈಗೆತ್ತಿಕೊಂಡಿರಲಿಲ್ಲ. ಆದರೂ, ಅವುಗಳು ತಮ್ಮ ನಿಯಮಿತ ಕಾರ್ಯಗಳ ಭಾಗವಾಗಿ ಅಧಿಸೂಚನೆ ಮಾಡದ ಕೊಳೆಗೇರಿಗಳಲ್ಲಿ, ಕೆಎಸ್‌ಡಿಬಿ ಅವುಗಳನ್ನು ಅಧಿಸೂಚಿತ ಕೊಳೆಗೇರಿಗಳೆಂದು ಘೋಷಿಸುವವರೆಗೂ, ನೀರು ಸರಬರಾಜು, ಬೀದಿ ದೀಪಗಳ ನಿರ್ವಹಣೆ ಮತ್ತು ತ್ಯಾಜ್ಯ ಸಂಗ್ರಹ ಮುಂತಾದ ಸೇವೆಗಳನ್ನು ಒದಗಿಸುತ್ತಿದ್ದವು. ಆದ್ದರಿಂದ ಅಧಿನಿಯಮಗಳ ತಿದ್ದುಪಡಿಯು ಸಾಂವಿಧಾನಿಕ ತಿದ್ದುಪಡಿಯನ್ನು ಅನುಸರಿಸುವ ಒಂದು ಔಪಚಾರಿಕತೆಯಾಗಿತ್ತು.

### *4.4.3* ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ *(ಕೆಯುಡಬ್ಲ್ಯೂಎಸ್&ಡಿಬಿ)* – ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳು

ಮನೆಬಳಕೆ, ವಾಣಿಜ್ಯ ಮತ್ತು ಕೈಗಾರಿಕಾ ಉದ್ದೇಶಗಳಿಗಾಗಿ ನೀರು ಸರಬರಾಜು ಮಾಡುವುದು ನಗರ ಸ್ಥಳೀಯ ಸಂಸ್ಥೆಗಳ ಕಡ್ಡಾಯ ಪ್ರಕಾರ್ಯವಾಗಿತ್ತು. ಮಹಾನಗರ ಪಾಲಿಕೆಗಳಲ್ಲಿ ನಗರ ಯೋಜನೆ ಮತ್ತು ಸುಧಾರಣಾ ಸ್ಥಾಯಿ ಸಮಿತಿ ಮತ್ತು ಇತರ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಾಮಾನ್ಯ ಸ್ಥಾಯಿ ಸಮಿತಿ ಈ ಕಾರ್ಯವನ್ನು ಪರಿಶೀಲಿಸುತ್ತವೆ.

ಕರ್ನಾಟಕ ಸರ್ಕಾರವು ನಗರ ಕುಡಿಯುವ ನೀರು ಮತ್ತು ನೈರ್ಮಲ್ಯ ನೀತಿ, 2002ನ್ನು ಜಾರಿಗೆ ತಂದಿತು. ಬೇಡಿಕೆ ಆಧಾರಿತ ನೀರು ಸರಬರಾಜಿನ ಸಾರ್ವತ್ರಿಕ ವ್ಯಾಪ್ತಿ, ಕಾರ್ಯಾಚರಣೆಗಳ ವಾಣಿಜ್ಯ ಮತ್ತು ಆರ್ಥಿಕ ಸ್ಥಿರತೆ ಮತ್ತು ಎಲ್ಲಾ ನಾಗರಿಕರಿಗೆ ಕನಿಷ್ಠ ಮಟ್ಟದ ಸೇವೆಯನ್ನು ಖಚಿತಪಡಿಸುವುದು ನೀತಿಯ ಮುಖ್ಯ ಉದ್ದೇಶಗಳಾಗಿದ್ದವು. ನೀರಿನ ಸಂಗ್ರಹದಿಂದ ತ್ಯಾಜ್ಯ ನೀರು ಸಂಸ್ಕರಣೆಯವರೆಗೆ ನೀರು ಸರಬರಾಜು ಮತ್ತು ಒಳಚರಂಡಿ ಸೇವೆಗಳಿಗೆ ನಗರ ಸ್ಥಳೀಯ ಸಂಸ್ಥೆಗಳು ಹೊಣೆಗಾರರಾಗಿದ್ದವು.

ಸಗಟು ನೀರು ಸರಬರಾಜು ಮತ್ತು ಅದರ ನಿರ್ವಹಣೆಯನ್ನು ರಾಜ್ಯ ಸರ್ಕಾರವು ಕೆಯುಡಬ್ಲ್ಯುಎಸ್&ಡಿಬಿಗೆ (ಮಂಡಳಿ) ವಹಿಸಿತ್ತು (ಕೆಯುಡಬ್ಲ್ಯುಎಸ್&ಡಿಬಿ ಅಧಿನಿಯಮ, 1973ರ ಅಡಿಯಲ್ಲಿ). ಅದರಂತೆ ಕೆಎಮ್‌ಸಿ ಮತ್ತು ಕೆಎಮ್ ಅಧಿನಿಯಮಗಳನ್ನೂ ತಿದ್ದುಪಡಿ ಮಾಡಲಾಯಿತು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ ಇತರ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೀರು ಸರಬರಾಜು ಯೋಜನೆಗಳು ಮತ್ತು ಒಳಚರಂಡಿ ಯೋಜನೆಗಳ ಸಾಮರ್ಥ್ಯ ಮತ್ತು ಸೃಷ್ಟಿಗೆ ಮಂಡಳಿಯು ಹೊಣೆಯಾಗಿತ್ತು. ಮಂಡಳಿಯು ಪ್ರಾರಂಭವಾದಾಗಿನಿಂದ ರಾಜ್ಯದಾದ್ಯಂತ 567 ನೀರು ಸರಬರಾಜು ಯೋಜನೆಗಳನ್ನು ಮತ್ತು 88 ಒಳಚರಂಡಿ ಯೋಜನೆಗಳನ್ನು ಅನುಷ್ಠಾನಗೊಳಿಸಿ ಮಾರ್ಚ್ 2019ರ ಅಂತ್ಯದಲ್ಲಿದ್ದಂತೆ ₹8,357.17 ಕೋಟಿ ವೆಚ್ಚವನ್ನು ಭರಿಸಿತ್ತು.

ಮಂಡಳಿಯು ಕೈಗೆತ್ತಿಕೊಂಡ ಪ್ರತಿಯೊಂದು ಯೋಜನೆಗೆ ಕಾರ್ಯಸಾಧ್ಯತಾ ವರದಿಯನ್ನು ತಯಾರಿಸುತ್ತದೆ ಮತ್ತು ಅದನ್ನು ಪರಿಶೀಲಿಸಲು ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಗೆ ಕಳುಹಿಸುತ್ತದೆ. ಯೋಜನೆಯು ಆರ್ಥಿಕವಾಗಿ ಕಾರ್ಯಸಾಧ್ಯವೆಂದು ಕಂಡುಬಂದಲ್ಲಿ ಸ್ಥಳೀಯ ಸಂಸ್ಥೆಗಳು ನಿರ್ಣಯವನ್ನು ಅಂಗೀಕರಿಸುತ್ತಾರೆ. ನಗರ ಸ್ಥಳೀಯ ಸಂಸ್ಥೆಗಳ ವಂತಿಗೆಯೊಂದಿಗೆ ಬಂಡವಾಳ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಸರ್ಕಾರದ ಖಾತರಿಯ ಮೇರೆಗೆ ಮಂಡಳಿಯು ಹಣಕಾಸು ಸಂಸ್ಥೆಗಳಿಂದ ಹಣವನ್ನು ಸಾಲ ಪಡೆಯುತ್ತದೆ. ಪ್ರತಿ ವರ್ಷ ರಾಜ್ಯ ಹಣಕಾಸು ಆಯೋಗ ನಿಧಿಯನ್ನು ಹಂಚಿಕೆ ಮಾಡುವ ಸಮಯದಲ್ಲಿ ರಾಜ್ಯ ಹಣಕಾಸು ಆಯೋಗ ನಿಧಿಗಳ ಮೂಲಕ ಸಾಲವನ್ನು ಮರುಪಾವತಿ ಮಾಡಲಾಗುತ್ತದೆ. 2014–19ರ ಅವಧಿಯಲ್ಲಿ ಮಂಡಳಿಯು ₹2,858.42 ಕೋಟಿ ಪಡೆದಿದ್ದು ₹2,528.03 ಕೋಟಿಗಳನ್ನು ವೆಚ್ಚ ಮಾಡಿತ್ತು. ಮಾರ್ಚ್ 2019 ರಲ್ಲಿದ್ದಂತೆ, ಮಂಡಳಿಯ ಪುಸ್ತಕಗಳಲ್ಲಿ ₹1,160.31 ಕೋಟಿ ಮೊತ್ತವು ಸಾಲವಾಗಿ ಬಾಕಿ ಉಳಿದಿತ್ತು.

ಸರ್ಕಾರದ ನಿರ್ದೇಶನದ ಮೇರೆಗೆ ಮಂಡಳಿಯು ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಕೈಗೆತ್ತಿಕೊಳ್ಳಬಹುದು. ಪ್ರಸ್ತುತ ಮಂಡಳಿಗೆ 10 ನೀರು ಸರಬರಾಜು ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ವಹಿಸಲಾಗಿದೆ.

### *4.4.4* ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ – ನೀರು ಸರಬರಾಜು, ಒಳಚರಂಡಿ ಮತ್ತು ಇತರ ಮೂಲಸೌಕರ್ಯ ಯೋಜನೆಗಳು

ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಪರಿಸ್ಥಿತಿಯು ಜವಾಬ್ದಾರಿಗಳು ಮತ್ತು ಸೇವೆಗಳಿಗೆ ಹಣ ಒದಗಿಸುವುದರ ನಡುವಿನ ಹೊಂದಾಣಿಕೆ ಇಲ್ಲದಿರುವುದು, ದುರ್ಬಲ ಸಾಮರ್ಥ್ಯ ಇತ್ಯಾದಿಗಳಿಂದ ನಿರೂಪಿತವಾಗಿದೆ, ಇವೆಲ್ಲವು ನಾಗರಿಕ ಸೇವೆಗಳ ಬೇಡಿಕೆ ಮತ್ತು ಪೂರೈಕೆಯ ನಡುವಿನ ಅಂತರವನ್ನು ಹೆಚ್ಚಿಸಲು ಕಾರಣವಾಗಿವೆ. ಈ ಪರಿಸ್ಥಿತಿಯು ಹೂಡಿಕೆಗಳನ್ನು ಪ್ರೋತ್ಸಾಹಿಸಲಿಲ್ಲ ಮತ್ತು ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಆರ್ಥಿಕ ಸಾಮರ್ಥ್ಯವನ್ನು ಅರ್ಥ ಮಾಡಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಕಂಪೆನಿ ಕಾಯ್ದೆ 1956ರ ಅಡಿಯಲ್ಲಿ 2 ನವೆಂಬರ್ 1993ರಂದು ಸಾರ್ವಜನಿಕ ನಿಯಮಿತ ಕಂಪನಿಯಾಗಿ ಸ್ಥಾಪಿಸಲ್ಪಟ್ಟ ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮವು (ಕೆಯುಐಡಿಎಫ್‌ಸಿ) ನಗರ ಸ್ಥಳೀಯ ಸಂಸ್ಥೆಗಳಿಗೆ ಸಾಮರ್ಥ್ಯ ನಿರ್ಮಾಣ ಮತ್ತು ಹೂಡಿಕೆ ಬೆಂಬಲವನ್ನು ಒದಗಿಸಲು, ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ (ಎಡಿಬಿ), ವಿಶ್ವಬ್ಯಾಂಕ್ ಮುಂತಾದ ಬಾಹ್ಯ ಮೂಲಗಳ ಬೆಂಬಲದೊಂದಿಗೆ ವಿವಿಧ ಯೋಜನೆಗಳನ್ನು ಹಾಗೂ ಕೇಂದ್ರ ಪ್ರಾಯೋಜಿತ ಯೋಜನೆಗಳು ಮತ್ತು ರಾಜ್ಯ ಸರ್ಕಾರದ ಯೋಜನೆಗಳನ್ನು ಕೈಗೆತ್ತಿಕೊಂಡಿತು. ಸರ್ಕಾರವು ಬಿಡುಗಡೆ ಮಾಡಿದ ರಾಜ್ಯ ಹಣಕಾಸು ಆಯೋಗ ಅನುದಾನಗಳಿಂದ ಮರುಪಾವತಿಗಳನ್ನು ಮಾಡಲಾಯಿತು.

ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಸಂಭಾವ್ಯ ಹೂಡಿಕೆ ಮತ್ತು ಸಾಮರ್ಥ್ಯ ನಿರ್ಮಾಣದ ಕಾರ್ಯಕ್ರಮವನ್ನು ಬೆಂಬಲಿಸುವ ಸಾಲ/ಅನುದಾನ ಪ್ರಸ್ತಾವನೆಯೊಂದಿಗೆ ಕೆಯುಐಡಿಎಫ್‌ಸಿಯನ್ನು ಸಂಪರ್ಕಿಸುತ್ತವೆ. ಈ ಸನ್ನಿವೇಶದಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಸಾಲ ಮತ್ತು ಅನುದಾನದ ನಿಯಮ ಹಾಗೂ ಷರತ್ತುಗಳನ್ನು ನಿರ್ದಿಷ್ಟಪಡಿಸುವ ಒಪ್ಪಂದವನ್ನು ಮಾಡಿಕೊಳ್ಳುತ್ತವೆ, ಜೊತೆಗೆ ಕೆಯುಐಡಿಎಫ್‌ಸಿ ಮತ್ತು ನಗರ ಸ್ಥಳೀಯ ಸಂಸ್ಥೆ ಎರಡೂ ಸಾಲ ಒಪ್ಪಂದಕ್ಕೆ ಭಾಗೀಧಾರರಾಗಿರುತ್ತವೆ. ಎಲ್ಲಾ ಯೋಜನೆಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಧ್ಯಕ್ಷರಾಗಿರುವ, ನಗರಾಭಿವೃದ್ಧಿ, ಯೋಜನೆ ಮತ್ತು ಹಣಕಾಸು ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು; ನಿರ್ದೇಶಕರು–ನಗರ ಯೋಜನೆ; ಪೌರಾಡಳಿತ ನಿರ್ದೇಶಕರು; ಬಿಡಬ್ಲ್ಯುಎಸ್‌ಎಸ್‌ಬಿ ಅಧ್ಯಕ್ಷರು; ಬಿಬಿಎಮ್‌ಪಿ ಆಯುಕ್ತರು, ಇವರುಗಳು ಸದಸ್ಯರಾಗಿರುವ ಹಾಗೂ ಕೆಯುಐಡಿಎಫ್‌ಸಿಯ ವ್ಯವಸ್ಥಾಪಕ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿರುವ ಉನ್ನತಾಧಿಕಾರದ ಸಮಿತಿಯು ಮೇಲ್ವಿಚಾರಣೆ ಮಾಡುತ್ತದೆ.

ಕೆಯುಐಡಿಎಫ್‌ಸಿ ಯಲ್ಲಿರುವ ಯೋಜನಾ ಮೇಲ್ವಿಚಾರಣಾ ಘಟಕವು ಯೋಜನಾ ಕೇಂದ್ರ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಯೋಜನಾ ಅನುಷ್ಠಾನ ಘಟಕಗಳನ್ನು ನಿರ್ವಹಿಸುತ್ತದೆ. ಮೇಲ್ವಿಚಾರಣೆ ಮತ್ತು ಗುಣಮಟ್ಟದ ಭರವಸೆಗಾಗಿ ಯೋಜನಾ ನಿರ್ವಹಣಾ ಸಮಾಲೋಚಕರನ್ನು (ಪಿಎಮ್‌ಸಿ) ನೇಮಿಸಲಾಗುತ್ತದೆ. ಡಿಪಿಆರ್‌ಗಳ ತಯಾರಿಕೆ, ಅಳತೆಗಳ ಪರಿಶೀಲನೆ ಮತ್ತು ಬಿಲ್‌ಗಳನ್ನು ಅಂಗೀಕರಿಸುವ ಜವಾಬ್ದಾರಿಯನ್ನು ಪಿಎಮ್‌ಸಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳು ಜಂಟಿಯಾಗಿ ಹೊಂದಿದ್ದವು. ಪೂರ್ಣಗೊಂಡ ನಂತರ ಯೋಜನೆಯ ಸ್ವತ್ತುಗಳನ್ನು ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಬೇಕು. 2014–2019ರ ಅವಧಿಯಲ್ಲಿ ವಿವಿಧ ಯೋಜನೆಗಳ ಅಡಿಯಲ್ಲಿ ಲಭ್ಯವಿರುವ ₹4,215.23 ಕೋಟಿ ಹಣದಲ್ಲಿ ಕೆಯುಐಡಿಎಫ್‌ಸಿ ₹2,573.27 ಕೋಟಿಯನ್ನು ವೆಚ್ಚ ಮಾಡಿತ್ತು.

ಕೆಯುಐಡಿಎಫ್‌ಸಿಯ ಸಿಬ್ಬಂದಿಯ ಸಂಯೋಜನೆಯು ಮಂಡಳಿಯ ಮತ್ತು ಯೋಜನೆಯ ನೌಕರರು ಇಬ್ಬರನ್ನೂ ಒಳಗೊಂಡಿತ್ತು. ಕೆಯುಐಡಿಎಫ್‌ಸಿ ವಿವಿಧ ಮೂಲಸೌಕರ್ಯ ಯೋಜನೆಗಳನ್ನು

ಕಾರ್ಯಗತಗೊಳಿಸುತ್ತಿದ್ದರೂ ಯೋಜನೆಯಡಿ ಮತ್ತು ಮಂಡಳಿಯೊಳಗಿನ ಸಿಬ್ಬಂದಿ ಸಾಮರ್ಥ್ಯವು ಶೇಕಡಾ 50ಕ್ಕಿಂತ ಕಡಿಮೆಯಿದ್ದಿತು.

ನೀರು ಸರಬರಾಜು ಮತ್ತು ಒಳಚರಂಡಿ ನಗರ ಸ್ಥಳೀಯ ಸಂಸ್ಥೆಗಳ ಪ್ರಾಥಮಿಕ ಪ್ರಕಾರ್ಯಗಳಾಗಿದ್ದರೂ ಸಹ ಅಗತ್ಯ ಮೂಲಸೌಕರ್ಯಗಳ ರಚನೆಗಾಗಿ ನಗರ ಸ್ಥಳೀಯ ಸಂಸ್ಥೆಗಳು ಮೇಲಿನ ಸಂಸ್ಥೆಗಳ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿದ್ದವು ಎಂಬುದು ಮೇಲಿನ ಎರಡು ಕಂಡಿಕೆಗಳಿಂದ ಸ್ಪಷ್ಟವಾಗುತ್ತದೆ. ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಆಸ್ತಿ ಸೃಷ್ಟಿಗಾಗಿ ಕೆಯುಡಬ್ಲ್ಯೂಎಸ್&ಡಿಬಿ/ ಕೆಯುಐಡಿಎಫ್‌ಸಿ ಪಡೆದ ಸಾಲಗಳಿಗೆ ಭಾಗೀಧಾರರಾಗಿದ್ದರೂ ಸಹ ಪಡೆದ ಸಾಲಗಳಾಗಲೀ ಅಥವಾ ಸಂಸ್ಥೆಗಳು ರಚಿಸಿದ ಸ್ವತ್ತುಗಳಾಗಲೀ ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕ ಪುಸ್ತಕಗಳಲ್ಲಿ ಪ್ರತಿಬಿಂಬಿತವಾಗಿರಲಿಲ್ಲ.

ಕೆಯುಡಬ್ಲ್ಯೂಎಸ್&ಡಿಬಿ ಅಸ್ತಿತ್ವದ ಹೊರತಾಗಿಯೂ ಮತ್ತೊಂದು ಅಂಗಸಂಸ್ಥೆಯನ್ನು ರಚಿಸುವ ಅಗತ್ಯತೆಯ ಬಗ್ಗೆ ಸ್ಪಷ್ಟತೆಯಿರಲಿಲ್ಲ. 10 ನಗರ ಸ್ಥಳೀಯ ಸಂಸ್ಥೆಗಳನ್ನು ಹೊರತುಪಡಿಸಿ (ಕೋಷ್ಟಕ–4.1ರಲ್ಲಿ ಸೂಚಿಸಿರುವಂತೆ) ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ಮೇಲಿನ ಸಂಸ್ಥೆಗಳು ರಚಿಸಿದ ಸ್ವತ್ತುಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಹೊಣೆಗಾರರಾಗಿದ್ದವು. ಈ ಪ್ರಕಾರ್ಯವನ್ನು ನಿರ್ವಹಿಸುವಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಪಾತ್ರವು ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಮಾತ್ರ ಸೀಮಿತವಾಗಿತ್ತು.

***ಶಿಫಾರಸು–7: ಯೋಜನೆ, ನಿಯಂತ್ರಣ, ಕೊಳೆಗೇರಿ ಅಭಿವೃದ್ಧಿ ಮತ್ತು ನೀರು ಸರಬರಾಜು ಹಾಗೂ ನೈರ್ಮಲ್ಯ ಪ್ರಕಾರ್ಯಗಳಲ್ಲಿ ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ನಗರ ಸ್ಥಳೀಯ ಸಂಸ್ಥೆಗಳನ್ನು ಸಂಪೂರ್ಣವಾಗಿ ಒಳಗೊಳ್ಳುವ ಅವಶ್ಯಕತೆಯಿದೆ.***

# 5 ಅಧ್ಯಾಯ V
## ನಗರ ಸ್ಥಳೀಯ ಸಂಸ್ಥೆಗಳ ಹಣಕಾಸಿನ ಸಂಪನ್ಮೂಲಗಳು

ಯಾವುದೇ ಪ್ರಕಾರ್ಯವನ್ನು ನಿರ್ವಹಿಸಲು ಸಮರ್ಥವಾದ ಹಣಕಾಸು ನಿರ್ವಹಣೆಯು ಅತಿ ಪ್ರಮುಖವಾಗಿದೆ. ವರ್ಗಾಯಿಸಿದ ಪ್ರಕಾರ್ಯಗಳನ್ನು ಸಾಕಷ್ಟು ಆರ್ಥಿಕ ಸಂಪನ್ಮೂಲಗಳೊಂದಿಗೆ ಬೆಂಬಲಿಸಿದಾಗ ಮಾತ್ರ ನಗರ ಸ್ಥಳೀಯ ಸಂಸ್ಥೆಗಳು ಅವುಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಬಹುದು. ಅಂತಹ ಹಣಕಾಸಿನ ಸಂಪನ್ಮೂಲಗಳು ಸೂಕ್ತವಾದ ವೆಚ್ಚ ಮಾಡುವ ಅಧಿಕಾರಗಳೊಂದಿಗೆ ನಿರೀಕ್ಷಿಸಬಹುದಾದ ಹಣಕಾಸಿನ ವರ್ಗಾವಣೆಯ ರೂಪವನ್ನು ತೆಗೆದುಕೊಳ್ಳಬಹುದು ಅಥವಾ ದೃಢ ಮತ್ತು ವೆಚ್ಚದ ಬಾಧ್ಯತೆಗಳಿಗೆ ಅನುಗುಣವಾದ ಉತ್ತೇಜನಾಕಾರಿಯಾದ ಸ್ವಂತ ರಾಜಸ್ವದ ಮಾರ್ಗವನ್ನು ಹೊಂದಬಹುದು. ನಗರ ಸ್ಥಳೀಯ ಸಂಸ್ಥೆಗಳಿಗೆ ನಿರೀಕ್ಷಿತ ಹಣಕಾಸಿನ ವರ್ಗಾವಣೆಯನ್ನು ದೃಢವಾದ ರಾಜ್ಯ ಹಣಕಾಸು ಆಯೋಗದ ವ್ಯವಸ್ಥೆಯ ಮತ್ತು ರಾಜ್ಯ ಮತ್ತು ಕೇಂದ್ರ ಹಣಕಾಸು ಆಯೋಗದ ಶಿಫಾರಸುಗಳ ಅನುಸರಣೆಯ ಮೂಲಕ ಖಚಿತಪಡಿಸಿಕೊಳ್ಳಬೇಕು. ಸ್ವಂತ ಆದಾಯದ ಮಾರ್ಗಗಳು ನಿರ್ದಿಷ್ಟ ರಾಜಸ್ವದಿಂದ ವಿಧಿಸುವ ಮತ್ತು ಸಂಗ್ರಹಿಸುವ ಶಕ್ತಿಯನ್ನು ಒಳಗೊಂಡಿರುತ್ತದೆ. ವೆಚ್ಚ ಮಾಡುವ ಅಧಿಕಾರವು ನಗರ ಸ್ಥಳೀಯ ಸಂಸ್ಥೆಗಳಿಗೆ ತಮ್ಮ ಹಣಕಾಸಿನ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಅನುವು ಮಾಡಿಕೊಡುವ ಸಮಂಜಸವಾದ ಅಧಿಕಾರದ ಮಿತಿಗಳನ್ನು ಉಲ್ಲೇಖಿಸುತ್ತವೆ.

## 5.1 ರಾಜಸ್ವದ ಮೂಲಗಳು

2014–15ರಿಂದ 2018–19ರ ಅವಧಿಯಲ್ಲಿ ರಾಜ್ಯದಲ್ಲಿನ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ರಾಜಸ್ವ ವಿವರಗಳನ್ನು **ಕೋಷ್ಟಕ–5.1**ರಲ್ಲಿ ನೀಡಲಾಗಿದೆ.

**ಕೋಷ್ಟಕ–5.1: 2014–15ರಿಂದ 2018–19ರ ಅವಧಿಯಲ್ಲಿ ರಾಜ್ಯದಲ್ಲಿನ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ರಾಜಸ್ವದ ವಿವರಗಳು**

(₹ ಕೋಟಿಗಳಲ್ಲಿ)

| ವರ್ಷ | ಅನುದಾನಗಳು | ಸ್ವಂತ ಆದಾಯ | ನಿಯೋಜಿತ ರಾಜಸ್ವ | ಒಟ್ಟು ರಾಜಸ್ವ | ಒಟ್ಟು ರಾಜಸ್ವಕ್ಕೆ ಸ್ವಂತ ಆದಾಯದ ಶೇಕಡಾವಾರು |
|---|---|---|---|---|---|
| 2014–15 | 1,640.80 | 1,022.82 | 1.30 | 2,664.92 | 38 |
| 2015–16 | 2,644.17 | 1,191.04 | 1.42 | 3,836.63 | 31 |
| 2016–17 | 2,302.67 | 1,352.53 | 9.85 | 3,665.05 | 37 |
| 2017–18 | 2,493.07 | 1,517.60 | 18.56 | 4,029.23 | 38 |
| 2018–19 | 2,300.01 | 1,586.38 | 23.19 | 3,909.58 | 41 |
| **ಒಟ್ಟು** | **11,380.72** | **6,670.37** | **54.32** | **18,105.41** | **37** |

ಆಧಾರ: *271* ನಗರ ಸ್ಥಳೀಯ ಸಂಸ್ಥೆಗಳಿಗೆ ಪೌರಾಡಳಿತ ನಿರ್ದೇಶನಾಲಯ ನೀಡಿದ ಮಾಹಿತಿ

### 5.1.1 ನಗರ ಸ್ಥಳೀಯ ಸಂಸ್ಥೆಗಳಿಗೆ ಆರ್ಥಿಕ ವರ್ಗಾವಣೆಗಳು

ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಅನುದಾನಗಳ ರೂಪದಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ವರ್ಗಾವಣೆಯ ಮೂಲಕ ಹಣವನ್ನು ಹಂಚಿಕೆ ಮಾಡಲಾಯಿತು. ಮೇಲಿನ ಕೋಷ್ಟಕದಿಂದ ಗಮನಿಸಬಹುದಾದಂತೆ, 2014–15ರಿಂದ 2018–19ರ ಅವಧಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ ರಾಜಸ್ವದ ಪ್ರಮುಖ ಭಾಗವು (ಸರಾಸರಿ ಶೇಕಡಾ 63) ಸರ್ಕಾರದಿಂದಾದ ಹಣಕಾಸಿನ ವರ್ಗಾವಣೆಯಾಗಿದ್ದಿತು.

ಬಿಡುಗಡೆಯಾದ ಅನುದಾನದಲ್ಲಿ ಶೇಕಡಾ 51ರಿಂದ (2015–16) 81ರಷ್ಟು (2018–19) ವೇತನ ಮತ್ತು ವಿದ್ಯುತ್ ಬಿಲ್ಲುಗಳ ಪಾವತಿಗಾಗಿ ಬಂಧಿತ ಅನುದಾನದ ರೂಪದಲ್ಲಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು ಮತ್ತು ಬಂಧಿತವಲ್ಲದ ಅನುದಾನವು ಶೇಕಡಾ 19ರಿಂದ 49ರವರೆಗೆ ಇದ್ದಿತು. ಆದರೂ, ಕೆಳಗೆ ಚರ್ಚಿಸಿದಂತೆ, ಹಣಕಾಸಿನ ವರ್ಗಾವಣೆಯಲ್ಲಿ ಕೆಲವು ನ್ಯೂನತೆಗಳಿದ್ದವು.

### 5.1.1.1 ರಾಜ್ಯ ಹಣಕಾಸು ಆಯೋಗದ ಅನುದಾನಗಳು

ನಗರ ಸ್ಥಳೀಯ ಸಂಸ್ಥೆಗಳ ಹಣಕಾಸಿನ ಸಂಪನ್ಮೂಲಗಳ ಪ್ರಮುಖ ಪಾಲು ರಾಜ್ಯ ಹಣಕಾಸು ಆಯೋಗವು ಶಿಫಾರಸು ಮಾಡಿದ ಅನುದಾನವನ್ನು ಒಳಗೊಂಡಿದೆ. ರಾಜ್ಯ ಹಣಕಾಸು ಆಯೋಗದ ಸಮಯೋಚಿತ ರಚನೆ ಮತ್ತು ಅದರ ಶಿಫಾರಸುಗಳನ್ನು ಅಂಗೀಕರಿಸುವುದು ನಗರ ಸ್ಥಳೀಯ ಸಂಸ್ಥೆಗಳಿಗೆ ಖಚಿತವಾದ ಹಣವನ್ನು ವರ್ಗಾವಣೆ ಮಾಡುವುದರ ಮೇಲೆ ಪರಿಣಾಮ ಬೀರುತ್ತದೆ.

#### ❖ ಅನುದಾನಗಳ ನಷ್ಟ

ಕಂಡಿಕೆ 4.2.6.1ರಲ್ಲಿ ಈಗಾಗಲೇ ಚರ್ಚಿಸಿದಂತೆ, ರಾಜ್ಯ ಹಣಕಾಸು ಆಯೋಗಗಳ ರಚನೆ ಮತ್ತು ಅವುಗಳ ಶಿಫಾರಸುಗಳ ಅನುಷ್ಠಾನದಲ್ಲಿ ಸಾಕಷ್ಟು ವಿಳಂಬವಾಗಿತ್ತು. ನಾಲ್ಕನೇ ರಾಜ್ಯ ಹಣಕಾಸು ಆಯೋಗದ ರಚನೆ ಮತ್ತು ವರದಿಯನ್ನು ಸಲ್ಲಿಸುವಲ್ಲಿನ ವಿಳಂಬವೊಂದರಿಂದಲೇ 2016–17ರಿಂದ 2018–19ರ ಅವಧಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಆಗಿರುವ ನಷ್ಟವನ್ನು **ಕೋಷ್ಟಕ–5.2**ರಲ್ಲಿ ನೀಡಲಾಗಿದೆ.

**ಕೋಷ್ಟಕ–5.2: ನಾಲ್ಕನೇ ರಾಜ್ಯ ಹಣಕಾಸು ಆಯೋಗದ ರಚನೆಯಲ್ಲಿ ವಿಳಂಬವಾದ್ದರಿಂದ 2016–17ರಿಂದ 2018–19ರ ಅವಧಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗಾದ ನಷ್ಟ**

(₹ ಕೋಟಿಗಳಲ್ಲಿ)

| ವಿವರಗಳು | 2016–17 | 2017–18 | 2018–19 |
|---|---|---|---|
| ರಾಜ್ಯದ ಸಾಲಯೇತರ ನಿವ್ವಳ ಸ್ವಂತ ರಾಜಸ್ವ ಸ್ವೀಕೃತಿಗಳು (ಎನ್ಎಲ್ಎನ್ಒಆರ್ಆರ್) | 88,750 | 93,607 | 1,03,602.58 |
| ರಾಜ್ಯ ಹಣಕಾಸು ಆಯೋಗದ ಶಿಫಾರಸಿನಂತೆ ಹಂಚಿಕೆ (ಎನ್ಎಲ್ಎನ್ಒಆರ್ಆರ್ ನ ಶೇಕಡಾ 10.5ರಿಂದ 12) | 9,318.75 (10.5) | 10,296.77 (11) | 11,914.30 (11.5) |
| ರಾಜ್ಯ ಸರ್ಕಾರವು ನಿರ್ಧಾರ ಮಾಡಿದಂತೆ ಹಂಚಿಕೆ (ಎನ್ಎಲ್ಎನ್ಒಆರ್ಆರ್ ನ ಶೇಕಡಾ 10ರಿಂದ 10.5) | 8,875.07 (10) | 9,360.7 (10) | 10,878.27 (10.50) |
| ಅನುದಾನಗಳ ನಷ್ಟ | 443.68 | 936.07 | 1,036.03 |

ಆಧಾರ: ರಾಜ್ಯ ಸರ್ಕಾರವು ನೀಡಿದ ಮಾಹಿತಿ ಮತ್ತು ಹಣಕಾಸಿನ ಲೆಕ್ಕಪತ್ರಗಳು

#### ❖ ರಾಜ್ಯ ಹಣಕಾಸು ಆಯೋಗದಡಿಯಲ್ಲಿ ಹಣದ ಕಡಿಮೆ ಬಿಡುಗಡೆ

ರಾಜ್ಯ ಸರ್ಕಾರದ ಆದೇಶಗಳ ಅನ್ವಯ ಬಿಡುಗಡೆಯಾಗಬೇಕ್ಕಿದ್ದ ಮತ್ತು 2014–15ರಿಂದ 2018–19ರ ಅವಧಿಯಲ್ಲಿ ವಾಸ್ತವಿಕವಾಗಿ ಬಿಡುಗಡೆ ಮಾಡಿದ ಹಣದ ವಿವರಗಳನ್ನು **ಕೋಷ್ಟಕ–5.3**ರಲ್ಲಿ ನೀಡಲಾಗಿದೆ.

**ಕೋಷ್ಟಕ–5.3: 2014–15ರಿಂದ 2018–19ರ ಅವಧಿಯಲ್ಲಿ ರಾಜ್ಯ ಹಣಕಾಸು ಆಯೋಗದಡಿಯಲ್ಲಿ ಬಿಡುಗಡೆಯಾಗಬೇಕ್ಕಿದ್ದ ಮತ್ತು ಬಿಡುಗಡೆ ಮಾಡಿದ ಅನುದಾನಗಳ ವಿವರಗಳು**

(₹ ಕೋಟಿಗಳಲ್ಲಿ)

| ವಿವರಗಳು | 2014–15 | 2015–16 | 2016–17 | 2017–18 | 2018–19 | ಒಟ್ಟು |
|---|---|---|---|---|---|---|
| ರಾಜ್ಯದ ಸಾಲಯೇತರ ನಿವ್ವಳ ಸ್ವಂತ ರಾಜಸ್ವ ಸ್ವೀಕೃತಿಗಳು (ಎನ್ಎಲ್ಎನ್ಒಆರ್ಆರ್) | 74,870.00 | 80,905.22 | 88,750.66 | 93,607.00 | 1,03,602.58 | |
| ರಾಜ್ಯ ಸರ್ಕಾರವು ನಿರ್ಧಾರ ಮಾಡಿದಂತೆ ಹಂಚಿಕೆ (ಎನ್ಎಲ್ಎನ್ಒಆರ್ಆರ್ ನ ಶೇಕಡಾ 10ರಿಂದ 10.5) | 7,487 | 8,090 | 8,875.07 | 9,360.70 | 10,878.27 | 44,691.04 |
| ನಗರ ಸ್ಥಳೀಯ ಸಂಸ್ಥೆಗಳಿಗೆ ವಾಸ್ತವಿಕವಾಗಿ ಬಿಡುಗಡೆ ಮಾಡಿದ ಹಣ | 2,990.77 | 3,306.81 | 3,304.30 | 3,762.74 | 3,754.40 | 17,119.02 |
| ಅಂಗ ಸಂಸ್ಥೆಗಳಿಗೆ ಬಿಡುಗಡೆ ಮಾಡಿದ ಹಣ | 514.98 | 1,677.34 | 2,421.36 | 3,759.78 | 3,634.19 | 12,007.65 |
| **ಕಡಿಮೆ ಬಿಡುಗಡೆ** | **3,981.25** | **3,105.85** | **3,149.41** | **1,838.18** | **3,489.68** | **15,564.37** |

ಆಧಾರ: ಹಣಕಾಸಿನ ಲೆಕ್ಕಪತ್ರಗಳು ಮತ್ತು ಸರ್ಕಾರವು ನೀಡಿದ ಅಂಕಿಅಂಶಗಳು

ಲೆಕ್ಕಪರಿಶೋಧನೆಯು ಕೆಳಕಂಡಂತೆ ಗಮನಿಸಿತು:

- ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆಯಾದ ಹಣವು ಅಧ್ಯಾದೇಶವಾಗಿದ್ದ ಹಂಚಿಕೆಯ ಶೇಕಡಾ 20ರಿಂದ (2017–18) ಶೇಕಡಾ 53ರಷ್ಟು (2014–15) ಕಡಿಮೆಯಿದ್ದಿತು.
- 3ನೇ ಮತ್ತು 4ನೇ ರಾಜ್ಯ ಹಣಕಾಸು ಆಯೋಗಗಳು ನಗರ ಸ್ಥಳೀಯ ಸಂಸ್ಥೆಗಳ ಹಂಚಿಕೆಗಳಿಗೆ ಪ್ರತಿಯಾಗಿ ಸಾಲ ಮರುಪಾವತಿಯನ್ನು ಹೊಂದಾಣಿಕೆ ಮಾಡಬೇಕೆಂದು ಶಿಫಾರಸು ಮಾಡಿತ್ತು. ಆದರೆ, ರಾಜ್ಯ ಸರ್ಕಾರವು ಸಾಲ ಮರುಪಾವತಿಯ ಬಾಧ್ಯತೆಯನ್ನು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೂ, ಅವುಗಳು ಸಾಲವನ್ನು ಪಡೆದಿವೆಯೋ ಅಥವಾ ಇಲ್ಲವೋ, ಹಂಚಿಕೆ ಮಾಡುವ ಅಭ್ಯಾಸವನ್ನು ಅಳವಡಿಸಿಕೊಂಡಿತ್ತು. ನಗರ ಸ್ಥಳೀಯ ಸಂಸ್ಥೆಗಳ ಪರವಾಗಿ ಕೆಯುಡಬ್ಲ್ಯುಎಸ್&ಡಿಬಿ ಮತ್ತು ಕೆಯುಐಡಿಎಫ್‌ಸಿ ಅಂಗಸಂಸ್ಥೆಗಳು ಸಾಲವನ್ನು ಮರುಪಾವತಿಸುವ ಸಲುವಾಗಿ 2014–15 ರಿಂದ 2018–19ರ ಅವಧಿಯಲ್ಲಿ ರಾಜ್ಯ ಸರ್ಕಾರವು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಪಾವತಿಸಬೇಕಾದ ಒಟ್ಟು ಮೊತ್ತದಿಂದ ₹12,007.65 ಕೋಟಿಯನ್ನು ಕಡಿತಗೊಳಿಸಿದ್ದಿತು. ಇದು, ಯಾವುದೇ ಸಾಲವನ್ನು ಪಡೆಯದಿದ್ದ ನಗರ ಸ್ಥಳೀಯ ಸಂಸ್ಥೆಗಳಿಗೆ ಕಡಿಮೆ ಹಣದ ಬಿಡುಗಡೆಯಲ್ಲಿ ಪರಿಣಮಿಸಿತು ಮತ್ತು ರಾಜ್ಯ ಹಣಕಾಸು ಆಯೋಗದ ಸಂಪೂರ್ಣ ಪಾಲನ್ನು ಪಡೆಯುವುದರಿಂದ ವಂಚಿಸಿದಂತಾಯಿತು.

ಎನ್ಎಲ್ಎನ್ಒಆರ್ಆರ್‌ನ ಶೇಕಡಾವಾರನ್ನು ಲೆಕ್ಕಾಚಾರ ಮಾಡಲು ರಾಜ್ಯ ಸ್ವಾಮ್ಯದ ಯೋಜನೆಗಳಿಗೆ ಬಿಡುಗಡೆ, ಭಾರತ ಸರ್ಕಾರದ ಬಿಡುಗಡೆಗಳಿಗೆ ಪ್ರತಿಯಾಗಿ ರಾಜ್ಯದ ಪಾಲು, ಬಾಹ್ಯ ನೆರವು ಪಡೆದ ಯೋಜನೆಗಳು, ಅಂಗಸಂಸ್ಥೆಗಳು ಮತ್ತು ಕೇಂದ್ರ ಹಣಕಾಸು ಆಯೋಗದ ಅನುದಾನಗಳನ್ನು ನಗರ

ಸ್ಥಳೀಯ ಸಂಸ್ಥೆಗಳ ಪಾಲು ಎಂದು ಪರಿಗಣಿಸಬೇಕಾದ್ದರಿಂದ ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆಗಳಲ್ಲಿ ಯಾವುದೇ ಕೊರತೆಯಿರಲಿಲ್ಲ ಎಂದು ರಾಜ್ಯ ಸರ್ಕಾರವು ತಿಳಿಸಿತು (ನವೆಂಬರ್ 2019). ಅದರಂತೆ ರಾಜ್ಯ ಸರ್ಕಾರವು 2014–15, 2015–16, 2016–17 ಮತ್ತು 2017–18ರ ಅವಧಿಯಲ್ಲಿ ಕ್ರಮವಾಗಿ ಶೇಕಡಾ 11.64, ಶೇಕಡಾ 14.15, ಶೇಕಡಾ 15.12 ಮತ್ತು ಶೇಕಡಾ 12.86ರಷ್ಟು ಬಿಡುಗಡೆ ಮಾಡಿತ್ತು.


ರಾಜ್ಯ ಹಣಕಾಸು ಆಯೋಗದ ಅನುದಾನವು ಎನ್‌ಎಲ್‌ಎನ್‌ಓಆರ್‌ಆರ್ ಪಾಲಿನ ಒಂದು ಸಮಗ್ರ ಹಂಚಿಕೆಯೆಂದು ಶಿಫಾರಸು ಮಾಡಿರುವುದರಿಂದ ಮತ್ತು ರಾಜ್ಯ/ಕೇಂದ್ರ ಯೋಜನೆಗಳ ಅನುಷ್ಠಾನಕ್ಕೆ ಬಿಡುಗಡೆಯಾದ ಮೊತ್ತವನ್ನು ಮತ್ತು ಕೇಂದ್ರ ಹಣಕಾಸು ಆಯೋಗದ ಅನುದಾನಗಳನ್ನು ಒಳಗೊಂಡಿರದ ಕಾರಣ ಸರ್ಕಾರದ ಉತ್ತರವು ಸಮಂಜಸವಾಗಿರಲಿಲ್ಲ. 2ನೇ, 3ನೇ ಮತ್ತು 4ನೇ ರಾಜ್ಯ ಹಣಕಾಸು ಆಯೋಗಗಳು ಕೇಂದ್ರ ಹಣಕಾಸು ಆಯೋಗದ ಅನುದಾನವು ಎನ್‌ಎಲ್‌ಎನ್‌ಓಆರ್‌ಆರ್‌ನ ಭಾಗವಾಗಿರದ ಕಾರಣ ಹಂಚಿಕೆ ಎಂದು ಪರಿಗಣಿಸಬಾರದು ಎಂದು ಸಹ ಶಿಫಾರಸು ಮಾಡಿದ್ದವು.

### 5.1.1.2 ಕೇಂದ್ರ ಹಣಕಾಸು ಆಯೋಗದ ಅನುದಾನಗಳು

ಸಂಬಂಧಿಸಿದ ರಾಜ್ಯ ಹಣಕಾಸು ಆಯೋಗಗಳ ಶಿಫಾರಸುಗಳ ಆಧಾರದ ಮೇಲೆ ಪೌರಸಂಸ್ಥೆಗಳ ಸಂಪನ್ಮೂಲಕ್ಕೆ ಪೂರಕವಾಗಿ ರಾಜ್ಯದ ಸಂಚಿತ ನಿಧಿಯನ್ನು ವೃದ್ಧಿಸುವ ಕ್ರಮಗಳನ್ನು ಶಿಫಾರಸು ಮಾಡಲು ಸಂವಿಧಾನದ ಅನುಚ್ಛೇದ 280(3)(ಸಿ) ಕೇಂದ್ರ ಹಣಕಾಸು ಆಯೋಗಕ್ಕೆ ಅಧ್ಯಾದೇಶಿಸುತ್ತದೆ. 13ನೇ ಹಣಕಾಸು ಆಯೋಗ ಮತ್ತು 14ನೇ ಹಣಕಾಸು ಆಯೋಗಗಳು ನಗರ ಸ್ಥಳೀಯ ಸಂಸ್ಥೆಗಳಿಗೆ ಮೂಲ ಅನುದಾನ ಮತ್ತು ಕಾರ್ಯಕ್ಷಮತೆ ಅನುದಾನವನ್ನು ವಿಭಜನೀಯ ಮೊತ್ತದ ಖಾತೆಯ ಶೇಕಡಾವಾರು ಪ್ರಮಾಣದಲ್ಲಿ ಶಿಫಾರಸು ಮಾಡಿದೆ.

2014–15ರಿಂದ 2018–19ರ ಅವಧಿಯಲ್ಲಿ ಕೇಂದ್ರ ಹಣಕಾಸು ಆಯೋಗದ ಹಂಚಿಕೆ ಮತ್ತು ಬಿಡುಗಡೆಗಳನ್ನು **ನಕ್ಷೆ–5.1**ರಲ್ಲಿ ನೀಡಲಾಗಿದೆ.

**ನಕ್ಷೆ–5.1: ಕೇಂದ್ರ ಹಣಕಾಸು ಆಯೋಗದ ಅನುದಾನಗಳ ಹಂಚಿಕೆ ಮತ್ತು ಬಿಡುಗಡೆ**




ಆಧಾರ: *ಪೌರಾಡಳಿತ ನಿರ್ದೇಶನಾಲಯ/ನಗರಾಭಿವೃದ್ಧಿ ಇಲಾಖೆ ನೀಡಿದ ಮಾಹಿತಿ*

2014–15ರಲ್ಲಿ 13ನೇ ಹಣಕಾಸು ಆಯೋಗದ ಅಡಿಯಲ್ಲಿ ಮೂಲ ಅನುದಾನ ಮತ್ತು ಕಾರ್ಯಕ್ಷಮತೆ ಅನುದಾನಗಳನ್ನು ಕ್ರಮವಾಗಿ ₹19.64 ಕೋಟಿ ಮತ್ತು ₹13.30 ಕೋಟಿಯಷ್ಟು ಕಡಿಮೆ ಬಿಡುಗಡೆ ಮಾಡಲಾಗಿತ್ತು ಎಂಬುದನ್ನು ಮೇಲಿನಿಂದ ಗಮನಿಸಬಹುದು, ಇದಕ್ಕೆ ಕಾರಣಗಳನ್ನು ರಾಜ್ಯ ಸರ್ಕಾರವು ನೀಡಲಿಲ್ಲ. 14ನೇ ಹಣಕಾಸು ಆಯೋಗವು 2015–20ರ ಅವಧಿಗೆ ಮೂಲ ಅನುದಾನದಡಿ ಒಟ್ಟು ₹4,685.51 ಕೋಟಿಗಳನ್ನು ಮತ್ತು 2016–20ರ ಅವಧಿಗೆ ಕಾರ್ಯಕ್ಷಮತೆ ಅನುದಾನದಡಿ ₹1,171.38 ಕೋಟಿಗಳನ್ನು ಶಿಫಾರಸು ಮಾಡಿತ್ತು. 2015–16ರಿಂದ 2018–19ರ ಅವಧಿಯಲ್ಲಿ ರಾಜ್ಯವು ₹3,279.89

ಕೋಟಿಗಳ ಮೂಲ ಅನುದಾನದ ಹಂಚಿಕೆಯನ್ನು ಸಂಪೂರ್ಣವಾಗಿ ಸ್ವೀಕರಿಸಿತ್ತು. ಆದರೆ, 2017–18ನೇ ಸಾಲಿನಲ್ಲಿ ₹3.78 ಕೋಟಿಗಳ ಕಾರ್ಯಕ್ಷಮತೆ ಅನುದಾನದ ಕಡಿಮೆ ಸ್ವೀಕೃತಿ ಇದ್ದಿತು ಮತ್ತು 2018–19ನೇ ಸಾಲಿನ ₹295.20 ಕೋಟಿ ಮೊತ್ತದ ಪೂರ್ಣ ಹಂಚಿಕೆಯನ್ನು ಇನ್ನೂ ಸ್ವೀಕರಿಸಬೇಕಿತ್ತು. ಸ್ವೀಕರಿಸದಿರುವುದಕ್ಕೆ ಕಾರಣವನ್ನು ನೀಡಿರಲಿಲ್ಲ.

### 5.1.1.3 ನಿಯೋಜಿತ ರಾಜಸ್ವ

ಕೆಎಮ್‌ಸಿ ಕಾಯ್ದೆ, 1976ರ ಪರಿಚ್ಛೇದ 140ರ ಅನ್ವಯ, ದೊಡ್ಡ ನಗರ ಪ್ರದೇಶದ ಪರಿಮಿತಿಗಳೊಳಗೆ ಇರುವ ಎಲ್ಲಾ ಸ್ಥಿರ ಸ್ವತ್ತಿನ ಮಾರಾಟ, ದಾನ, ಅಡಮಾನ, ವಿನಿಮಯ ಅಥವಾ ಶಾಶ್ವತ ಗುತ್ತಿಗೆ, ಇವುಗಳ ಲಿಖಿತ ಪತ್ರಗಳ ಮೇಲೆ ಕರ್ನಾಟಕ ಮುದ್ರಾಂಕ ಕಾಯ್ದೆ, 1957ರ ಅನ್ವಯ ವಿಧಿಸಲಾದ ಸುಂಕದ ಶೇಕಡಾ ಎರಡರ ದರದಲ್ಲಿ ಸ್ಥಿರ ಸ್ವತ್ತುಗಳ ವರ್ಗಾವಣೆ ಮೇಲೆ ಶುಲ್ಕವನ್ನು ಅಧಿಭಾರದ ರೂಪದಲ್ಲಿ ವಿಧಿಸತಕ್ಕದ್ದು. ನಗರ ಪ್ರದೇಶದಲ್ಲಿರುವ ಭೂಮಿಗಳು ಹಾಗೂ ಇತರೆ ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ಸಂಗ್ರಹಿಸಲಾದ ಸಂಪೂರ್ಣ ಮೊತ್ತವನ್ನು ನೋಂದಣಿಗಳ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರು ರಾಜ್ಯದಲ್ಲಿರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಜನಸಂಖ್ಯೆಗೆ ಅನುಗುಣವಾಗಿ, ಸಂಗ್ರಹಣಾ ವೆಚ್ಚಗಳ ಕಡೆಗೆ ಶೇಕಡಾ 10ರಷ್ಟನ್ನು ಕಡಿದುಕೊಂಡು, ಬಿಡುಗಡೆ ಮಾಡಲಾಗುವುದು.

**ಕೋಷ್ಟಕ–5.4ರಲ್ಲಿ** ತೋರಿಸಿರುವಂತೆ 2014–15ರಿಂದ 2017–18ರ ಅವಧಿಯಲ್ಲಿ ಶುಲ್ಕದ ವರ್ಗಾವಣೆಯಲ್ಲಿ ವಿಳಂಬವಿದ್ದಿತು ಮತ್ತು 2018–19ನೇ ಸಾಲಿನ ಶುಲ್ಕವನ್ನು ಇನ್ನೂ ವರ್ಗಾಯಿಸಲಿಲ್ಲದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

**ಕೋಷ್ಟಕ–5.4: ನಗರ ಸ್ಥಳೀಯ ಸಂಸ್ಥೆಗಳಿಗೆ[13] ಶುಲ್ಕದ ವರ್ಗಾವಣೆಯನ್ನು ತೋರಿಸುವ ತ:ಖ್ತೆ**

| ವರ್ಷ | ವರ್ಗಾವಣೆಯ ದಿನಾಂಕ | ಮೊತ್ತ (₹ ಕೋಟಿಗಳಲ್ಲಿ) |
|---|---|---|
| 2014–15 | 21.12.2017 & 10.12.2018 | 11.54 |
| 2015–16 | 12.12.2017 & 26.12.2017 | 14.19 |
| 2016–17 | 15.02.2019 | 12.52 |
| 2017–18 | 15.02.2019 | 14.65 |
| 2018–19 | ಇನ್ನೂ ವರ್ಗಾವಣೆಯಾಗಬೇಕಿದೆ | |

ಆಧಾರ: ನೋಂದಣಿಗಳ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರು ನೀಡಿದ ಮಾಹಿತಿ

### 5.1.2 ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ಆದಾಯ

ನಗರ ಸ್ಥಳೀಯ ಸಂಸ್ಥೆಗಳು ಒಂದು ವಿಸ್ತೃತ ಸ್ವತಂತ್ರ ತೆರಿಗೆ ವ್ಯಾಪ್ತಿಯನ್ನು ಹೊಂದಿರುವುದಿಲ್ಲ. ನಿವೇಶನ ಮತ್ತು ಕಟ್ಟಡಗಳ ಮೇಲಿನ ಆಸ್ತಿ ತೆರಿಗೆಯು ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ಆದಾಯದ ಮೂಲಾಧಾರವಾಗಿದೆ. ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ತೆರಿಗೆಯೇತರ ಆದಾಯವು ನೀರಿನ ಶುಲ್ಕಗಳು, ವಾಣಿಜ್ಯ ಸಂಸ್ಥೆಗಳಿಂದ ಬಾಡಿಗೆ, ವ್ಯಾಪಾರ ಪರವಾನಗಿಗಳು, ಕಟ್ಟಡ ಪರವಾನಗಿ/ಮ್ಯುಟೇಶನ್‌ಗಳ ಅನುಮೋದನೆಗಾಗಿ ಶುಲ್ಕ ಇತ್ಯಾದಿಗಳನ್ನು ಒಳಗೊಂಡಿದೆ. ಆಸ್ತಿ ತೆರಿಗೆ ಮತ್ತು ಜಾಹೀರಾತು ತೆರಿಗೆಗಳಂತಹ ಕೆಲವು ತೆರಿಗೆಗಳನ್ನು ಸಂಗ್ರಹಿಸುವ ಅಧಿಕಾರವು ನಗರ ಸ್ಥಳೀಯ ಸಂಸ್ಥೆಗಳ ಬಳಿಯಿದ್ದರೆ, ದರಗಳು ಮತ್ತು ಪರಿಷ್ಕರಣೆಗೆ ಸಂಬಂಧಿಸಿದ ಅಧಿಕಾರಗಳು (ಜಾಹೀರಾತು ತೆರಿಗೆ), ಸಂಗ್ರಹಣೆಯ ವಿಧಾನ (ಆಸ್ತಿ ತೆರಿಗೆ), ಮೌಲ್ಯಮಾಪನ ವಿಧಾನ, ವಿನಾಯಿತಿಗಳು, ರಿಯಾಯಿತಿಗಳು (ಆಸ್ತಿ ತೆರಿಗೆ, ಜಾಹೀರಾತು ತೆರಿಗೆ)

[13] ಬಿಬಿಎಂಪಿ ಹೊರತುಪಡಿಸಿ.

ಇತ್ಯಾದಿಗಳು ರಾಜ್ಯ ಸರ್ಕಾರದ ವಶದಲ್ಲಿದ್ದವು ಎಂದು ರಾಜ್ಯದ ಕಾನೂನುಗಳು ತಿಳಿಯಪಡಿಸಿತು. ಆದುದರಿಂದ, ನಗರ ಸ್ಥಳೀಯ ಸಂಸ್ಥೆಗಳು ಸ್ವಂತ ಆದಾಯವನ್ನು ಕ್ರೋಢೀಕರಿಸುವಲ್ಲಿ ಸಂಪೂರ್ಣ ಸ್ವಾಯತ್ತೆಯನ್ನು ಹೊಂದಿರಲಿಲ್ಲ. 2014–15 ರಿಂದ 2018–19ರ ಅವಧಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಒಟ್ಟು ರಾಜಸ್ವಕ್ಕೆ ಸ್ವಂತ ಆದಾಯದ ಪಾಲು ಕೇವಲ ಶೇಕಡಾ 37ರಷ್ಟಿತ್ತು (**ಕೋಷ್ಟಕ–5.1**). ಪರೀಕ್ಷಾ–ತನಿಖೆ ನಡೆಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸ್ವಂತ ಆದಾಯವನ್ನು ಕ್ರೋಢೀಕರಿಸುವಲ್ಲಿನ ನಿರ್ಬಂಧಗಳು/ ಕೊರತೆಗಳನ್ನು ಕೆಳಗೆ ಚರ್ಚಿಸಲಾಗಿದೆ:

### 5.1.2.1 ಆಸ್ತಿ ತೆರಿಗೆ

ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರ ವ್ಯಾಪ್ತಿಯಡಿಯ ಎಲ್ಲಾ ಕಟ್ಟಡಗಳು ಅಥವಾ ಖಾಲಿ ಭೂಮಿಗಳು ಅಥವಾ ಎರಡಕ್ಕೂ ಆಸ್ತಿ ತೆರಿಗೆಯನ್ನು ವಿಧಿಸಲು ಕೆಎಮ್‌ಸಿ ಕಾಯ್ದೆಯ ಪರಿಚ್ಛೇದ 103/108ಎ ಮತ್ತು ಕೆಎಮ್ ಕಾಯ್ದೆಯ ಪರಿಚ್ಛೇದ 108ರ ಜೊತೆಗೆ ಪರಿಚ್ಛೇದ 94ರ ಅಡಿಯಲ್ಲಿ ಅಧಿಕಾರ ಹೊಂದಿದ್ದವು. ಆಸ್ತಿ ತೆರಿಗೆಯ ಮೌಲ್ಯಮಾಪನ ಮತ್ತು ಸಂಗ್ರಹಣೆಗಾಗಿ 2001–02ರಿಂದ ಸರ್ಕಾರವು ಆಸ್ತಿಗಳ ಮಾಲೀಕರಿಂದ ಸ್ವಯಂ–ನಿರ್ಧರಣಾ ವ್ಯವಸ್ಥೆಯನ್ನು ಪರಿಚಯಿಸಿತು. ಪೌರಾಡಳಿತ ನಿರ್ದೇಶನಾಲಯವು ಆನ್‌ಲೈನ್ ಆಸ್ತಿ ತೆರಿಗೆ ಕ್ಯಾಲ್ಕುಲೇಟರ್‌ನ್ನು ಅಭಿವೃದ್ಧಿಪಡಿಸಿತು ಮತ್ತು ಅದರ ಮೂಲಕ ಆಸ್ತಿ ಮಾಲೀಕರು ತಮ್ಮ ತೆರಿಗೆಗಳನ್ನು ನಿರ್ಧರಣೆ ಮಾಡಿ ಪಾವತಿಸಬಹುದಾಗಿತ್ತು.

ಆನ್‌ಲೈನ್ ಕ್ಯಾಲ್ಕುಲೇಟರ್‌ನಲ್ಲಿ, ಕೆಳಕಂಡಂತೆ, ಲೆಕ್ಕಪರಿಶೋಧನೆಯು ಕೆಲವು ದೋಷಗಳನ್ನು ಗಮನಿಸಿತು, ಅವುಗಳಿಂದ ನಗರ ಸ್ಥಳೀಯ ಸಂಸ್ಥೆಗಳ ಆಸ್ತಿ ತೆರಿಗೆಯ ವೃದ್ಧಿಯು ನಿರ್ಬಂಧಿತವಾಗಿತ್ತು.

- ಆಸ್ತಿ ತೆರಿಗೆ ಪಾವತಿಯ ವಿನಾಯಿತಿ ಪಡೆದ ಆಸ್ತಿಗಳಿಂದ ಸೇವಾ ಶುಲ್ಕವನ್ನು ಸಂಗ್ರಹಿಸಲು ಅವಕಾಶವಿಲ್ಲದಿರುವುದು;
- ಕಟ್ಟಡಗಳ ಮೇಲೆ ನಿರ್ಮಿಸಲಾದ ಜಾಹೀರಾತು ರಚನೆಗಳ ಮೇಲೆ ಆಸ್ತಿ ತೆರಿಗೆಯನ್ನು ಲೆಕ್ಕಹಾಕಲು ಅವಕಾಶವಿಲ್ಲದಿರುವುದು; ಮತ್ತು
- ಭೂಮಿಯು ಸ್ವಯಂ ಬಳಕೆಗಿದೆಯೇ ಅಥವಾ ಬಾಡಿಗೆಗೆ ನೀಡಲಾಗಿದೆಯೇ ಮತ್ತು ವಾಣಿಜ್ಯ ಉದ್ದೇಶಗಳಿಗಾಗಿ ಬಳಸಲಾಗುತ್ತಿದೆಯೇ (ಉದಾಹರಣೆಗೆ ಖಾಲಿ ಇರುವ ಭೂಮಿಯನ್ನು ಸಸಿತೋಟಗಳನ್ನು ಅಭಿವೃದ್ಧಿಪಡಿಸಲು ಬಳಸಲಾಗುತ್ತಿತ್ತು) ಇತ್ಯಾದಿಗಳನ್ನು ಪರಿಗಣಿಸದೆಯೇ ಖಾಲಿ ಭೂಮಿಯ ಮೇಲಿನ ತೆರಿಗೆಯನ್ನು ಏಕರೂಪದ ದರದಲ್ಲಿ ಲೆಕ್ಕ ಹಾಕುವುದು.

ಇದಲ್ಲದೆ, 2013–14ರಿಂದ 2015–16ರ ಅವಧಿಯಲ್ಲಿ 'ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಸ್ತಿತೆರಿಗೆ ಸಂಗ್ರಹಣೆ' ಕುರಿತು ಅನುಪಾಲನಾ ಲೆಕ್ಕಪರಿಶೋಧನೆಯನ್ನು 24 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಏಪ್ರಿಲ್ ಮತ್ತು ಆಗಸ್ಟ್ 2016ರ ನಡುವೆ ನಡೆಸಲಾಗಿತ್ತು. ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳನ್ನು ಸ್ಥಳೀಯ ಸಂಸ್ಥೆಗಳ ಮೇಲಿನ ಮಾರ್ಚ್ 2016ಕ್ಕೆ ಕೊನೆಗೊಂಡ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯ (2017ನೇ ವರ್ಷದ ವರದಿ ಸಂಖ್ಯೆ 5) ಕಂಡಿಕೆ 6.1ರಲ್ಲಿ ಸೇರಿಸಲಾಗಿತ್ತು.

ಮೇಲಿನ ವರದಿಯಲ್ಲಿ ಸೂಚಿಸಲಾದ ಅಂಶಗಳಿಗೆ ಹೋಲುವ ಪ್ರಸ್ತುತ ಲೆಕ್ಕಪರಿಶೋಧನೆಯಲ್ಲಿ ಗಮನಿಸಿದ ಅಂಶಗಳು ಕೆಳಕಂಡಂತಿವೆ:

- ಪರೀಕ್ಷಾ–ತನಿಖೆ ನಡೆಸಿದ ಯಾವುದೇ ನಗರ ಸ್ಥಳೀಯ ಸಂಸ್ಥೆಗಳು ಆಸ್ತಿಗಳ ಸಮೀಕ್ಷೆಯನ್ನು ಕೈಗೊಂಡಿರಲಿಲ್ಲ. ಪೌರಾಡಳಿತ ನಿರ್ದೇಶನಾಲಯವು ಕೈಗೊಂಡ ಜಿಐಎಸ್ ಸಮೀಕ್ಷೆಯನ್ನು ಆಧರಿಸಿ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ದತ್ತಸಂಚಯವನ್ನು ಪೌರಾಡಳಿತ ನಿರ್ದೇಶನಾಲಯದ ಪೌರಾಡಳಿತ ಸುಧಾರಣಾ ಕೋಶವು ರಚಿಸಿತ್ತು. ಪರೀಕ್ಷಾ–ತನಿಖೆ ನಡೆಸಿದ ಅವಧಿಗೆ ಯಾವುದೇ ಪರೀಕ್ಷಾ–ತನಿಖೆ ನಡೆಸಿದ ನಗರ ಸ್ಥಳೀಯ ಸಂಸ್ಥೆಯೂ ಈ ಸಮೀಕ್ಷೆಯ ದತ್ತಾಂಶವನ್ನು ಬಳಸಿರಲಿಲ್ಲ.

- ಪ್ರಸ್ತುತ ಮಾರ್ಗಸೂಚಿ ಮೌಲ್ಯವನ್ನು ಅಳವಡಿಸಿಕೊಳ್ಳುವ ಬದಲು, 42 ನಗರ ಸ್ಥಳೀಯ ಸಂಸ್ಥೆಗಳು 2005–06ರ ಮಾರ್ಗದರ್ಶಿ ಮೌಲ್ಯವನ್ನು ಅಳವಡಿಸಿಕೊಂಡಿದ್ದರೆ ಮಂಗಳೂರು ಮಹಾನಗರ ಪಾಲಿಕೆಯು 2007–08ರ ಮಾರ್ಗಸೂಚಿ ಮೌಲ್ಯವನ್ನು ಮತ್ತು ಹೆಚ್‌ಡಿಎಮ್‌ಸಿ 2009–10ರ ಮಾರ್ಗಸೂಚಿ ಮೌಲ್ಯವನ್ನು ಅಳವಡಿಸಿಕೊಂಡಿದ್ದವು.
- ದೂರಸಂಪರ್ಕ ಟವರ್‌ಗಳ ಮೇಲೆ ಆಸ್ತಿ ತೆರಿಗೆಯನ್ನು ಸಂಗ್ರಹಿಸಿರಲಿಲ್ಲ.
- ಮಹಾನಗರ ಪಾಲಿಕೆಗಳು ಹಾಗೂ ಭದ್ರಾವತಿ ಮತ್ತು ಬೀದರ್ ನಗರಸಭೆಗಳನ್ನು ಹೊರತುಪಡಿಸಿ, ಪರೀಕ್ಷಾ–ತನಿಖೆ ನಡೆಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಸ್ತಿ ತೆರಿಗೆ ಪಾವತಿಯಿಂದ ವಿನಾಯಿತಿ ಪಡೆದಿದ್ದ ಆಸ್ತಿಗಳಿಂದ ಸೇವಾ ಶುಲ್ಕಗಳನ್ನು ಸಂಗ್ರಹಿಸಿರಲಿಲ್ಲ.
- ಮಂಗಳೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ ಜಾಹೀರಾತು ಜೊಡಣೆಗಳ ಮೇಲೆ ಆಸ್ತಿ ತೆರಿಗೆಯನ್ನು ಸಂಗ್ರಹಿಸಿರಲಿಲ್ಲ.
- ಪರೀಕ್ಷಾ–ತನಿಖೆ ನಡೆಸಿದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಸ್ತಿ ತೆರಿಗೆ ಸಂಗ್ರಹದಲ್ಲಿನ ಬಾಕಿ ಹಾಗೂ ಬೇಡಿಕೆ, ವಸೂಲಾತಿ ಮತ್ತು ಬಾಕಿ (ಡಿಸಿಬಿ) ತ:ಖ್ತೆಗಳ ಅಸಮರ್ಪಕ ನಿರ್ವಹಣೆ ಗಮನಕ್ಕೆ ಬಂದಿತು. ಪೌರಾಡಳಿತ ನಿರ್ದೇಶನಾಲಯವು ಒದಗಿಸಿದ ಮಾಹಿತಿಯ ಅನ್ವಯ, ಮಾರ್ಚ್ 2019ರಲ್ಲಿದ್ದಂತೆ 271 ನಗರ ಸ್ಥಳೀಯ ಸಂಸ್ಥೆಗಳಲ್ಲಿ ₹503.09 ಕೋಟಿ ಆಸ್ತಿ ತೆರಿಗೆ ಬಾಕಿ ಉಳಿದಿತ್ತು.

#### 5.1.2.2 ಜಾಹೀರಾತು ತೆರಿಗೆ

ಕೆಎಮ್‌ಸಿ ಅಧಿನಿಯಮದ ಪರಿಚ್ಛೇದ 103 ಮತ್ತು ಕೆಎಮ್ ಅಧಿನಿಯಮದ ಪರಿಚ್ಛೇದ 94 ನಗರ ಸ್ಥಳೀಯ ಸಂಸ್ಥೆಗಳು ಜಾಹೀರಾತಿನ ಮೇಲೆ ತೆರಿಗೆ ವಿಧಿಸಲು ಅಧಿಕಾರ ನೀಡುತ್ತದೆ. ಇದಲ್ಲದೆ, ಕೆಎಮ್‌ಸಿ ಕಾಯ್ದೆಯ ಪರಿಚ್ಛೇದ 134ರ ಅನ್ವಯ ವಿಧಿಸಬೇಕಾದ ತೆರಿಗೆ ದರಗಳು[14] ಸರ್ಕಾರವು ನಿಗದಿಪಡಿಸಿದ ಗರಿಷ್ಠ ಮತ್ತು ಕನಿಷ್ಠಕ್ಕೆ ಒಳಪಟ್ಟಿರುತ್ತದೆ. ಕೆಎಮ್ ಅಧಿನಿಯಮದ ಪರಿಚ್ಛೇದ 324(1)(ಎಲ್) ಜಾಹೀರಾತುಗಳ ನಿಯಂತ್ರಣ ಮತ್ತು ಅವುಗಳ ಪ್ರದರ್ಶನಕ್ಕಾಗಿ ಉಪ–ಕಾನೂನುಗಳನ್ನು ರಚಿಸಲು ನಿಗದಿಪಡಿಸುತ್ತದೆ. ಆದಾಗ್ಯೂ, ಪರಿಚ್ಛೇದ 324(5)ರ ಅನ್ವಯ ರಚಿಸಿದ ಉಪ–ಕಾನೂನುಗಳು, ಯಾವುದಾದರೂ ಇದ್ದರೆ, ಅದನ್ನು ರಾಜ್ಯ ಸರ್ಕಾರವು ಅನುಮೋದಿಸುವವರೆಗೆ, ಅವುಗಳ ಪರಿಣಾಮ ಇರುವುದಿಲ್ಲ. ಮೇಲಿನ ನಿಬಂಧನೆಗಳು ಜಾಹೀರಾತು ತೆರಿಗೆ ವಿಧಿಸುವಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಸ್ವಾಯತ್ತತೆಯನ್ನು ನಿರ್ಬಂಧಿಸುತ್ತವೆ.

ಪರೀಕ್ಷಾ–ತನಿಖೆ ನಡೆಸಿದ 44ರಲ್ಲಿ ಮೂರು[15] ನಗರ ಸ್ಥಳೀಯ ಸಂಸ್ಥೆಗಳು 2014–15ರಿಂದ 2018–19ರ ಅವಧಿಯಲ್ಲಿ ಜಾಹೀರಾತು ತೆರಿಗೆಯನ್ನು ಸಂಗ್ರಹಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆಲಂದ ಪುರಸಭೆಯು ಜಾಹೀರಾತು ತೆರಿಗೆಯನ್ನು 2018–19ರ ಅವಧಿಯಲ್ಲಿ ಮಾತ್ರ ಸಂಗ್ರಹಿಸಿತ್ತು. ಆದರೆ, ಪುರಸಭೆ ಮಾನ್ವಿಯನ್ನು ಹೊರತುಪಡಿಸಿ ಪರೀಕ್ಷಾ–ತನಿಖೆ ನಡೆಸಿದ ಯಾವುದೇ ನಗರ ಸ್ಥಳೀಯ ಸಂಸ್ಥೆಯೂ ಜಾಹೀರಾತು ತೆರಿಗೆಯನ್ನು ವಿಧಿಸಲು ಯಾವುದೇ ಸಮೀಕ್ಷೆಯನ್ನು ನಡೆಸಿರಲಿಲ್ಲ. ಸಮೀಕ್ಷೆಯ ಅನುಪಸ್ಥಿತಿಯಲ್ಲಿ, ಆದಾಯದ ಸಂಭಾವ್ಯ ಗಳಿಕೆಯನ್ನು ಲೆಕ್ಕಹಾಕಲು ಸಾಧ್ಯವಾಗಲಿಲ್ಲ.

---

[14] ಕೆಎಮ್‌ಸಿ ಅಧಿನಿಯಮ ಅನುಸೂಚಿ–VIII ವಿವಿಧ ರೀತಿಯ ಜಾಹೀರಾತುಗಳಿಗೆ ವಿಧಿಸಬೇಕಾದ ಗರಿಷ್ಠ ಮೊತ್ತವನ್ನು ನಿಗದಿಪಡಿಸುತ್ತದೆ.

[15] ನಗರಸಭೆ, ಶಹಾಬಾದ್; ಪುರಸಭೆ–ಶ್ರೀನಿವಾಸಪುರ; ಪಟ್ಟಣ ಪಂಚಾಯತಿ–ಕಮಲಾಪುರ


ನಗರಗಳಲ್ಲಿ ನಿಖರವಾದ ಸಂಖ್ಯೆಯ ಫಲಕಗಳ ಸ್ಪಷ್ಟ ದತ್ತಸಂಚಯ ಅಥವಾ ಬೇಡಿಕೆ, ವಸೂಲಾತಿ ಮತ್ತು ಬಾಕಿಯ ಸರಿಯಾದ ದಾಖಲೆಯಿರಲಿಲ್ಲ ಎಂದು 4ನೇ ರಾಜ್ಯ ಹಣಕಾಸು ಆಯೋಗವು ವರದಿ ಮಾಡಿತ್ತು. ತತ್ಪರಿಣಾಮವಾಗಿ, ಜಾಹೀರಾತು ತೆರಿಗೆಯಿಂದ ಗಳಿಸಬಹುದಾಗಿದ್ದ ಆದಾಯವನ್ನು ಇಲ್ಲಿಯವರೆಗೆ ಅಂದಾಜು ಮಾಡಲಾಗಿಲ್ಲ.

### 5.1.2.3 ನೀರಿನ ಶುಲ್ಕಗಳು

ಕೆಎಮ್‌ಸಿ ಅಧಿನಿಯಮದ ಪರಿಚ್ಛೇದ 144 ಮತ್ತು ಕೆಎಮ್ ಅಧಿನಿಯಮದ ಪರಿಚ್ಛೇದ 139ರ ಅನ್ವಯ, ಮಹಾನಗರ ಪಾಲಿಕೆಗಳು/ಪೌರಸಂಸ್ಥೆಗಳು ಕೆಎಮ್‌ಸಿ ಕಾಯ್ದೆಯ ಪರಿಚ್ಛೇದ 421 ಮತ್ತು ಕೆಎಮ್ ಅಧಿನಿಯಮದ ಪರಿಚ್ಛೇದ 323ರ ಅಡಿಯಲ್ಲಿ ಜಾರಿಯಲ್ಲಿರುವ ನಿಯಮಗಳು ನಿಗದಿಪಡಿಸಿರುವ ದರವನ್ನು ಮೀರದಂತೆ ನೀರಿನ ದರಗಳನ್ನು ನಿಗದಿಪಡಿಸಬಹುದು. ಈ ಅಧಿನಿಯಮಗಳ ಎಲ್ಲಾ ಅಥವಾ ಯಾವುದೇ ಉದ್ದೇಶಗಳನ್ನು ನಿರ್ವಹಿಸಲು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಲು 421 ಮತ್ತು 323ನೇ ಪರಿಚ್ಛೇದಗಳು ಸರ್ಕಾರಕ್ಕೆ ಅವಕಾಶವನ್ನು ನೀಡಿವೆ. ಇದು ನಗರ ಸ್ಥಳೀಯ ಸಂಸ್ಥೆಗಳ ಸ್ವಾಯತ್ತತೆಯನ್ನು ನಿರ್ಬಂಧಿಸಿತ್ತು. ಸಂಗ್ರಹಿಸಬೇಕಾದ ನೀರಿನ ಶುಲ್ಕದ ದರಗಳನ್ನು ನಿಗದಿಪಡಿಸಿ ರಾಜ್ಯ ಸರ್ಕಾರವು ಸೂಚನೆಗಳನ್ನು ನೀಡಿತು (ಜುಲೈ 2011). ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚದ ಏರಿಕೆಯನ್ನು ಸರಿದೂಗಿಸಲು ಮೂರು ವರ್ಷಗಳಿಗೊಮ್ಮೆ ದರಗಳನ್ನು ಪರಿಷ್ಕರಿಸಬೇಕಾಗಿತ್ತು. ಅದರಂತೆ, 2014–15 ಮತ್ತು 2017–18ರಲ್ಲಿ ದರಗಳನ್ನು ಪರಿಷ್ಕರಿಸಬೇಕಿದ್ದಿತು.

ಪರೀಕ್ಷಾ–ತನಿಖೆ ನಡೆಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೀರಿನ ದರಗಳ ಪರಿಷ್ಕರಣೆಯ ಸ್ಥಿತಿಯನ್ನು **ನಕ್ಷೆ–5.2**ರಲ್ಲಿ ತೋರಿಸಲಾಗಿದೆ.

**ನಕ್ಷೆ–5.2: ಪರೀಕ್ಷಾ–ತನಿಖೆ ನಡೆಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೀರಿನ ಶುಲ್ಕಗಳ ಪರಿಷ್ಕರಣಾ ಸ್ಥಿತಿ**




2014–15 ಮತ್ತು 2017–18ರ ಅವಧಿಯಲ್ಲಿ ಕೇವಲ ಮೂರು ನಗರ ಸ್ಥಳೀಯ ಸಂಸ್ಥೆಗಳು ದರಗಳನ್ನು ಪರಿಷ್ಕರಿಸಿದ್ದರೆ, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಮತ್ತು ಬೀದರ್ ನಗರಸಭೆಯು 2011ರಿಂದ ದರಗಳನ್ನು ಅಳವಡಿಸಿಕೊಂಡಿರಲಿಲ್ಲ ಅಥವಾ ನೀರಿನ ಶುಲ್ಕವನ್ನು ಪರಿಷ್ಕರಿಸಿರಲಿಲ್ಲ. ಇದಲ್ಲದೆ, ಮಾಡಿದ ಪರಿಷ್ಕರಣೆಗಳು ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚಗಳಿಗೆ ಅನುಗುಣವಾಗಿರಲಿಲ್ಲ. ಪರೀಕ್ಷಾ–ತನಿಖೆ ನಡೆಸಿದ 42[16] ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೀರಿನ ಶುಲ್ಕ ಸಂಗ್ರಹದೊಂದಿಗೆ ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚಗಳ ಹೋಲಿಕೆಯು 2014–15ರಿಂದ 2018–19ರ ಅವಧಿಯಲ್ಲಿ ಸರಾಸರಿ ಸಂಗ್ರಹಣೆಯು,

[16] ಬೀದರ್ ಮತ್ತು ಚನ್ನಪಟ್ಟಣ ನಗರಸಭೆಗಳು ವಿವರಗಳನ್ನು ಸಲ್ಲಿಸಿಲ್ಲ.

**ಕೋಷ್ಟಕ–5.5** ರಲ್ಲಿ ತೋರಿಸಿರುವಂತೆ, ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚಗಳಲ್ಲಿ ಕೇವಲ ಶೇಕಡಾ 52ರಷ್ಟು ಮಾತ್ರ ಇದ್ದಿತೆಂದು ತೋರಿಸಿತು.

**ಕೋಷ್ಟಕ–5.5: ಪರೀಕ್ಷಾ–ತನಿಖೆ ನಡೆಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೀರಿನ ಶುಲ್ಕಗಳ ಬೇಡಿಕೆ ಮತ್ತು ಸಂಗ್ರಹಣೆಯ ವಿವರಗಳು**

(₹ ಕೋಟಿಗಳಲ್ಲಿ)

| ವಿವರಗಳು | 2014–15 | 2015–16 | 2016–17 | 2017–18 | 2018–19 |
|---|---|---|---|---|---|
| ಪ್ರಾರಂಭಿಕ ಶಿಲ್ಕು | 98.75 | 120.38 | 139.40 | 152.02 | 176.40 |
| ಬೇಡಿಕೆ | 97.18 | 109.09 | 116.84 | 119.62 | 132.59 |
| ಒಟ್ಟು ಬೇಡಿಕೆ | 195.93 | 229.47 | 256.24 | 271.64 | 308.98 |
| ಒಟ್ಟು ಸಂಗ್ರಹಣೆ | 75.55 | 90.07 | 104.22 | 95.24 | 99.83 |
| ಮುಕ್ತಾಯದ ಶಿಲ್ಕು | 120.38 | 139.40 | 152.02 | 176.40 | 209.15 |
| ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚ | 125.87 | 168.49 | 245.99 | 188.35 | 188.59 |
| **ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚಕ್ಕೆ ಪ್ರತಿಯಾಗಿ ಸಂಗ್ರಹಣೆ ಶೇಕಡಾವಾರಿನಲ್ಲಿ** | **60** | **53** | **42** | **51** | **53** |

ಆಧಾರ: 42 ನಗರ ಸ್ಥಳೀಯ ಸಂಸ್ಥೆಗಳು ಸಲ್ಲಿಸಿದ ಮಾಹಿತಿ

ಇದಲ್ಲದೆ, ಸಂಗ್ರಹಿಸಬೇಕಾದ ನೀರಿನ ಶುಲ್ಕದ ಬಾಕಿಯು 2013–14ರ ₹98.75 ಕೋಟಿಯಿಂದ 2018–19ರಲ್ಲಿ ₹209.15 ಕೋಟಿಗೆ ಏರಿತು. ಇದು, ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಸ್ವಂತ ಆದಾಯವನ್ನು ವೃದ್ಧಿಸಿಕೊಳ್ಳುವಲ್ಲಿನ ನಿಷ್ಪರಿಣಾಮತೆಯನ್ನು ಸೂಚಿಸಿತು.

### 5.1.2.4 ಘನ ತ್ಯಾಜ್ಯ ನಿರ್ವಹಣೆ ಉಪಕರ

ಘನತ್ಯಾಜ್ಯದ ಸಂಗ್ರಹಣೆ, ಸಾಗಣೆ ಮತ್ತು ವಿಲೇವಾರಿಯ ಉದ್ದೇಶಕ್ಕಾಗಿ ಕೆಎಮ್‌ಸಿ ಅಧಿನಿಯಮ, 1976ರ ಪರಿಚ್ಛೇದ 103ಬಿ ಘನತ್ಯಾಜ್ಯ ನಿರ್ವಹಣಾ ಉಪಕರವನ್ನು ವಿಧಿಸಲು ನಿಗದಿಪಡಿಸುತ್ತದೆ. ಕೆಎಮ್ ಅಧಿನಿಯಮ, 1964ರಲ್ಲಿ ಅಂತಹ ಯಾವುದೇ ನಿಬಂಧನೆಯಿಲ್ಲ. ಆದರೆ, ಕರ್ನಾಟಕ ಮುನಿಸಿಪಲ್ ಲೆಕ್ಕಪತ್ರ ಕೈಪಿಡಿಯಡಿಯ ಲೆಕ್ಕಪತ್ರದ ಅನ್ವಯ ಸರ್ಕಾರವು ವಿಷಯವಾಗಿ ಮತ್ತು ಪಟ್ಟಣವನ್ನು ಆರೋಗ್ಯಕರ/ ನೈರ್ಮಲ್ಯ ಸ್ಥಿತಿಯಲ್ಲಿ ಇಡಲು ಅಂದರೆ ಕಸಮುಕ್ತ ಪ್ರದೇಶವನ್ನಾಗಿ ನಿರ್ವಹಿಸಲು ರಾಜಸ್ವ ಆದಾಯದ ರೂಪದಲ್ಲಿ ಉಪಕರವೊಂದನ್ನು ವಿಧಿಸಿ ಸಂಗ್ರಹಿಸುವಂತೆ ಪೌರಸಂಸ್ಥೆಗಳಿಗೆ ನಿರ್ದೇಶನ ನೀಡಬಹುದು. ಅದರಂತೆ, ಘನತ್ಯಾಜ್ಯ ನಿರ್ವಹಣಾ ಉಪಕರವನ್ನು ಸಂಗ್ರಹಿಸುವಂತೆ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಪೌರಾಡಳಿತ ನಿರ್ದೇಶಕರು ಸೂಚನೆಗಳನ್ನು ಜಾರಿ ಮಾಡಿದರು (ಸೆಪ್ಟಂಬರ್ 2009). ಘನತ್ಯಾಜ್ಯ ನಿರ್ವಹಣಾ ಉಪಕರದ ಸಂಗ್ರಹಣೆಯನ್ನು ಹೆಚ್ಚಿನ ಸಾಮರ್ಥ್ಯದೊಂದಿಗೆ ವಸೂಲು ಮಾಡುವುದನ್ನು ಅನುಕೂಲಗೊಳಿಸಲು ಆ ಉಪಕರವನ್ನು ಆಸ್ತಿ ತೆರಿಗೆ ಸಲ್ಲಿಕೆ ಮೂಲಕ ಆಸ್ತಿ ತೆರಿಗೆ ಜೊತೆ ಸಂಗ್ರಹಿಸುವಂತೆ ಪೌರಾಡಳಿತ ನಿರ್ದೇಶಕರು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಸೂಚಿಸಿದರು.

ಸಾರ್ವಜನಿಕ ಪ್ರಾರ್ಥನಾ ಸ್ಥಳಗಳು, ಶಿಕ್ಷಣ ಸಂಸ್ಥೆಗಳು, ಸರ್ಕಾರಿ ಕಟ್ಟಡಗಳು ಮುಂತಾದ ಆಸ್ತಿ ತೆರಿಗೆ ಪಾವತಿಯಿಂದ ವಿನಾಯಿತಿ ಪಡೆದವರಿಂದ ಘನತ್ಯಾಜ್ಯ ನಿರ್ವಹಣೆ ಉಪಕರವನ್ನು ಸಂಗ್ರಹಿಸಲಾಗದ ಕಾರಣ ಮತ್ತು ಆಸ್ತಿ ತೆರಿಗೆಯನ್ನು ಪಾವತಿಸದಿರುವವರಿಂದ ವಸೂಲಿ ಮಾಡಲು ಸಾಧ್ಯವಾಗುವುದಿಲ್ಲವಾದ್ದರಿಂದ ಈ ನಿರ್ದೇಶನವು ದೋಷಪೂರಿತವಾಗಿತ್ತು.

### 5.1.2.5 ವಾಣಿಜ್ಯ ಸಂಸ್ಥೆಗಳಿಂದ ಬಾಡಿಗೆ

ಖಾಸಗಿ ಸಂಸ್ಥೆಗಳಿಗೆ ನೀಡಿರುವ ಕಟ್ಟಡಗಳಿಂದ ಬಾಡಿಗೆ ಸಂಗ್ರಹಿಸಲು ನಗರ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ನೀಡಲಾಯಿತು ಮತ್ತು ಬಾಡಿಗೆಯನ್ನು ನಿಯತಕಾಲಿಕವಾಗಿ ಪರಿಷ್ಕರಿಸಬೇಕಾಗಿತ್ತು. ಪರೀಕ್ಷಾ–ತನಿಖೆ ನಡೆಸಿದ 43[17] ನಗರ ಸ್ಥಳೀಯ ಸಂಸ್ಥೆಗಳಲ್ಲಿ 2019ರ ಮಾರ್ಚ್ ಅಂತ್ಯಕ್ಕೆ ₹21.39 ಕೋಟಿ ಬಾಡಿಗೆಯು ಬಾಕಿ ಇದ್ದಿತು ಎಂಬುದನ್ನು ದಾಖಲೆಗಳ ಪರಿಶೀಲನೆಯು ತೋರಿಸಿತು. ಸೂಕ್ತವಾದ ಡಿಸಿಬಿ ವಹಿಗಳ ಅನುಪಸ್ಥಿತಿಯಲ್ಲಿ ಬೇಡಿಕೆಯ ನಿಖರತೆ ಮತ್ತು ಸಂಗ್ರಹಿಸಿದ ಮೊತ್ತವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಬಾಡಿಗೆ ಪರಿಷ್ಕರಣೆ ಸೇರಿದಂತೆ ನಿಯಮಗಳು ಮತ್ತು ಷರತ್ತುಗಳನ್ನು ನಿಗದಿಪಡಿಸಲು ಬಾಡಿಗೆದಾರರೊಂದಿಗೆ ಒಪ್ಪಂದ ಮಾಡಿಕೊಳ್ಳಲು ಯಾವುದೇ ಪ್ರಮಾಣಿತ ಶಿಷ್ಟಾಚಾರಗಳಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪರೀಕ್ಷಾ–ತನಿಖೆ ನಡೆಸಿದ 44ರಲ್ಲಿ 22 ನಗರ ಸ್ಥಳೀಯ ಸಂಸ್ಥೆಗಳಲ್ಲಿ 10,311ರಲ್ಲಿ 5,544 ಪ್ರಕರಣಗಳಲ್ಲಿ ಒಪ್ಪಂದಗಳನ್ನು ನವೀಕರಿಸಿರಲಿಲ್ಲ. ಪರೀಕ್ಷಾ–ತನಿಖೆ ನಡೆಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಂದಾಯ ಅಧಿಕಾರಿಗಳು, ಸಹಾಯಕ ಕಂದಾಯ ಅಧಿಕಾರಿಗಳು ಮತ್ತು ಕಂದಾಯ ನಿರೀಕ್ಷಕರ ಪದವೃಂದದಲ್ಲಿ ಶೇಕಡಾ 51ರಷ್ಟು ಹುದ್ದೆಗಳು ಖಾಲಿ ಇರುವುದಕ್ಕೆ ಇದನ್ನು ಅಧ್ಯಾರೋಪಿಸಬಹುದು.

### 5.1.2.6 ವ್ಯಾಪಾರ ಪರವಾನಗಿ

ಪೌರಸಂಸ್ಥೆಯ ಸ್ಥಳಗಳಲ್ಲಿ ಯಾವುದೇ ವ್ಯಾಪಾರವನ್ನು ನಡೆಸಲು ಉದ್ದೇಶಿಸಿರುವ ಎಲ್ಲಾ ವ್ಯಾಪಾರ ಸಂಸ್ಥೆಗಳಿಂದ ನಗರ ಸ್ಥಳೀಯ ಸಂಸ್ಥೆಗಳು ವ್ಯಾಪಾರ ಪರವಾನಗಿ ಶುಲ್ಕವನ್ನು ಪಡೆಯಬೇಕು ಎಂದು ಕೆಎಮ್‌ಸಿ ಕಾಯ್ದೆಯ ಪರಿಚ್ಛೇದ 369 ಮತ್ತು ಕೆಎಮ್ ಕಾಯ್ದೆಯ ಪರಿಚ್ಛೇದ 256 (ಎ)–ಅನುಸೂಚಿ XIII ಭಾಗ–I ನಿಗದಿಪಡಿಸುತ್ತವೆ. ಕೆಎಮ್‌ಸಿ ಕಾಯ್ದೆಯು ಮಹಾನಗರ ಪಾಲಿಕೆಗಳಿಗೆ ಅಧಿಕಾರವನ್ನು ನೀಡಿದರೆ, ಕೆಎಮ್ ಕಾಯ್ದೆಯ ನಿಬಂಧನೆಗಳನ್ವಯ ಇತರ ವರ್ಗದ ನಗರ ಸ್ಥಳೀಯ ಸಂಸ್ಥೆಗಳು ಉಪ–ಕಾನೂನುಗಳನ್ನು ಸಿದ್ಧಪಡಿಸ ಬೇಕು ಮತ್ತು ಇವುಗಳು ಸರ್ಕಾರದಿಂದ ಅನುಮೋದನೆ ಪಡೆಯಬೇಕು.

ಪರೀಕ್ಷಾ–ತನಿಖೆ ನಡೆಸಿದ 42[18] ನಗರ ಸ್ಥಳೀಯ ಸಂಸ್ಥೆಗಳಲ್ಲಿ 2019ರ ಮಾರ್ಚ್ ಅಂತ್ಯದ ವೇಳೆಗೆ ₹12.01 ಕೋಟಿಗಳ ವ್ಯಾಪಾರ ಪರವಾನಗಿ ಶುಲ್ಕ ಸಂಗ್ರಹದಲ್ಲಿ ಬಾಕಿ ಇದ್ದಿತು ಎಂದು ದಾಖಲೆಗಳ ಪರಿಶೀಲನೆಯು ತೋರಿಸಿತು. ಊರ್ಜಿತ ಪರವಾನಗಿಗಳಿಲ್ಲದೆ ವ್ಯಾಪಾರ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿರುವುದನ್ನು ಇದು ಸೂಚಿಸುತ್ತದೆ. ವ್ಯಾಪಾರ ಪರವಾನಗಿಗಳ ನವೀಕರಣದ ಮೇಲ್ವಿಚಾರಣೆಗೆ ಯಾವುದೇ ಕಾರ್ಯವಿಧಾನಗಳು ಅಸ್ತಿತ್ವದಲ್ಲಿರಲಿಲ್ಲ ಮತ್ತು ಈ ಕಾರ್ಯವನ್ನು ನಿರ್ವಹಿಸಲು ಹೊಣೆಗಾರರಾಗಿದ್ದ ಹಿರಿಯ/ಕಿರಿಯ ಆರೋಗ್ಯ ನಿರೀಕ್ಷಕರ ಪದವೃಂದದಲ್ಲಿ ಶೇಕಡಾ 40ರಷ್ಟು ಹುದ್ದೆಗಳು ಖಾಲಿ ಇದ್ದವು. ವ್ಯಾಪಾರ ಪರವಾನಗಿಗಳನ್ನು ನವೀಕರಿಸುವಲ್ಲಿನ ವಿಫಲತೆಯು ಪರೀಕ್ಷಾ–ತನಿಖೆ ನಡೆಸಿದ ನಗರ ಸ್ಥಳೀಯ ಸಂಸ್ಥೆಗಳಿಗೆ ಅಂದಾಜು ₹3.85[19] ಕೋಟಿ ನಷ್ಟದಲ್ಲಿ ಪರಿಣಮಿಸಿತು.

---

[17] ಹರಪನಹಳ್ಳಿ ಪುರಸಭೆ ಮಾಹಿತಿಯನ್ನು ಒದಗಿಸಿಲ್ಲ.

[18] ಬೀದರ್ ಮತ್ತು ಕೊಳ್ಳೇಗಾಲ ನಗರಸಭೆಗಳು ಮಾಹಿತಿಯನ್ನು ನೀಡಲಿಲ್ಲ.

[19] ವ್ಯಾಪಾರ–ವಾರು ವಿವರಗಳ ಅನುಪಸ್ಥಿತಿಯಲ್ಲಿ, ನಗರ ಸ್ಥಳೀಯ ಸಂಸ್ಥೆಗಳ ಸಂಬಂಧವಾಗಿ ನಿರ್ಣಯಗಳನ್ನು ಅಂಗೀಕರಿಸಿದಲ್ಲಿ ಅಲ್ಲಿನ ದರಗಳಲ್ಲಿ ಕನಿಷ್ಠ ದರಗಳನ್ನು ಪರಿಗಣಿಸಲಾಗಿದೆ. ಯಾವುದೇ ನಿರ್ಣಯಗಳಿರದಿದ್ದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅದೇ ರೀತಿಯ ನಗರ ಸ್ಥಳೀಯ ಸಂಸ್ಥೆಯಲ್ಲಿದ್ದ ದರವನ್ನು ಅಳವಡಿಸಿಕೊಳ್ಳಲಾಗಿದೆ.

#### 5.1.2.7 ನಗರ ಸ್ಥಳೀಯ ಸಂಸ್ಥೆಗಳಿಂದ ವಿವಿಧ ಆದಾಯದ ಮೂಲಗಳ ಬಳಕೆ

ನಾಲ್ಕನೇ ರಾಜ್ಯ ಹಣಕಾಸು ಆಯೋಗವು ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಸ್ವಂತ ಸಂಪನ್ಮೂಲಗಳನ್ನು ವೃದ್ಧಿಸಿಕೊಳ್ಳಲು ವಿಧಿಸಬಹುದಾಗಿದ್ದ ತೆರಿಗೆ ಆದಾಯದ ಐದು ಮೂಲಗಳು ಮತ್ತು ಕಟ್ಟಡ ಯೋಜನೆ/ ಪರವಾನಗಿ ಅನುಮೋದನೆ ಶುಲ್ಕ, ವ್ಯಾಪಾರ ಪರವಾನಗಿ, ಅಂಗಡಿಗಳು/ಮಾರುಕಟ್ಟೆಗಳು/ವಾಣಿಜ್ಯ ಸಂಸ್ಥೆಗಳಿಂದ ಬಾಡಿಗೆ, ನೀರಿನ ಶುಲ್ಕಗಳು, ಪಾರ್ಕಿಂಗ್ ಶುಲ್ಕ, ಒಳಚರಂಡಿ ಶುಲ್ಕಗಳು, ಕೇಬಲ್ ಅಳವಡಿಕೆ ಶುಲ್ಕಗಳು ಮುಂತಾದ ತೆರಿಗೆ–ರಹಿತ ಆದಾಯದ 30 ಮೂಲಗಳನ್ನು ಗುರುತಿಸಿತ್ತು. ಗುರುತಿಸಲಾದ ಈ 35ರಲ್ಲಿ 30 ಮೂಲಗಳನ್ನು ನಗರ ಸ್ಥಳೀಯ ಸಂಸ್ಥೆಗಳು ಬಳಕೆ ಮಾಡುತ್ತಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಬಳಕೆ ಮಾಡದ ಐದು ಮೂಲಗಳ ವಿವರಗಳನ್ನು **ಕೋಷ್ಟಕ–5.6 ರಲ್ಲಿ** ನೀಡಲಾಗಿದೆ.

**ಕೋಷ್ಟಕ–5.6: ನಗರ ಸ್ಥಳೀಯ ಸಂಸ್ಥೆಗಳು ಬಳಕೆ ಮಾಡದ ಆದಾಯದ ಮೂಲಗಳನ್ನು ತೋರಿಸುವ ತ:ಖ್ತೆ**

| ಕ್ರಮ ಸಂಖ್ಯೆ | ಮೂಲ | ಶಾಸನಬದ್ಧ ನಿಬಂಧನೆ ಅಸ್ತಿತ್ವದಲ್ಲಿದೆಯೇ ಇಲ್ಲವೇ |
|---|---|---|
| 1 | ಪ್ರಾಣಿಗಳ ಮತ್ತು ನಾಯಿಗಳ ಮೇಲೆ ತೆರಿಗೆ ವಿಧಿಸುವಿಕೆ | ಇದೆ |
| 2 | ಇತರೆ ಶುಲ್ಕಗಳು ಮತ್ತು ಸುಂಕಗಳು | ಇದೆ |
| 3 | ಕೇಬಲ್ ಅಳವಡಿಕೆ ಶುಲ್ಕಗಳು | ನಗರ ಸ್ಥಳೀಯ ಸಂಸ್ಥೆಗಳಿಂದ ಉಪ ಕಾನೂನುಗಳನ್ನು ರಚಿಸಿ ಸರ್ಕಾರದ ಅನುಮೋದನೆ ಪಡೆಯುವ ಷರತ್ತಿನ ಮೇಲೆ ವಿಧಿಸಬಹುದಾಗಿದೆ. |
| 4 | ಹಸಿರು ಶುಲ್ಕಗಳು | ಇಲ್ಲ |
| 5 | ನಾಯಿ ಶುಲ್ಕ | ಇಲ್ಲ |

ಆಧಾರ: ಕೆಎಮ್ ಮತ್ತು ಕೆಎಮ್‌ಸಿ ಕಾಯ್ದೆಗಳು

ಕೇಬಲ್ ಅಳವಡಿಸುವ ಶುಲ್ಕಗಳು ಮತ್ತು ಹಸಿರು ಶುಲ್ಕಗಳು ಉತ್ತಮ ಆದಾಯದ ಮೂಲಗಳಾಗಿರುವುದರಿಂದ, ಈ ಶುಲ್ಕಗಳ ವಿಧಿಸುವಿಕೆಯನ್ನು ನಗರ ಸ್ಥಳೀಯ ಸಂಸ್ಥೆಗಳು ಖಚಿತಪಡಿಸಿಕೊಳ್ಳಬೇಕು.

ಆದಾಯ ಮೂಲಗಳ ವಿವರಗಳು, ವಿಧಿಸುವ ಸ್ಥಿತಿ ಮತ್ತು ಶಾಸನಬದ್ಧ ನಿಬಂಧನೆಗಳನ್ನು **ಅನುಬಂಧ–5.1** ರಲ್ಲಿ ನೀಡಲಾಗಿದೆ.

***ಶಿಫಾರಸು–8: ಆಸ್ತಿ ತೆರಿಗೆ, ಜಾಹೀರಾತು ತೆರಿಗೆ, ಘನತ್ಯಾಜ್ಯ ನಿರ್ವಹಣಾ ಉಪಕರ ಮುಂತಾದ ಮೂಲಗಳ ಮೂಲಕ ರಾಜಸ್ವವನ್ನು ಹೆಚ್ಚಿಸುವ ನಗರ ಸ್ಥಳೀಯ ಸಂಸ್ಥೆಗಳ ಸಾಮರ್ಥ್ಯದ ಮೇಲಿನ ಮಿತಿಗಳನ್ನು ತುರ್ತಾಗಿ ತೆಗೆದುಹಾಕಬೇಕಾಗಿದೆ.***

## 5.2 ನಿಧಿಯ/ವೆಚ್ಚದ ಅಗತ್ಯತೆಯ ಅಂದಾಜು

ಕೆಎಮ್ ಅಧಿನಿಯಮ, 1964 ಮತ್ತು ಕೆಎಮ್‌ಸಿ ಅಧಿನಿಯಮ, 1976ರ ನಿಭಂದನೆಗಳ[20] ಅನ್ವಯ ಪ್ರತಿಯೊಂದು ನಗರ ಸ್ಥಳೀಯ ಸಂಸ್ಥೆಯ ಆಯುಕ್ತರು/ಮುಖ್ಯ ಅಧಿಕಾರಿಗಳು ವಿವಿಧ ಮೂಲಗಳಿಂದ ಬರುವ ಹಣದ ಸ್ವೀಕೃತಿಗಳನ್ನು ಸೂಚಿಸುವ ಆಯವ್ಯಯ ಅಂದಾಜನ್ನು ತಯಾರಿಸುತ್ತಾರೆ ಮತ್ತು ನಗರ ಸ್ಥಳೀಯ ಸಂಸ್ಥೆಯು ಕೈಗೆತ್ತಿಕೊಳ್ಳುವ ವಿವಿಧ ಚಟುವಟಿಕೆಗಳಿಗೆ ಸಂಪನ್ಮೂಲಗಳನ್ನು ಹಂಚಿಕೆ ಮಾಡುತ್ತಾರೆ

[20] ಕೆಎಮ್ ಅಧಿನಿಯಮ, 1964ರ ಪರಿಚ್ಛೇದ 287 ಮತ್ತು ಕೆಎಮ್‌ಸಿ ಅಧಿನಿಯಮ, 1976ರ ಪರಿಚ್ಛೇದಗಳು 167ರಿಂದ 170.

ಹಾಗೂ ಅದನ್ನು ಅನುಮೋದನೆಗಾಗಿ ಆಡಳಿತ ಮಂಡಳಿಗೆ ಸಲ್ಲಿಸುತ್ತಾರೆ. ಆಡಳಿತ ಮಂಡಳಿಯಿಂದ ಅನುಮೋದನೆಯಾದ ನಂತರ ನಗರ ಸ್ಥಳೀಯ ಸಂಸ್ಥೆಗಳು ಆಯವ್ಯಯವನ್ನು ಪೌರಾಡಳಿತ ನಿರ್ದೇಶಕರಿಗೆ ಹಾಗೂ ಸರ್ಕಾರಕ್ಕೆ ಕಳುಹಿಸುತ್ತವೆ.

ಕೆಎಮ್ ಅಧಿನಿಯಮ, 1964 ಮತ್ತು ಕೆಎಮ್‌ಸಿ ಅಧಿನಿಯಮ, 1976 ಇವುಗಳು ಸಂವಿಧಾನದ ನಿಬಂಧನೆಗಳೊಂದಿಗೆ ಸುಸಂಗತವಾಗಿಲ್ಲ ಎಂದು ಇದು ತೋರಿಸುತ್ತದೆ ಏಕೆಂದರೆ ಸಾಂವಿಧಾನಿಕ ನಿಬಂಧನೆಗಳು ಆಯವ್ಯಯದ ಅನುಮೋದನೆಯ ಬಗ್ಗೆ ಏನೂ ಹೇಳುವುದಿಲ್ಲ ಆದರೆ ಎರಡೂ ಕಾಯ್ದೆಗಳು ಆಯವ್ಯಯವನ್ನು ಮಂಜೂರು/ಪರಿಷ್ಕರಿಸುವ ರಾಜ್ಯ ಸರ್ಕಾರದ ಪಾತ್ರವನ್ನು ನಿರ್ದಿಷ್ಟವಾಗಿ ತಿಳಿಸುತ್ತವೆ. ಆದರೆ, ನಾವು ಗಮನಿಸಿದಂತೆ ಸಾಮಾನ್ಯವಾಗಿ ಕರ್ನಾಟಕದಲ್ಲಿ ಆಡಳಿತ ಮಂಡಳಿಯ ಆಯವ್ಯಯವನ್ನು ಪೌರಾಡಳಿತ ನಿರ್ದೇಶಕರಿಗೆ ಮತ್ತು ರಾಜ್ಯ ಸರ್ಕಾರಕ್ಕೆ ಮಾಹಿತಿಗಾಗಿ ಕಳುಹಿಸಲಾಗುತ್ತದೆ.

### 5.2.1 ಅವಾಸ್ತವಿಕ ಆಯವ್ಯಯ ತಯಾರಿಕೆ

ವೆಚ್ಚದ ಅಂದಾಜು ಸ್ಥಳೀಯ ಸರ್ಕಾರವು ಒದಗಿಸಬೇಕಾದ ಸೇವೆಗಳು ಮತ್ತು ಈ ಸೇವೆಗಳನ್ನು ಒದಗಿಸುವುದಕ್ಕೆ ಬೇಕಾಗಿರುವ ವೆಚ್ಚಗಳ ಮೇಲೆ ಅವಲಂಬಿತವಾಗಿರುತ್ತದೆ. ಸೂಕ್ತ ಸೇವಾ ಮಟ್ಟವನ್ನು ಸಾಧಿಸಲು ಸ್ಥಳೀಯ ಸಂಸ್ಥೆಯು ಮಾಡಬೇಕಾದ ಬಂಡವಾಳ ಹಾಗೂ ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚ ಎರಡನ್ನೂ ಇದು ಒಳಗೊಂಡಿರಬೇಕು.

(i) 1960ರ ದಶಕದ ಆರಂಭದಲ್ಲಿ, ಜಕಾರಿಯಾ ಸಮಿತಿಯು ವಿವಿಧ ಹಂತದ ನಗರ ಸ್ಥಳೀಯ ಸಂಸ್ಥೆಗಳ ಸೇವೆಗಳ ಕನಿಷ್ಠ ಮಾನದಂಡಗಳನ್ನು ರೂಪಿಸಿತು ಮತ್ತು ಪ್ರತಿ ಪೌರ ಸೇವೆಗೆ ನಗರ ಸ್ಥಳೀಯ ಸಂಸ್ಥೆ ಒದಗಿಸಬೇಕಾದ ವಾರ್ಷಿಕ ಆವರ್ತಕ ಅವಶ್ಯಕತೆಗಳನ್ನು ಅಂದಾಜಿಸಿತು. ಒದಗಿಸಿದ ಸೇವೆಗಳಿಗೆ ಸಮರ್ಪಕ ತೆರಿಗೆ ಮತ್ತು ಶುಲ್ಕ ವಿಧಿಸಿದರೆ ವಿವಿಧ ಸೇವೆಗಳನ್ನು ನಿರ್ವಹಿಸಲು ಸಾಧ್ಯವಿದೆ ಎಂದೂ ಸಹ ಸಮಿತಿಯು ಅಭಿಪ್ರಾಯಪಟ್ಟಿತು.

ಪೌರ ಸೇವೆಗಳ ವಿತರಣೆ ಬೆಲೆಯೊಂದಿಗೆ ಕೂಡಿರುವುದರಿಂದ, ಸಮರ್ಥ ವಿತರಣೆಗೆ ಹಣದ ಅಗತ್ಯತೆ ಮತ್ತು ಮೂಲವನ್ನು ನಿರ್ಣಯಿಸಲು ಪ್ರತಿ ಪೌರ ಸೇವೆಯ ಬೆಲೆಯನ್ನು ವೈಜ್ಞಾನಿಕವಾಗಿ ಅಂದಾಜು ಮಾಡುವುದು ಅಗತ್ಯವಿದೆ. ಇದನ್ನು 3ನೇ ರಾಜ್ಯ ಹಣಕಾಸು ಆಯೋಗವೂ ಕೂಡ ಸೂಚಿಸಿತ್ತು. ಅಂತಹ ಪ್ರಯೋಗವನ್ನು ನಗರ ಸ್ಥಳೀಯ ಸಂಸ್ಥೆಗಳಾಗಲೀ ಅಥವಾ ರಾಜ್ಯ ಸರ್ಕಾರವಾಗಲೀ ಕೈಗೊಂಡಿರಲಿಲ್ಲ. ಹೀಗೆ, ನಗರ ಸ್ಥಳೀಯ ಸಂಸ್ಥೆಗಳ ಆಯವ್ಯಯ ತಯಾರಿಕೆಯು, ಕೆಳಗೆ ಚರ್ಚಿಸಿದಂತೆ. ವಿವಿಧ ಪೌರ ಸೇವೆಗಳನ್ನು ಒದಗಿಸಲು ಆಗುವ ಬೆಲೆಯ ವೈಜ್ಞಾನಿಕ ಮೌಲ್ಯಮಾಪನವನ್ನು ಆಧರಿಸಿರಲಿಲ್ಲ.

(ii) ಸರ್ಕಾರದಿಂದ ಹಣ ಹಂಚಿಕೆಯ ನಿರೀಕ್ಷೆಯ ಆಧಾರದ ಮೇಲೆ ಆಯವ್ಯಯವನ್ನು ತಯಾರಿಸಲಾಗುತ್ತಿದೆ. ನಗರ ಸ್ಥಳೀಯ ಸಂಸ್ಥೆಗಳಿಗೆ ಆಯವ್ಯಯ ಅನುಮೋದನೆಗಾಗಿ ನಿಗದಿತ ದಿನಾಂಕವು ಹಿಂದಿನ ಹಣಕಾಸು ವರ್ಷದ ಜನವರಿ 15 ಆಗಿದ್ದು ರಾಜ್ಯ ಆಯವ್ಯಯವನ್ನು ಸಾಮಾನ್ಯವಾಗಿ ಮಾರ್ಚ್ ತಿಂಗಳಲ್ಲಿ ವಿಧಾನ ಮಂಡಲದಲ್ಲಿ ಮಂಡಿಸುವುದರಿಂದ ಆಯವ್ಯಯ ತಯಾರಿಕೆಯ ಈ ವಿಧಾನವು ಮೂಲಭೂತ ನ್ಯೂನತೆಗೆ ಒಳಗಾಗಿತ್ತು. ನಗರ ಸ್ಥಳೀಯ ಸಂಸ್ಥೆಗಳು ವಿವಿಧ ಚಟುವಟಿಕೆಗಳಿಗೆ ಸಂಪನ್ಮೂಲಗಳನ್ನು ಹಂಚಿಕೆ ಮಾಡಿದ್ದವು ಮತ್ತು ಅದು ನಿರೀಕ್ಷಿತ ಹಣದ ಸ್ವೀಕೃತಿಯನ್ನು ಆಧರಿಸಿರುತ್ತದೆ ಹಾಗೂ ಹಣದ ವಾಸ್ತವಿಕ ಸ್ವೀಕೃತಿಯ ಮೇಲಲ್ಲ. ಹಣದ ಸ್ವೀಕೃತಿಯಲ್ಲಿನ ಯಾವುದೇ ಕೊರತೆಯು ಯೋಜಿತ ಚಟುವಟಿಕೆಗಳ ಕಾರ್ಯಗತಗೊಳಿಸುವಿಕೆ/ಅನುಷ್ಠಾನದ ಮೇಲೆ ಪ್ರಭಾವ ಬೀರುತ್ತದೆ.

ನಗರ ಸ್ಥಳೀಯ ಸಂಸ್ಥೆಗಳ ಪ್ರತಿಯೊಂದು ವರ್ಗದಲ್ಲಿ ಅವಾಸ್ತವಿಕ ಆಯವ್ಯ ತಯಾರಿಸಿರುವ ವಿವರಣಾತ್ಮಕ ಉದಾಹರಣೆಗಳನ್ನು **ಕೋಷ್ಟಕ–5.7**ರಲ್ಲಿ ನೀಡಲಾಗಿದೆ.

**ಕೋಷ್ಟಕ–5.7: ನಗರ ಸ್ಥಳೀಯ ಸಂಸ್ಥೆಗಳ ಪ್ರತಿಯೊಂದು ವರ್ಗದಲ್ಲಿಯೂ ಆಯವ್ಯಯದಲ್ಲಿನ ವ್ಯತ್ಯಾಸಗಳನ್ನು ತೋರಿಸುವ ತ:ಖ್ತೆ**

(₹ ಲಕ್ಷಗಳಲ್ಲಿ)

| ನಗರ ಸ್ಥಳೀಯ ಸಂಸ್ಥೆಯ ಹೆಸರು | ವರ್ಷ | ಸ್ವೀಕೃತಿಗಳು | | | ವೆಚ್ಚ | | |
|---|---|---|---|---|---|---|---|
| | | ಆಯವ್ಯಯ | ವಾಸ್ತವಿಕ | ಆಯವ್ಯಯಕ್ಕೆ ವಾಸ್ತವಿಕದ ಶೇಕಡಾವಾರು | ಆಯವ್ಯಯ | ವಾಸ್ತವಿಕ | ಆಯವ್ಯಯಕ್ಕೆ ವಾಸ್ತವಿಕದ ಶೇಕಡಾವಾರು |
| ಮಹಾನಗರ ಪಾಲಿಕೆ, ದಾವಣಗೆರೆ | 2014–15 | 57,703.78 | 17,450.73 | 30 | 57,821.59 | 17,758.88 | 31 |
| | 2015–16 | 65,033.58 | 19,950.16 | 31 | 64,936.77 | 17,246.72 | 27 |
| | 2016–17 | 77,767.01 | 25,328.99 | 33 | 78,175.13 | 23,057.35 | 29 |
| | 2017–18 | 86,393.97 | 24,824.81 | 29 | 86,680.87 | 25,840.45 | 30 |
| | 2018–19 | 30,510.95 | 23,294.36 | 76 | 35,055.00 | 23,906.63 | 68 |
| ನಗರಸಭೆ, ದೊಡ್ಡಬಳ್ಳಾಪುರ | 2014–15 | 8,884.64 | 2063.53 | 23 | 9,971.05 | 1,796.23 | 18 |
| | 2015–16 | 3,349.38 | 3104.63 | 93 | 4,198.27 | 2,359.01 | 56 |
| | 2016–17 | 3,430.47 | 2473.50 | 72 | 4,922.64 | 2,167.31 | 44 |
| | 2017–18 | 3,765.21 | 2385.09 | 63 | 5,353.88 | 2,683.85 | 50 |
| | 2018–19 | 3,944.29 | 3,070.68 | 78 | 5,326.74 | 3,465.39 | 65 |
| ಪುರಸಭೆ, ಲಕ್ಷ್ಮೇಶ್ವರ | 2014–15 | 1,933.78 | 863.94 | 45 | 2,026.00 | 592.30 | 29 |
| | 2015–16 | 1,579.21 | 950.85 | 60 | 2,095.65 | 1,070.77 | 51 |
| | 2016–17 | 1,147.79 | 1,123.41 | 98 | 1,790.18 | 1,101.54 | 62 |
| | 2017–18 | 2,191.24 | 1,266.26 | 58 | 2,286.93 | 1,353.04 | 59 |
| | 2018–19 | 2,291.99 | 895.28 | 39 | 2,537.60 | 797.66 | 31 |
| ಪಟ್ಟಣ ಪಂಚಾಯಿತಿ, ತೀರ್ಥಹಳ್ಳಿ | 2014–15 | 574.35 | 554.74 | 97 | 1,108.08 | 437.83 | 40 |
| | 2015–16 | 806.77 | 548.29 | 68 | 1,093.04 | 404.53 | 37 |
| | 2016–17 | 794.14 | 673.68 | 85 | 1,410.24 | 488.65 | 35 |
| | 2017–18 | 1,058.50 | 730.26 | 69 | 1,891.20 | 964.03 | 51 |
| | 2018–19 | 926.83 | 689.83 | 74 | 2,083.45 | 498.90 | 24 |

*ಆಧಾರ: ನಗರ ಸ್ಥಳೀಯ ಸಂಸ್ಥೆಗಳ ವಾರ್ಷಿಕ ಲೆಕ್ಕಪತ್ರಗಳು*

ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ 2014–15ರಿಂದ 2018–19ರ ಅವಧಿಯಲ್ಲಿ ಆಯವ್ಯಯಕ್ಕೆ ಹೋಲಿಸಿದರೆ ವಾಸ್ತವಿಕ ಸ್ವೀಕೃತಿಗಳಲ್ಲಿನ ವ್ಯತ್ಯಾಸವು ಶೇಕಡಾ 29ರಿಂದ 76ರ ವ್ಯಾಪ್ತಿಯಲ್ಲಿದ್ದಿತು; ದೊಡ್ಡಬಳ್ಳಾಪುರ ನಗರಸಭೆಯಲ್ಲಿ ಶೇಕಡಾ 23ರಿಂದ 93ರಷ್ಟಿದ್ದಿತು; ಪುರಸಭೆ, ಲಕ್ಷ್ಮೇಶ್ವರದಲ್ಲಿ ಶೇಕಡಾ 39ರಿಂದ 98ರಷ್ಟಿದ್ದಿತು ಮತ್ತು ಪಟ್ಟಣ ಪಂಚಾಯಿತಿ, ತೀರ್ಥಹಳ್ಳಿಯಲ್ಲಿ ಶೇಕಡಾ 68ರಿಂದ 97ರಷ್ಟಿದ್ದಿತು. ವಾಸ್ತವಿಕ ಸ್ವೀಕೃತಿಗಳು ಶೇಕಡಾ 90ಕ್ಕಿಂತ ಅಧಿಕವಾಗಿರುವ ಒಂದು ವರ್ಷವನ್ನು ಹೊರತುಪಡಿಸಿ ಎಲ್ಲಾ ವರ್ಷಗಳಲ್ಲಿ ಸ್ವೀಕೃತಿಗಳನ್ನು ಹೆಚ್ಚಿಗೆ ಅಂದಾಜು ಮಾಡಲಾಗಿತ್ತು. ಮತ್ತೊಂದೆಡೆ ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ 2014–15ರಿಂದ 2017–18ರ ಅವಧಿಯಲ್ಲಿ ಸರಾಸರಿ ಶೇಕಡಾ 71ರಷ್ಟು ವೆಚ್ಚವನ್ನು; 2015–16ರಿಂದ 2017–18ರ ಅವಧಿಯಲ್ಲಿ ದೊಡ್ಡಬಳ್ಳಾಪುರ ನಗರಸಭೆಯಲ್ಲಿ ಶೇಕಡಾ 50ರಷ್ಟು ಹಾಗೂ 2014–15ರಿಂದ 2018–19ರ ಅವಧಿಯಲ್ಲಿ ಲಕ್ಷ್ಮೇಶ್ವರ ಪುರಸಭೆ ಮತ್ತು ತೀರ್ಥಹಳ್ಳಿ ಪಟ್ಟಣ ಪಂಚಾಯಿತಿಗಳಲ್ಲಿ ಕ್ರಮವಾಗಿ ಶೇಕಡಾ 46 ಮತ್ತು 37ರಷ್ಟು ವೆಚ್ಚವನ್ನು ಅಧಿಕ ಅಂದಾಜು ಮಾಡಲಾಗಿತ್ತು. ರಸ್ತೆಗಳು, ಕಲ್ಲುಹಾಸಿನ ಹಾದಿಗಳು, ಪಾದಚಾರಿ ರಸ್ತೆಗಳು ಮತ್ತು ರಸ್ತೆ ಬದಿಯ ಚರಂಡಿಗಳಂತಹ ಮೂಲಸೌಕರ್ಯಗಳ ಕಾರ್ಯಗತಗೊಳಿಸುವಿಕೆಯು ಬಾಧಿತವಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

***ಶಿಫಾರಸು–9: ಬಂಡವಾಳ ವೆಚ್ಚದ ಅಗತ್ಯತೆಗಳನ್ನು ಮತ್ತು ಶೇಕರಿಸಲು ನಿರೀಕ್ಷಿಸಲಾಗಿರುವ ನಿಧಿಗಳ ವಾಸ್ತವಿಕ ಪ್ರಕ್ಷೇಪಣೆಗಳನ್ನು ಗಣನೆಗೆ ತೆಗೆದುಕೊಂಡು ತಮ್ಮ ಆಯವ್ಯಯವನ್ನು ವೈಜ್ಞಾನಿಕ ರೀತಿಯಲ್ಲಿ ತಯಾರಿಸಲು ನಗರ ಸ್ಥಳೀಯ ಸಂಸ್ಥೆಗಳನ್ನು ಪ್ರೇರೇಪಿಸುವ ವಿಶೇಷ ಪ್ರಯತ್ನಗಳನ್ನು ಮಾಡಬೇಕಿದೆ.***

## 5.3 ನಗರ ಸ್ಥಳೀಯ ಸಂಸ್ಥೆಗಳ ವೆಚ್ಚ

ನಗರ ಸ್ಥಳೀಯ ಸಂಸ್ಥೆಗಳ ವೆಚ್ಚವನ್ನು ಕಾರ್ಯಕ್ರಮದ ವೆಚ್ಚಗಳು, ಕಾರ್ಯಾಚರಣೆ ಮತ್ತು ನಿರ್ವಹಣೆ, ಸಾಮಾನ್ಯ ವೆಚ್ಚಗಳು, ಮಾನವ ಸಂಪನ್ಮೂಲ ವೆಚ್ಚಗಳು ಹಾಗೂ ಬಡ್ಡಿ ಮತ್ತು ಹಣಕಾಸು ಶುಲ್ಕಗಳೆಂದು ಐದು ಪ್ರಮುಖ ವರ್ಗಗಳಾಗಿ ವಿಂಗಡಿಸಬಹುದು. 2014–15ರಿಂದ 2018–19ರ ಅವಧಿಯಲ್ಲಿ ರಾಜ್ಯದಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಮಾಡಿದ ವೆಚ್ಚದ ವಿವರಗಳನ್ನು **ಕೋಷ್ಟಕ–**5.8 ರಲ್ಲಿ ಪ್ರದರ್ಶಿಸಲಾಗಿದೆ.

**ಕೋಷ್ಟಕ–5.8: ರಾಜ್ಯದಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಂದ ಭರಿಸಿದ ವೆಚ್ಚದ ವಿವರಗಳು**

**(₹ ಕೋಟಿಗಳಲ್ಲಿ)**

| ವರ್ಷ | ಮಾನವ ಸಂಪನ್ಮೂಲ ವೆಚ್ಚಗಳು | ಸಾಮಾನ್ಯ ವೆಚ್ಚಗಳು | ಕಾರ್ಯಾಚರಣೆ ಮತ್ತು ನಿರ್ವಹಣೆ | ಬಡ್ಡಿ ಮತ್ತು ಹಣಕಾಸು ಶುಲ್ಕಗಳು | ಕಾರ್ಯಕ್ರಮ ವೆಚ್ಚಗಳು, ಅನುದಾನಗಳು | ಒಟ್ಟು ವೆಚ್ಚ |
|---|---|---|---|---|---|---|
| 2014–15 | 623.30 | 91.81 | 1,006.15 | 49.46 | 77.18 | 1,847.91 |
| 2015–16 | 649.90 | 102.71 | 1,355.85 | 23.71 | 69.51 | 2,201.68 |
| 2016–17 | 703.26 | 122.98 | 1,511.75 | 58.68 | 81.43 | 2,478.10 |
| 2017–18 | 766.27 | 161.48 | 1,894.55 | 68.08 | 166.49 | 3,056.88 |
| 2018–19 | 900.67 | 172.32 | 1,714.13 | 24.52 | 136.07 | 2,947.72 |
| **ಒಟ್ಟು** | **3,643.40** | **651.32** | **7,482.43** | **224.45** | **530.68** | **12,532.28** |

ಆಧಾರ: *271* ನಗರ ಸ್ಥಳೀಯ ಸಂಸ್ಥೆಗಳಿಗೆ ಪೌರಾಡಳಿತ ನಿರ್ದೇಶನಾಲಯ ಸಲ್ಲಿಸಿದ ಮಾಹಿತಿ


ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚಗಳು ಒಟ್ಟು ವೆಚ್ಚದ ಶೇಕಡಾ 60ರಷ್ಟಿದ್ದಿತು ನಂತರ ಶೇಕಡಾ 29 ರಷ್ಟಿದ್ದ ಮಾನವ ಸಂಪನ್ಮೂಲ ವೆಚ್ಚದ್ದಾಗಿತ್ತು. ಬಂಡವಾಳ ವೆಚ್ಚ ಅಂದರೆ, ಕಾರ್ಯಕ್ರಮ ವೆಚ್ಚಗಳು ಮತ್ತು ಅನುದಾನಗಳಿಂದ ನಗರ ಸ್ಥಳೀಯ ಸಂಸ್ಥೆಗಳು ಭರಿಸಿದ ವೆಚ್ಚಗಳು ಒಟ್ಟು ವೆಚ್ಚದ ಕೇವಲ ಶೇಕಡಾ 4ರಷ್ಟಿದ್ದಿತು[21].

### 5.3.1 ಸಂಪನ್ಮೂಲ–ವೆಚ್ಚದ ಅಂತರ

2014–15ರಿಂದ 2018–19ರ ಅವಧಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳು ರಾಜಸ್ವ ವೆಚ್ಚದ ಶೇಕಡಾ 56ರಷ್ಟು ಮಾತ್ರ ಸ್ವಂತ ಸಂಪನ್ಮೂಲಗಳನ್ನು ಉತ್ಪಾದಿಸಲು ಸಾಧ್ಯವಾಗಿತ್ತು. ಸ್ವಂತ ಆದಾಯಕ್ಕೆ ರಾಜಸ್ವ ವೆಚ್ಚದ ಹೋಲಿಕೆಯು **ನಕ್ಷೆ–5.3**ರಲ್ಲಿ ಪ್ರದರ್ಶಿಸಿರುವಂತೆ ದೊಡ್ಡ ಅಂತರವನ್ನು ತೋರಿಸಿತು ಮತ್ತು ಇದನ್ನು ನಗರ ಸ್ಥಳೀಯ ಸಂಸ್ಥೆಗಳು ಬಗೆಹರಿಸಬೇಕಾಗಿದೆ.

[21] ಇದು ಅಂಗಸಂಸ್ಥೆಗಳು ಭರಿಸಿದ ವೆಚ್ಚವನ್ನು ಒಳಗೊಂಡಿರುವುದಿಲ್ಲ..

**ನಕ್ಷೆ–5.3: ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಂಪನ್ಮೂಲ–ವೆಚ್ಚದ ಅಂತರ**




### *5.3.1.1 ನಗರ ಸ್ಥಳೀಯ ಸಂಸ್ಥೆಗಳ ಹಣಕಾಸು ದತ್ತಾಂಶದ ವಿಶ್ಲೇಷಣೆ*


ಪೌರಾಡಳಿತ ನಿರ್ದೇಶನಾಲಯದ ಪೌರಾಡಳಿತ ಸುಧಾರಣಾ ಕೋಶವು ನಗರ ಸ್ಥಳೀಯ ಸಂಸ್ಥೆವಾರು ರಾಜಸ್ವ ಮತ್ತು ವೆಚ್ಚದ ವಿವರಗಳನ್ನು 2014–15ರಿಂದ 2018–19ರ ಅವಧಿಗೆ 271 ನಗರ ಸ್ಥಳೀಯ ಸಂಸ್ಥೆಗಳಿಗೆ ಒದಗಿಸಿತು. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹಣಕಾಸಿನ ಸ್ವಾಯತ್ತತೆಯನ್ನು ಅಧ್ಯಯನ ಮಾಡಲು ಈ ದತ್ತಾಂಶವನ್ನು ವಿಶ್ಲೇಷಿಸಲಾಯಿತು. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹಣಕಾಸಿನ ಸ್ವಾಯತ್ತತೆಯನ್ನು ನಿರ್ಧರಿಸಲು ಈ ಕೆಳಗಿನ ನಾಲ್ಕು ಅನುಪಾತಗಳನ್ನು ಪರಿಗಣಿಸಲಾಯಿತು.

1. **ಸ್ಥಳೀಯ ಹಣಕಾಸು ಸ್ವಾಯತ್ತತೆ:** ಇದು ನಗರ ಸ್ಥಳೀಯ ಸಂಸ್ಥೆಯ ಒಟ್ಟು ರಾಜಸ್ವಕ್ಕೆ ಸ್ವಂತ ಆದಾಯದ ಪಾಲು.
2. **ಹಣಕಾಸು ವರ್ಗಾವಣೆಯ ಮೇಲಿನ ಸ್ಥಳೀಯ ಅವಲಂಬನೆ:** ಇದು ನಗರ ಸ್ಥಳೀಯ ಸಂಸ್ಥೆಯ ಒಟ್ಟು ಆರ್ಥಿಕ ರಾಜಸ್ವಕ್ಕೆ ಕೇಂದ್ರೀಯ ಹಣಕಾಸು ಆಯೋಗದ ಮತ್ತು ರಾಜ್ಯ ಹಣಕಾಸು ಆಯೋಗದ ಅನುದಾನಗಳ ಪಾಲು.
3. **ಸ್ವಂತ ರಾಜಸ್ವ ಸಂಪನ್ಮೂಲಗಳಿಂದ ರಾಜಸ್ವ ವೆಚ್ಚದ ವ್ಯಾಪ್ತಿ (ಸ್ವಾವಲಂಬನೆ):** ಇದು ಸ್ವಂತ ರಾಜಸ್ವ ಸಂಪನ್ಮೂಲಗಳಿಂದ ಭರಿಸಿದ ರಾಜಸ್ವ ವೆಚ್ಚಗಳ ಪಾಲು.
4. **ವೆಚ್ಚದ ಗುಣಮಟ್ಟ:** ಇದು ಒಟ್ಟು ರಾಜಸ್ವ ವೆಚ್ಚದಲ್ಲಿ ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚದ ಪಾಲು. ಈ ಅನುಪಾತವು ಹೆಚ್ಚಾಗಿದ್ದರೆ, ವೆಚ್ಚದ ಗುಣಮಟ್ಟವು ಉತ್ತಮವಾಗಿರುತ್ತದೆ ಎಂದು ಪರಿಗಣಿಸಬಹುದು.

ಸ್ಥಳೀಯ ಹಣಕಾಸಿನ ಸ್ವಾಯತ್ತತೆ ಮತ್ತು ಹಣಕಾಸು ವರ್ಗಾವಣೆಯ ಮೇಲಿನ ಸ್ಥಳೀಯ ಅವಲಂಬನೆಯು ಪರಸ್ಪರ ವಿಲೋಮ ಅನುಪಾತದಲ್ಲಿರುತ್ತವೆ. ಹಣಕಾಸಿನ ಸ್ವಾಯತ್ತತೆಯು ಅಧಿಕವಾಗಿದ್ದಷ್ಟೂ ಹಣಕಾಸಿನ ವರ್ಗಾವಣೆಯ ಮೇಲಿನ ಅವಲಂಬನೆ ಕಡಿಮೆಯಿರುತ್ತದೆ.

2018–19ರ ಸಾಲಿನಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಅನುಪಾತ–ವಾರು ಕಾರ್ಯನಿರ್ವಹಣೆಯನ್ನು **ನಕ್ಷೆ–5.4**ರಲ್ಲಿ ನೀಡಲಾಗಿದೆ.

**ನಕ್ಷೆ–5.4: 2018–19ರ ಸಾಲಿಗೆ ನಗರ ಸ್ಥಳೀಯ ಸಂಸ್ಥೆಗಳ ಅನುಪಾತ–ವಾರು ಕಾರ್ಯನಿರ್ವಹಣೆ**




75 ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಒಟ್ಟು ರಾಜಸ್ವದ ಶೇಕಡಾ 75ಕ್ಕಿಂತ ಹೆಚ್ಚು ಭಾಗ ಹಣಕಾಸಿನ ವರ್ಗಾವಣೆಯ ಮೇಲೆ ಅವಲಂಬಿತವಾಗಿದ್ದವು ಮತ್ತು ಮೂರು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸ್ವಂತ ರಾಜಸ್ವಕ್ಕೆ ಒಟ್ಟು ರಾಜಸ್ವದ ಅನುಪಾತವು ಶೇಕಡಾ 75ಕ್ಕಿಂತ ಹೆಚ್ಚಾಗಿದ್ದಿತು. ಪರೀಕ್ಷಾ–ತನಿಖೆ ನಡೆಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ, ಒಟ್ಟು ರಾಜಸ್ವದಲ್ಲಿ ಸ್ವಂತ ರಾಜಸ್ವದ ಪಾಲು ಶೇಕಡಾ 66ರಷ್ಟಿದ್ದ ಮಂಗಳೂರು ಮಹಾನಗರ ಪಾಲಿಕೆಯು ಹಣಕಾಸಿನ ವರ್ಗಾವಣೆಯ ಮೇಲೆ ಕಡಿಮೆ ಅವಲಂಬಿತವಾಗಿತ್ತು.


- ✓ 26 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸ್ವಂತ ರಾಜಸ್ವ ಮೂಲಗಳಿಂದ ಭರಿಸಿದ ರಾಜಸ್ವ ವೆಚ್ಚವು ಶೇಕಡಾ 75ಕ್ಕಿಂತ ಹೆಚ್ಚಾಗಿದ್ದಿತು, ಅದರಲ್ಲಿ 11 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯು ಶೇಕಡಾ 100 ಅಥವಾ ಅದಕ್ಕಿಂತ ಅಧಿಕವಾಗಿದ್ದಿತು. 28 ನಗರ ಸ್ಥಳೀಯ ಸಂಸ್ಥೆಗಳಲ್ಲಿ ವ್ಯಾಪ್ತಿ ಶೇಕಡಾ 25ಕ್ಕಿಂತ ಕಡಿಮೆ ಅಥವಾ ಸಮನಾಗಿತ್ತು. ಪರೀಕ್ಷಾ–ತನಿಖೆ ನಡೆಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಂದಾಪುರ ಪುರಸಭೆಯಲ್ಲಿ ಶೇಕಡಾ 102ರಷ್ಟಿದ್ದರೆ ಮಂಗಳೂರು ಮಹಾನಗರ ಪಾಲಿಕೆ, ರಾಣೆಬೆನ್ನೂರು ಪುರಸಭೆ ಮತ್ತು ತೀರ್ಥಹಳ್ಳಿ ಪಟ್ಟಣ ಪಂಚಾಯಿತಿಗಳಲ್ಲಿ ಶೇಕಡಾ 80ಕ್ಕಿಂತ ಹೆಚ್ಚಿನ ವ್ಯಾಪ್ತಿಯನ್ನು ಹೊಂದಿದ್ದವು ಮತ್ತು ಕಮಲಾಪುರದ ಪಟ್ಟಣ ಪಂಚಾಯಿತಿಯಲ್ಲಿ ವ್ಯಾಪ್ತಿಯು ಕೇವಲ ಶೇಕಡಾ 22ರಷ್ಟು ಮಾತ್ರ ಇದ್ದಿತು.
- ✓ 10 ನಗರ ಸ್ಥಳೀಯ ಸಂಸ್ಥೆಗಳಲ್ಲಿ ವೆಚ್ಚದ ಗುಣಮಟ್ಟವು ಹೆಚ್ಚಾಗಿದ್ದಿತು (ಶೇಕಡಾ 75 ಕ್ಕಿಂತ ಹೆಚ್ಚು) ಮತ್ತು 17 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಡಿಮೆಯಿದ್ದಿತು (ಶೇಕಡಾ 25ಕ್ಕಿಂತ ಕಡಿಮೆ ಅಥವಾ ಸಮ). ಪರೀಕ್ಷಾ–ತನಿಖೆ ನಡೆಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅದು ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಶೇಕಡಾ 78ರಷ್ಟಿತ್ತು ಹಾಗೂ ಶಹಾಬಾದ್ ನಗರಸಭೆ ಮತ್ತು ವಾಡಿ ಪುರಸಭೆಗಳಲ್ಲಿ ಶೇಕಡಾ 26ರಷ್ಟಿದ್ದಿತು.

ಹೀಗೆ, ಪರೀಕ್ಷಾ–ತನಿಖೆ ನಡೆಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಂಗಳೂರು ಮಹಾನಗರ ಪಾಲಿಕೆಯು ಒಟ್ಟಾರೆಯಾಗಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವುದನ್ನು ಗಮನಿಸಬಹುದು. ಇತರ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಕಾರ್ಯಕ್ಷಮತೆಯನ್ನು ಸುಧಾರಿಸಲು ಮಂಗಳೂರು ಮಹಾನಗರ ಪಾಲಿಕೆಯಿಂದ ಸುಳಿವುಗಳನ್ನು ತೆಗೆದುಕೊಳ್ಳುವ ಮತ್ತು ಕಲಿಯುವ ಸಾಧ್ಯತೆಯನ್ನು ಅನ್ವೇಷಿಸಬಹುದು.

### 5.3.2 ನಿಧಿಯ ಬಳಕೆಯಲ್ಲಿನ ವ್ಯಾಪ್ತಿ

2014–15ರಿಂದ 2018–19ರ ಅವಧಿಯ ಒಟ್ಟು ರಾಜಸ್ವದ ಜೊತೆ ಒಟ್ಟು ವೆಚ್ಚದ ಹೋಲಿಕೆಯು **ನಕ್ಷೆ–5.5** ರಲ್ಲಿ ತೋರಿಸಿರುವಂತೆ ಪ್ರತಿ ವರ್ಷ ಲಭ್ಯವಿರುವ ನಿಧಿಯ ಸರಾಸರಿ ಶೇಕಡಾ 69ರಷ್ಟು ಹಣವನ್ನು ನಗರ ಸ್ಥಳೀಯ ಸಂಸ್ಥೆಗಳು  ಬಳಸಿಕೊಳ್ಳಲು ಸಾಧ್ಯವಾಯಿತು ಎಂಬುದನ್ನು ತೋರಿಸಿತು.

**ನಕ್ಷೆ–5.5: ಹಣದ ಬಳಕೆಯಲ್ಲಿನ ವ್ಯಾಪ್ತಿ**




ನಿಧಿಗಳ ಬಳಕೆಯಲ್ಲಿನ ನಿರ್ಬಂಧಗಳು ಈ ಕೆಳಗಿನವುಗಳನ್ನು ಒಳಗೊಂಡಿರಬಹುದು:

- ✓ ಕೇಂದ್ರ ಹಣಕಾಸು ಆಯೋಗದ ಮಾರ್ಗಸೂಚಿಗಳು ನಿಧಿಯ ಬಳಕೆಗಾಗಿ ವ್ಯಾಪ್ತಿಯನ್ನು ನಿರ್ದಿಷ್ಟಪಡಿಸಿದರೆ, ಕೇಂದ್ರ ಹಣಕಾಸು ಆಯೋಗದ ಅನುದಾನಗಳ ಹಂಚಿಕೆ ಮತ್ತು ಬಳಕೆಯನ್ನು ನಿಯಂತ್ರಿಸುವ ರಾಜ್ಯ ಸರ್ಕಾರದ ಮಾರ್ಗಸೂಚಿಗಳು ನೀರು ಪೂರೈಕೆ (ಕನಿಷ್ಠ ಶೇಕಡಾ 15 ಮತ್ತು ಗರಿಷ್ಠ ಶೇಕಡಾ 30), ಒಳಚರಂಡಿ ವ್ಯವಸ್ಥೆ (ಕನಿಷ್ಠ ಶೇಕಡಾ 10 ಮತ್ತು ಗರಿಷ್ಠ ಶೇಕಡಾ 20), ರಸ್ತೆಗಳು (ಕನಿಷ್ಠ ಶೇಕಡಾ 10 ಮತ್ತು ಗರಿಷ್ಠ ಶೇಕಡಾ 15) ಮುಂತಾದ ವಿವಿಧ ಚಟುವಟಿಕೆಗಳಿಗೆ ಹಂಚಿಕೆ ಮತ್ತು ಬಳಸಬೇಕಾದ ಕನಿಷ್ಠ ಮತ್ತು ಗರಿಷ್ಠ ಶೇಕಡಾವಾರು ಅನುದಾನವನ್ನು ನಿರ್ದಿಷ್ಟಪಡಿಸಿದೆ. ಇದು ತಮ್ಮ ಅಗತ್ಯತೆಗೆ ತಕ್ಕಂತೆ ಹಣವನ್ನು ಬಳಸಿಕೊಳ್ಳುವ ನಗರ ಸ್ಥಳೀಯ ಸಂಸ್ಥೆಗಳ ಸ್ವಾಯತ್ತತೆಯನ್ನು ನಿರ್ಬಂಧಿಸುತ್ತದೆ.
- ✓ ಮುಂದಿನ **ಕಂಡಿಕೆ–5.5**ರಲ್ಲಿ ಚರ್ಚಿಸಿದಂತೆ ನಗರ ಸ್ಥಳೀಯ ಸಂಸ್ಥೆಗಳ ಹಣಕಾಸು ಮತ್ತು ಆಡಳಿತಾತ್ಮಕ ಅಧಿಕಾರಗಳ ಮೇಲಿನ ನಿರ್ಬಂಧಗಳು/ಮಿತಿಗಳು.
- ✓ **ಕಂಡಿಕೆ 6.2.1**ರಲ್ಲಿ ವಿವರಿಸಿರುವಂತೆ ವಿವಿಧ ಪದವೃಂದಗಳಲ್ಲಿ ಹೆಚ್ಚು ಸಂಖ್ಯೆಯ ಖಾಲಿ ಹುದ್ದೆಗಳು

## 5.4 ನಗರ ಸ್ಥಳೀಯ ಸಂಸ್ಥೆಗಳ ಹಣಕಾಸಿನ ಅಧಿಕಾರಗಳು

ಹಣಕಾಸಿನ ಮತ್ತು ಆಡಳಿತಾತ್ಮಕ ಅಧಿಕಾರಗಳ ವಿಕೇಂದ್ರೀಕರಣದ ಬೆಂಬಲದಿಂದ ಮಾತ್ರ ಹಣಕಾಸಿನ ಸ್ವಾಯತ್ತತೆ ಪೂರ್ಣಗೊಳ್ಳುತ್ತದೆ. ವಿಕೇಂದ್ರೀಕರಣವು ಈ ಕೆಳಗಿನವುಗಳಿಗೆ ಅವಕಾಶ ನೀಡುತ್ತದೆ:

- ✓ ಸಮರ್ಥ ಮತ್ತು ವಿಶ್ವಾಸಾರ್ಹ ಆಡಳಿತವನ್ನು ರಚಿಸುವುದು;
- ✓ ಸ್ಥಳೀಯ ಆಡಳಿತವನ್ನು ತೀವ್ರಗೊಳಿಸುವುದು ಮತ್ತು ಸುಧಾರಿಸುವುದು;
- ✓ ಹೊಣೆಗಾರಿಕೆ ಮತ್ತು ಸ್ಪಂದಿಸುವಿಕೆಯನ್ನು ವೃದ್ಧಿಸುತ್ತದೆ.
- ✓ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸಲು, ವಿಶೇಷವಾಗಿ ಸೇವಾ ಒದಗಿಸುವಿಕೆಗೆ ಸಂಬಂಧಿಸಿದಂತೆ, ಸ್ಥಳೀಯ ಜನರ ಸುಧಾರಿತ ಸಾಮರ್ಥ್ಯ; ಮತ್ತು
- ✓ ಹೆಚ್ಚಿನ ಪ್ರೇರಣೆ, ಮುಂತಾದವುಗಳು

### 5.4.1 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅಧಿಕಾರಗಳು

ಮೂಲಸೌಕರ್ಯ ಕಾಮಗಾರಿಗಳನ್ನು ಕೈಗೊಳ್ಳಲು ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಆಡಳಿತ, ತಾಂತ್ರಿಕ ಮತ್ತು ಟೆಂಡರ್ ಅನುಮೋದನೆ ಅಧಿಕಾರವನ್ನು ರಾಜ್ಯ ಸರ್ಕಾರವು ಪರಿಷ್ಕರಿಸಿತು (ನವೆಂಬರ್ 2016). ಮೇಲಿನ ಆದೇಶಗಳ ಅನ್ವಯ ಆಡಳಿತಾತ್ಮಕ ಅನುಮೋದನೆಯ ಅಧಿಕಾರವನ್ನು **ಕೋಷ್ಟಕ–5.9**ರಲ್ಲಿ ನೀಡಲಾಗಿದೆ.

**ಕೋಷ್ಟಕ–5.9: ನಗರ ಸ್ಥಳೀಯ ಸಂಸ್ಥೆಗಳ ಆಡಳಿತಾತ್ಮಕ ಅನುಮೋದನೆಗಳ ಅಧಿಕಾರವನ್ನು ತೋರಿಸುವ ತ:ಖ್ತೆ**

(₹ ಲಕ್ಷಗಳಲ್ಲಿ)

| ನಗರ ಸ್ಥಳೀಯ ಸಂಸ್ಥೆಯ ವರ್ಗ | ಆಯುಕ್ತರು/ ಮುಖ್ಯಾಧಿಕಾರಿಗಳು | ಸ್ಥಾಯಿ ಸಮಿತಿ | ಕೌನ್ಸಿಲ್ | ಜಿಲ್ಲಾಧಿಕಾರಿ | ಡಿಎಮ್‌ಎ | ಸರ್ಕಾರ |
|---|---|---|---|---|---|---|
| **ಮಹಾನಗರ ಪಾಲಿಕೆ** | ≤50 | >50 ≤ 100 | >100 ≤ 200 | >200 ≤ 500 | >500 ≤ 1,000 | ≥1,000 |
| **ನಗರಸಭೆ** | ≤15 | >15 ≤ 30 | >30 ≤ 100 | >100 ≤ 500 | | |
| **ಪುರಸಭೆ** | ≤5 | >5 ≤ 15 | >15 ≤ 30 | >30 ≤ 500 | | |
| **ಪಟ್ಟಣ ಪಂಚಾಯಿತಿ** | ≤2 | >2 ≤ 10 | >10 ≤ 15 | >15 ≤ 500 | | |

ಆಧಾರ*:* 11 ನವೆಂಬರ್ 2016ರ ಸರ್ಕಾರಿ ಆದೇಶ

ಇದಲ್ಲದೆ, ಮೇಲಿನ ಕೋಷ್ಟಕದಲ್ಲಿ ಸೂಚಿಸಲಾದ ಅಧಿಕಾರಿಗಳಿಗೆ ಶೇಕಡಾ 5ಕ್ಕಿಂತ ಕಡಿಮೆ ಅಥವಾ ಸಮನಾಗಿರುವ ಟೆಂಡರ್ ಪ್ರೀಮಿಯಂ ಒಳಗೊಂಡ ಟೆಂಡರ್‌ಗಳಿಗೆ ತಮ್ಮ ಆಡಳಿತಾತ್ಮಕ ಅಧಿಕಾರಗಳ ಅನ್ವಯ ಟೆಂಡರ್‌ಗಳನ್ನು ಅನುಮೋದಿಸುವ ಅಧಿಕಾರವಿದ್ದಿತು. ಶೇಕಡಾ 5 ಕ್ಕಿಂತ ಹೆಚ್ಚಿನ ಆದರೆ ಶೇಕಡಾ 10ಕ್ಕಿಂತ ಕಡಿಮೆ ಅಥವಾ ಸಮನಾಗಿರುವ ಟೆಂಡರ್ ಪ್ರೀಮಿಯಂಗೆ ಮತ್ತು ₹1,000 ಲಕ್ಷದವರೆಗಿನ ಟೆಂಡರ್‌ಗಳಿಗೆ ಅಧಿಕಾರವು ಡಿಎಮ್‌ಎ ಬಳಿ ಇದ್ದಿತು ಮತ್ತು ಶೇಕಡಾ 10ಕ್ಕಿಂತ ಹೆಚ್ಚಿನ ಟೆಂಡರ್ ಪ್ರೀಮಿಯಂಗಳಿಗೆ ಅಧಿಕಾರವು ಸರ್ಕಾರಕ್ಕೆ ಬಳಿಯಿದ್ದಿತು.

ಅಂದಾಜುಗಳಿಗೆ ತಾಂತ್ರಿಕ ಅನುಮೋದನೆ ನೀಡುವ ವಿಷಯದಲ್ಲಿ ಮಹಾನಗರ ಪಾಲಿಕೆಗಳ, ನಗರಸಭೆಗಳ, ಪುರಸಭೆಗಳ ಮತ್ತು ಪಟ್ಟಣ ಪಂಚಾಯಿತಿಗಳ ಇಂಜಿನಿಯರ್‌ಗಳು ಕ್ರಮವಾಗಿ ₹500 ಲಕ್ಷ, ₹50 ಲಕ್ಷ, ₹5 ಲಕ್ಷ ಮತ್ತು ₹5 ಲಕ್ಷದವರೆಗೆ ಅಧಿಕಾರಗಳನ್ನು ಹೊಂದಿದ್ದರು.

ಹೋಲಿಸಿದರೆ, ಆಂಧ್ರಪ್ರದೇಶ, ಬಿಹಾರ, ಗುಜರಾತ್, ಕೇರಳ, ಮಹಾರಾಷ್ಟ್ರ, ರಾಜಸ್ಥಾನ ಮುಂತಾದ ರಾಜ್ಯಗಳ ಪೌರಸಂಸ್ಥೆಗಳು ಸಂಪೂರ್ಣ ಆಡಳಿತಾತ್ಮಕ ಅಧಿಕಾರವನ್ನು ಹೊಂದಿದ್ದವು.

### 5.4.2 ಇತರೆ ವೆಚ್ಚಗಳಿಗೆ ಸಂಬಂಧಿಸಿದ ಅಧಿಕಾರಗಳು

ರಾಜ್ಯ ಸರ್ಕಾರವು ಕರ್ನಾಟಕ ಪುರಸಭೆಗಳ (ವೆಚ್ಚದ ಅಧಿಕಾರಗಳು) ನಿಯಮಗಳು, 1986ನ್ನು ತಿದ್ದುಪಡಿ ಮಾಡಿ (ಫೆಬ್ರವರಿ 2004) ಅದರಲ್ಲಿ ಪುರಸಭೆ ಮತ್ತು ನಗರಸಭೆಗಳಿಗೆ ವೆಚ್ಚದ ಅಧಿಕಾರವನ್ನು ನಿರ್ದಿಷ್ಟಪಡಿಸಿತು. ವೆಚ್ಚದ ಅಧಿಕಾರಗಳ ಪರಿಶೀಲನೆಯು ಪೌರಸಂಸ್ಥೆಗಳು, ಪೀಠೋಪಕರಣಗಳು, ಕಾರುಗಳು, ವ್ಯಾನ್‌ಗಳು, ಜೀಪ್‌ಗಳು, ರಸ್ತೆ ರೋಲರ್‌ಗಳು, ಟ್ರಾಕ್ಟರುಗಳಂತಹ ವಾಹನಗಳು ಅಥವಾ ಇತರ ವಾಹನಗಳು ಅಥವಾ ಯಾಂತ್ರಿಕ ಉಪಕರಣಗಳನ್ನು ಖರೀದಿಸಲು ಯಾವುದೇ ಅಧಿಕಾರವನ್ನು ಹೊಂದಿರಲಿಲ್ಲ ಎಂಬುದನ್ನು ತಿಳಿಯಪಡಿಸಿತು. ಈ ಅಧಿಕಾರಗಳು ಜಿಲ್ಲಾಧಿಕಾರಿ ಮತ್ತು ಡಿಎಮ್‌ಎ ಬಳಿ ಇದ್ದವು. ಪೌರಸಂಸ್ಥೆಗಳಿಗೆ ಕಾನೂನು ಶುಲ್ಕಗಳನ್ನು ಭರಿಸಲು ಮಾತ್ರ ಸಂಪೂರ್ಣ ಅಧಿಕಾರವಿತ್ತು. ವಿವಿಧ ವಸ್ತುಗಳಿಗೆ ವೆಚ್ಚ ಮಿತಿಗಳನ್ನು ನಿಗದಿಪಡಿಸಲಾಗಿತ್ತು, ಅವುಗಳಲ್ಲಿ ಕೆಲವನ್ನು **ಕೋಷ್ಟಕ–5.10ರಲ್ಲಿ**

ನೀಡಲಾಗಿದೆ. ಈ ಮಿತಿಗಳನ್ನು 16 ವರ್ಷಗಳಿಗೂ ಹೆಚ್ಚು ಕಾಲದಿಂದ ಪರಿಷ್ಕರಿಸಿರಲಿಲ್ಲ ಮತ್ತು ಹಣದುಬ್ಬರವನ್ನು ಪರಿಗಣಿಸಿದರೆ ಅವು ಅತ್ಯಲ್ಪವಾಗಿದ್ದವು.

**ಕೋಷ್ಟಕ–5.10: ನಗರ ಸ್ಥಳೀಯ ಸಂಸ್ಥೆಗಳ ವೆಚ್ಚದ ಮಿತಿಯನ್ನು ತೋರಿಸುವ ಕೋಷ್ಟಕ**

| ಕ್ರಮ ಸಂಖ್ಯೆ | ವೆಚ್ಚದ ಬಾಬ್ತು | ಪುರಸಭೆ (₹) | ನಗರಸಭೆ (₹) |
|---|---|---|---|
| 1 | ಸ್ವಾತಂತ್ರ ದಿನಾಚರಣೆ, ಗಣರಾಜ್ಯೋತ್ಸವ ಮುಂತಾದ ರಾಷ್ಟ್ರೀಯ ಆಚರಣೆಗಳು | ಪ್ರತಿಯೊಂದಕ್ಕೆ 5,000 | ಪ್ರತಿಯೊಂದಕ್ಕೆ 15,000 |
| 2 | ಕೌನ್ಸಿಲ್ ಮತ್ತು ಸಮಿತಿ ಸಭೆಗಳಲ್ಲಿ ಟೀ ಮತ್ತು ಲಘು ಉಪಹಾರ ವೆಚ್ಚಗಳು | ವಾರ್ಷಿಕ 18,000 | ವಾರ್ಷಿಕ 36,000 |
| 3 | ವಾಹನ ಮತ್ತು ಇತರ ಯಂತ್ರೋಪಕರಣಗಳ ಭಾರಿ ಮತ್ತು ಸಾಧಾರಣ ದುರಸ್ತಿ | ಪ್ರತಿಯೊಂದು ಪ್ರಕರಣಕ್ಕೆ 10,000 | ಪ್ರತಿಯೊಂದು ಪ್ರಕರಣಕ್ಕೆ 50,000 |
| 4 | ಲೇಖನಸಾಮಗ್ರಿಗಳ ಖರೀದಿ | ವಾರ್ಷಿಕ 50,000 | ವಾರ್ಷಿಕ 1,00,000 |
| 5 | ಸಾಂಕ್ರಾಮಿಕ ರೋಗಗಳ ತಡೆಗಟ್ಟುವಿಕೆ ಮತ್ತು ನಿಗ್ರಹ | ವಾರ್ಷಿಕ 50,000 | ವಾರ್ಷಿಕ 1,50,000 |
| 6 | ಆಕಸ್ಮಿಕ ಬೆಂಕಿ ಅಥವಾ ಪ್ರವಾಹ ಇತ್ಯಾದಿಗಳಿಂದ ಉಂಟಾಗುವ ತೊಂದರೆಗಳ ನಿವಾರಣೆ. | ಪ್ರತಿಯೊಂದು ಪ್ರಕರಣದಲ್ಲಿ 5,000 | ಪ್ರತಿಯೊಂದು ಪ್ರಕರಣದಲ್ಲಿ 20,000 |

ಆಧಾರ: 3 ಫೆಬ್ರವರಿ 2004ರ ಗೆಜೆಟ್ ಅಧಿಸೂಚನೆ

ಮೇಲಿನ ಎರಡು ಕಂಡಿಕೆಗಳಲ್ಲಿ ಚರ್ಚಿಸಿದಂತೆ ನಗರ ಸ್ಥಳೀಯ ಸಂಸ್ಥೆಗಳ ಆರ್ಥಿಕ ಅಧಿಕಾರಗಳ ಮೇಲಿನ ನಿರ್ಬಂಧಗಳು/ಮಿತಿಗಳು ಹೆಚ್ಚಿನ ವಿಕೇಂದ್ರೀಕರಣದತ್ತ ಸಾಗುವುದನ್ನು ನಿರ್ಬಂಧಿಸುತ್ತವೆ.

***ಶಿಫಾರಸು–10: ದಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಕಾಮಗಾರಿಗಳು ಮತ್ತು ಇತರ ವೆಚ್ಚಗಳಿಗೆ ಸಂಬಂಧಿಸಿದ ಅಧಿಕಾರಗಳ ನಿಯೋಜನೆಯನ್ನು ಪರಿಷ್ಕರಿಸಬೇಕಾಗಿದೆ.***

# 6 ಅಧ್ಯಾಯ VI
## ನಗರ ಸ್ಥಳೀಯ ಸಂಸ್ಥೆಗಳ ಮಾನವ ಸಂಪನ್ಮೂಲಗಳು

## 6.1 ಮಾನವಬಲದ ಮೇಲೆ ಸೀಮಿತ ಅಧಿಕಾರ

ಸಾಕಷ್ಟು ಮತ್ತು ಅರ್ಹತೆ ಹೊಂದಿರುವ ಮಾನವಬಲವು ನಗರ ಸ್ಥಳೀಯ ಸಂಸ್ಥೆಗಳ ಸಬಲೀಕರಣಕ್ಕೆ ಒಂದು ಅತ್ಯವಶ್ಯಕ ಅಗತ್ಯತೆಯಾಗಿದೆ. ನಗರ ಸ್ಥಳೀಯ ಸಂಸ್ಥೆಗಳು ನಿರ್ವಹಿಸುವ ಕಾರ್ಯಗಳ ವಿಶಾಲ ಚೌಕಟ್ಟನ್ನು **ಕೋಷ್ಟಕ–6.1**ರಲ್ಲಿ ನೀಡಲಾಗಿದೆ.

**ಕೋಷ್ಟಕ–6.1: ನಗರ ಸ್ಥಳೀಯ ಸಂಸ್ಥೆಗಳು ನಿರ್ವಹಿಸುವ ಕಾರ್ಯಗಳ ವಿಶಾಲ ಚೌಕಟ್ಟು**

| ಕ್ರಮ ಸಂಖ್ಯೆ | ವಿಭಾಗ | ಕಾರ್ಯಗಳು |
|---|---|---|
| 1. | ಆಡಳಿತ | ಕೌನ್ಸಿಲ್ ಮತ್ತು ಸಮಿತಿಗಳ ಸಭೆಗಳು ಸೇರಿದಂತೆ ಸಾಮಾನ್ಯ ಆಡಳಿತ |
| 2. | ಕಂದಾಯ | ವಿವಿಧ ತೆರಿಗೆಗಳು, ಬಾಡಿಗೆ, ಜಾಹೀರಾತುಗಳು ಮತ್ತು ಇತರ ಆಸ್ತಿ ಸಂಬಂಧಿತ ಚಟುವಟಿಕೆಗಳ ನಿರ್ಧರಣೆ ಮತ್ತು ಸಂಗ್ರಹಣೆ |
| 3. | ಲೆಕ್ಕಪತ್ರಗಳು | ಲೆಕ್ಕಪತ್ರಗಳ ತಯಾರಿಕೆ ಮತ್ತು ನಿರ್ವಹಣೆ, ಆಯವ್ಯಯ ತಯಾರಿಕೆ ಇತ್ಯಾದಿ. |
| 4. | ಸಾರ್ವಜನಿಕ ಆರೋಗ್ಯ | ನೈರ್ಮಲ್ಯ, ರಸ್ತೆ ಗುಡಿಸುವುದು, ಘನತ್ಯಾಜ್ಯ ನಿರ್ವಹಣೆ ಮತ್ತು ಇತರ ಸಾರ್ವಜನಿಕ ಆರೋಗ್ಯ ಸಂಬಂಧಿತ ಚಟುವಟಿಕೆಗಳು |
| 5. | ಇಂಜಿನಿಯರಿಂಗ್ | ರಸ್ತೆಗಳು, ಚರಂಡಿಗಳು, ಕಟ್ಟಡಗಳು, ಉದ್ಯಾನವನಗಳು, ಆಟದ ಮೈದಾನಗಳು, ನೀರು ಸರಬರಾಜು ಮತ್ತು ರಸ್ತೆ ದೀಪ ಇತ್ಯಾದಿಗಳ ನಿರ್ಮಾಣ/ ಕಾರ್ಯಾಚರಣೆ ಮತ್ತು ನಿರ್ವಹಣೆ |
| 6. | ನಗರ ಯೋಜನೆ | ನಗರ ಯೋಜನಾ ಚಟುವಟಿಕೆಗಳಾದ ಕಟ್ಟಡ ಪರವಾನಗಿಗಳ ನೀಡಿಕೆ, ಇತ್ಯಾದಿ. |
| 7. | ಕಲ್ಯಾಣ | ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳ ಅನುಷ್ಠಾನ |

ಮಾನವಬಲದ ನಿರ್ಧರಣೆಯು ನಗರ ಸ್ಥಳೀಯ ಸಂಸ್ಥೆಗಳು ಕೈಗೊಂಡ ಕಾರ್ಯಗಳನ್ನು ಆಧರಿಸಿರಬೇಕು ಮತ್ತು ಇವು ಬಹುಮಟ್ಟಿಗೆ ಸೇವಾ ಉದ್ದೇಶಿತ ಕಾರ್ಯಗಳಾಗಿರುವುದರಿಂದ ಸಮಂಜಸವಾದ ಅವಧಿಯೊಳಗೆ ಪೂರ್ಣಗೊಳಿಸಬೇಕಾಗಿರುತ್ತದೆ. ವ್ಯಾಪ್ತಿಗೊಳಪಟ್ಟಿರುವ ಭೌಗೋಳಿಕ ಪ್ರದೇಶ, ಜನಸಂಖ್ಯೆಯ ವ್ಯಾಪ್ತಿ ಮತ್ತು ವರ್ಗ, ಅಸ್ತಿತ್ವದಲ್ಲಿರುವ ಆಸ್ತಿಗಳ ಸಂಖ್ಯೆ ಮುಂತಾದ ವಿವಿಧ ಮಾನದಂಡಗಳನ್ನು ಪರಿಗಣಿಸಿ ನಗರ ಸ್ಥಳೀಯ ಸಂಸ್ಥೆಗಳು ಈ ನಿರ್ಧರಣೆಯನ್ನು ಉತ್ತಮವಾಗಿ ಮಾಡಬಹುದು. ನಗರ ಸ್ಥಳೀಯ ಸಂಸ್ಥೆಗಳಿಗೆ ಸಿಬ್ಬಂದಿ ಅಗತ್ಯತೆಯನ್ನು ನಿರ್ಣಯಿಸುವುದಕ್ಕಾಗಲೀ ಅಥವಾ ಅಗತ್ಯ ಸಿಬ್ಬಂದಿಯನ್ನು ನೇಮಿಸಿಕೊಳ್ಳಲಾಗಲೀ ಅಧಿಕಾರವಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇವು ರಾಜ್ಯ ಸರ್ಕಾರದ ಅಧಿಕಾರಗಳಾಗಿದ್ದವು. ಮುಂದೆ ಚರ್ಚಿಸಿರುವಂತೆ, ನಗರ ಸ್ಥಳೀಯ ಸಂಸ್ಥೆಗಳಿಂದ ವಾಸ್ತವಿಕ ಅಗತ್ಯತೆಯನ್ನು ಕೇಳದೇ ಜನಸಂಖ್ಯೆಯ ಆಧಾರದ ಮೇಲೆ ಸಿಬ್ಬಂದಿಗಳ ಅಗತ್ಯತೆಯನ್ನು ರಾಜ್ಯ ಸರ್ಕಾರವು ನಿರ್ಧರಿಸುತ್ತಿತ್ತು.

ಇದಲ್ಲದೆ, ಕೆಎಮ್‌ಸಿ ಅಧಿನಿಯಮದ ಪರಿಚ್ಛೇದ 91ಎ ಮತ್ತು ಕೆಎಮ್ ಅಧಿನಿಯಮದ ಪರಿಚ್ಛೇದ 320, ಮಹಾನಗರ ಪಾಲಿಕೆ/ಪೌರಸಂಸ್ಥೆಯ ಕೌನ್ಸಿಲ್‌ನ ಯಾವುದೇ ಅಧಿಕಾರಿ ಅಥವಾ ಸಿಬ್ಬಂದಿಯನ್ನು ಮತ್ತೊಂದು ಮಹಾನಗರ ಪಾಲಿಕೆ/ಪೌರಸಂಸ್ಥೆಯ ಕೌನ್ಸಿಲ್ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಯಾವುದೇ ಸರ್ಕಾರಿ ಇಲಾಖೆಯಲ್ಲಿ ಸೇವೆ ಸಲ್ಲಿಸುವುದಕ್ಕಾಗಿ ವರ್ಗಾಯಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತವೆ. ನಗರ ಸ್ಥಳೀಯ ಸಂಸ್ಥೆಗಳಿಗೆ ನಿಯೋಜಿಸಲಾದ ಯಾವುದೇ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಿರುವ ಸರ್ಕಾರಿ ಅಧಿಕಾರಿಗಳ ಮತ್ತು ನೌಕರರ ಸೇವೆಗಳನ್ನು ರಾಜ್ಯ ಸರ್ಕಾರವು ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಬಹುದು. ನಗರ ಸ್ಥಳೀಯ ಸಂಸ್ಥೆಯ ದಂಡ ವಿಧಿಸುವ ಯಾವುದೇ ಆದೇಶದ ವಿರುದ್ಧ ಅಥವಾ ಯಾವುದೇ ಅಧಿಕಾರಿ ಅಥವಾ ಉದ್ಯೋಗಿ ಮೇಲ್ಮನವಿ ಸಲ್ಲಿಸುವ ಅಧಿಕಾರವು ರಾಜ್ಯ ಸರ್ಕಾರದ ಬಳಿ ಇರುತ್ತದೆ.

ಹೀಗೆ, ಸಿಬ್ಬಂದಿಗಳ ಹಂಚಿಕೆಯು ನಿಷ್ಪರಿಣಾಮಕಾರಿಯಾಗಿತ್ತು ಮತ್ತು ಇದು ಈ ಮೊದಲೇ ಚರ್ಚಿಸಿದಂತೆ ಸ್ವಂತ ಆದಾಯದ ಸಂಗ್ರಹಣೆಗೆ, ಹಂಚಿಕೆಯಾದ ನಿಧಿಗಳ ಬಳಕೆಗೆ ಮತ್ತು ಪ್ರಕಾರ್ಯಗಳನ್ನು ಹಂಚಿಕೆ ಮಾಡಿರುವ ಮಟ್ಟಕ್ಕೆ ಅವುಗಳನ್ನು ಕಾರ್ಯಗತಗೊಳಿಸುವುದಕ್ಕೆ ಅಡಚಣೆಯಾಗಿತ್ತು.

### 6.1.1 ಸಿಬ್ಬಂದಿಯ ನೇಮಕಾತಿ

ನಗರ ಸ್ಥಳೀಯ ಸಂಸ್ಥೆಗಳನ್ನು ನಿಯಂತ್ರಿಸುವ ಕಾಯ್ದೆಗಳಿಗೆ ಅನುಗುಣವಾಗಿ ನಗರ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿ ಮತ್ತು ಅಧಿಕಾರಿಗಳ ವರ್ಗೀಕರಣ, ನೇಮಕಾತಿ ವಿಧಾನ, ಸೇವಾ ಷರತ್ತುಗಳು, ವೇತನ ಮತ್ತು ಭತ್ಯೆ, ಶಿಸ್ತು ಮತ್ತು ನಡವಳಿಕೆಯನ್ನು ರಾಜ್ಯ ಸರ್ಕಾರವು ನಿಯಂತ್ರಿಸುತ್ತದೆ. ಕರ್ನಾಟಕ ಪುರಸಭೆಗಳು (ಅಧಿಕಾರಿಗಳು ಮತ್ತು ನೌಕರರ ನೇಮಕಾತಿ) ನಿಯಮಗಳು, 2010 ಮತ್ತು ಕರ್ನಾಟಕ ಮಹಾನಗರ ಪಾಲಿಕೆಗಳು (ಅಧಿಕಾರಿಗಳು ಮತ್ತು ನೌಕರರ ಸಾಮಾನ್ಯ ನೇಮಕಾತಿ) ನಿಯಮಗಳು, 2010, **ಕೋಷ್ಟಕ–6.2**ರಲ್ಲಿ ಸೂಚಿಸಿರುವಂತೆ ವಿವಿಧ ವರ್ಗದ ಹುದ್ದೆಗಳಿಗೆ ನೇಮಕಾತಿ ಅಧಿಕಾರಿಗಳನ್ನು ಪಟ್ಟಿ ಮಾಡುತ್ತದೆ.


**ಕೋಷ್ಟಕ–6.2: ನೇಮಕಾತಿಗಾಗಿ ನೇಮಕಾತಿ ಪ್ರಾಧಿಕಾರಗಳನ್ನು ತೋರಿಸುವ ಕೋಷ್ಟಕ**

| ಹುದ್ದೆಯ ವರ್ಗ | ಪ್ರಾಧಿಕಾರ |
|---|---|
| ಗ್ರೂಪ್ ಎ | ರಾಜ್ಯ ಸರ್ಕಾರ |
| ಗ್ರೂಪ್ ಬಿ ಮತ್ತು ಸಿ | ಪೌರಾಡಳಿತ ನಿರ್ದೇಶಕರು (ಡಿಎಮ್‌ಎ) ಅಥವಾ ಸರ್ಕಾರದಿಂದ ಅಧಿಕಾರ ನೀಡಿಲ್ಪಟ್ಟ ಅಧಿಕಾರಿ |
| ಗ್ರೂಪ್ ಡಿ | ನಗರಸಭೆಗಳಿಗೆ, ಪುರಸಭೆಗಳಿಗೆ, ಪಟ್ಟಣ ಪಂಚಾಯತಿಗಳಿಗೆ ಜಿಲ್ಲಾಧಿಕಾರಿಗಳು ಮತ್ತು ಮಹಾನಗರ ಪಾಲಿಕೆಗಳಿಗೆ ಆಯುಕ್ತರು |

ಆಧಾರ: ಪೌರಾಡಳಿತ ನಿರ್ದೇಶನಾಲಯ ನೀಡಿದ ಮಾಹಿತಿ

ಗ್ರೂಪ್ ಎ, ಬಿ ಮತ್ತು ಸಿ ಹುದ್ದೆಗಳಿಗೆ ನೇಮಕಾತಿಯನ್ನು ಕರ್ನಾಟಕ ಸಾರ್ವಜನಿಕ ಸೇವಾ ಆಯೋಗ (ಕೆಪಿಎಸ್‌ಸಿ) ಮೂಲಕ ಮಾಡಲಾಗುತ್ತದೆ. ಕೆಪಿಎಸ್‌ಸಿ ಮೂಲಕ ಮಾಡುವ ನೇಮಕಾತಿಯ ವಿವಿಧ ಹಂತಗಳನ್ನು **ನಕ್ಷೆ–6.1**ರಲ್ಲಿ ನೀಡಲಾಗಿದೆ.

**ನಕ್ಷೆ 6.1: ಕೆಪಿಎಸ್‌ಸಿ ಮೂಲಕ ನೇಮಕಾತಿ ಪ್ರಕ್ರಿಯೆ**




2014–15ರಿಂದ 2018–19ರ ಅವಧಿಗೆ ಪೌರಾಡಳಿತ ನಿರ್ದೇಶನಾಲಯವು ಒದಗಿಸಿದ ಮಾಹಿತಿಯ ವಿಶ್ಲೇಷಣೆಯು ಕೆಳಗಿನವುಗಳನ್ನು ತಿಳಿಯಪಡಿಸಿತು:

- ವಿವಿಧ ಪದವೃಂದಗಳಿಗೆ, ಕೆಪಿಎಸ್‌ಸಿಗೆ ಪ್ರಸ್ತಾವನೆಗಳನ್ನು ಕಳುಹಿಸುವುದರಿಂದ ಅಂತಿಮ ನೇಮಕಾತಿಯವರೆಗೆ ತೆಗೆದುಕೊಂಡ ಒಟ್ಟು ಸಮಯವು 744ರಿಂದ 1,603 ದಿನಗಳ ವ್ಯಾಪ್ತಿಯಲ್ಲಿದ್ದಿತು.
- ನಗರಾಭಿವೃದ್ಧಿ ಇಲಾಖೆಯಿಂದ ಒಪ್ಪಿಗೆ ಪಡೆದ ನಂತರ ಪೌರಾಡಳಿತ ನಿರ್ದೇಶನಾಲಯದಿಂದ ಕೆಪಿಎಸ್‌ಸಿಗೆ ಪ್ರಸ್ತಾಪಗಳನ್ನು ಕಳುಹಿಸುವಲ್ಲಿ 3ರಿಂದ 425 ದಿನಗಳ ವ್ಯಾಪ್ತಿಯ ವಿಳಂಬವಿದ್ದಿತು.
- ಕೆಪಿಎಸ್‌ಸಿಯು ಅಧಿಸೂಚಿಸುವುದರಿಂದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವವರೆಗಿನ ಒಟ್ಟು ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದಕ್ಕಾಗಿ 400ರಿಂದ 1,215 ದಿನಗಳನ್ನು ತೆಗೆದುಕೊಂಡಿತ್ತು, ಮತ್ತು
- ಕೆಪಿಎಸ್‌ಸಿಯಿಂದ ಆಯ್ಕೆ ಪಟ್ಟಿಯನ್ನು ಪಡೆದ ನಂತರ ಪೌರಾಡಳಿತ ನಿರ್ದೇಶನಾಲಯದವರು ಸಿಬ್ಬಂದಿಯನ್ನು ನೇಮಕಾತಿ ಮಾಡಲು 162ರಿಂದ 608 ದಿನಗಳ ವಿಳಂಬ ಮಾಡಿದ್ದರು.

### 6.1.2 ಸಿಬ್ಬಂದಿಯ ಮೇಲೆ ಅಧಿಕಾರ

ನಗರ ಸ್ಥಳೀಯ ಸಂಸ್ಥೆಗಳ ನೌಕರರಿಗೆ ಸಂಬಂಧಿಸಿದಂತೆ, ನಿಯೋಜನೆಯ ಮೇಲಿರುವ ನೌಕರರನ್ನು ಹೊರತುಪಡಿಸಿ, ಪದೋನ್ನತಿ ನೀಡುವ ಅಧಿಕಾರ, ಶಿಸ್ತು ಕ್ರಮವನ್ನು ಪ್ರಾರಂಭಿಸುವುದು, ದಂಡ ವಿಧಿಸುವುದು ಇತ್ಯಾದಿಗಳನ್ನು ಸಹ ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಿರಲಿಲ್ಲ. ಕಾರ್ಯನಿರ್ವಹಿಸಲು ಅಗತ್ಯವಾದ ಮಾನವ ಸಂಪನ್ಮೂಲಗಳನ್ನು ನೇಮಿಸಿಕೊಳ್ಳಲು ನಗರ ಸ್ಥಳೀಯ ಸಂಸ್ಥೆಗಳು ವಿವೇಚನಾಧಿಕಾರವನ್ನು ಹೊಂದಿರಬೇಕು ಎಂದು ನಾಲ್ಕನೇ ರಾಜ್ಯ ಹಣಕಾಸು ಆಯೋಗವು ಶಿಫಾರಸು ಮಾಡಿತ್ತು. ಈ ನಿಟ್ಟಿನಲ್ಲಿ ಇನ್ನೂ ಕ್ರಮ ಕೈಗೊಂಡಿರಲಿಲ್ಲ. ಆಯುಕ್ತರು ಸೇರಿದಂತೆ ಎಲ್ಲ ಸಿಬ್ಬಂದಿಗಳನ್ನು ನೇಮಕ ಮಾಡುವ ಹಾಗೂ ಅವರನ್ನು ಹೊಣೆಗಾರರನ್ನಾಗಿ ಮಾಡುವ ಅಧಿಕಾರವನ್ನು ನಗರ ಸರ್ಕಾರ ಹೊಂದಿರಬೇಕು ಎಂದು ಎರಡನೇ ಆಡಳಿತಾತ್ಮಕ ಸುಧಾರಣೆಗಳ ಆಯೋಗ ಕೂಡ ಅಭಿಪ್ರಾಯಪಟ್ಟಿತ್ತು.


### 6.1.3 ಸಿಬ್ಬಂದಿಯ ಅಗತ್ಯತೆಯ ಉಚಿತವಲ್ಲದ ನಿರ್ಧರಣೆ

ಪೌರಸಂಸ್ಥೆಗಳಿಗೆ ಮತ್ತು ಮಹಾನಗರ ಪಾಲಿಕೆಗಳಿಗೆ ಪದವೃಂದ ಮತ್ತು ನೇಮಕಾತಿ ನಿಯಮಗಳನ್ನು (ಸಿ&ಆರ್ ನಿಯಮಗಳು) ರಾಜ್ಯ ಸರ್ಕಾರ ಕ್ರಮವಾಗಿ ಜನವರಿ 2011 ಮತ್ತು ಏಪ್ರಿಲ್ 2011ರಲ್ಲಿ

ಅಧಿಸೂಚಿಸಿತು. ಪ್ರತಿ ನಗರ ಸ್ಥಳೀಯ ಸಂಸ್ಥೆಗೆ ಮಂಜೂರಾದ ಸಿಬ್ಬಂದಿಗಳ ಸಂಖ್ಯೆಯನ್ನು ನಿರ್ಧರಿಸುವ ಆಧಾರವನ್ನು ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ. ಆದರೂ, ಸಿ&ಆರ್ ನಿಯಮಗಳ ಮೇಲ್ನೋಟದ ಪರಿಶೀಲನೆಯು, ಮಂಜೂರಾದ ಸಿಬ್ಬಂದಿಗಳ ಸಂಖ್ಯೆಯನ್ನು ನಿರ್ಧರಿಸಲು ನಗರ ಸ್ಥಳೀಯ ಸಂಸ್ಥೆಗಳ ಜನಸಂಖ್ಯೆಯನ್ನು ಮಾತ್ರ ಮಾನದಂಡವಾಗಿ ಪರಿಗಣಿಸಲಾಗಿದೆ ಹಾಗೂ ಭೌಗೋಳಿಕ ಪ್ರದೇಶದ ವ್ಯಾಪ್ತಿ, ಜನಸಂಖ್ಯೆ ಮತ್ತು ಜನಸಂಖ್ಯಾ ವರ್ಗದ ವ್ಯಾಪ್ತಿ, ಅಸ್ತಿತ್ವದಲ್ಲಿರುವ ಆಸ್ತಿಗಳ ಸಂಖ್ಯೆ ಮುಂತಾದ ಇತರ ಮಾನದಂಡಗಳನ್ನು ಪರಿಗಣಿಸಿರಲಿಲ್ಲ ಎಂದು ತೋರಿಸಿತು. 2011ರ ಜನಗಣತಿಯ ಪ್ರಕಾರ 23.58 ದಶಲಕ್ಷದಷ್ಟು ಇರುವ ಕರ್ನಾಟಕದ ನಗರ–ಜನಸಂಖ್ಯೆಯು 2019ರ ವೇಳೆಗೆ 29.62 ದಶಲಕ್ಷ ಎಂದು ಪ್ರಕ್ಷೇಪಿಸಲಾಗಿದೆ.

ಪರೀಕ್ಷಾ–ತನಿಖೆ ನಡೆಸಿದ 44 ನಗರ ಸ್ಥಳೀಯ ಸಂಸ್ಥೆಗಳಲ್ಲಿ, ನೀಲಿ ಮತ್ತು ಕೆಂಪು ಬಣ್ಣದಲ್ಲಿ ಸೂಚಿಸಲಾಗಿರುವ 10ನ್ನು ಹೊರತುಪಡಿಸಿ ಮಂಜೂರಾದ ಸಿಬ್ಬಂದಗಳ ಸಂಖ್ಯೆಯು, ಜನಸಂಖ್ಯೆಗೆ ಅನುಗುಣವಾಗಿರಲಿಲ್ಲ ಮತ್ತು ಪರಿಷ್ಕರಣೆಯ ಅಗತ್ಯತೆಯಿದ್ದಿತು ಎಂದು ವಿಶ್ಲೇಷಣೆಯು ತೋರಿಸಿತು. ಈ 10 ನಗರ ಸ್ಥಳೀಯ ಸಂಸ್ಥೆಗಳಲ್ಲಿ **ನಕ್ಷೆ–6.2**ರಲ್ಲಿ ತೋರಿಸಿರುವಂತೆ 2001 ಮತ್ತು 2011ರ ಜನಗಣತಿಯ ಅನ್ವಯ 1,000 ಜನಸಂಖ್ಯೆಗೆ ನೌಕರರ ಸಂಖ್ಯೆ ಹೆಚ್ಚು–ಕಡಿಮೆ ಒಂದೇ[22] ಆಗಿದ್ದಿತು.

**ನಕ್ಷೆ–6.2: 44 ಪರೀಕ್ಷಾ–ತನಿಖೆ ನಡೆಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ 2001 ಮತ್ತು 2011ರ ಜನಗಣತಿಯ ಅನ್ವಯ 1,000 ಜನಸಂಖ್ಯೆಗೆ ನೌಕರರು**




ಮಂಜೂರಾದ ಸಿಬ್ಬಂದಗಳ ಸಂಖ್ಯೆಯು 1,000 ಜನಸಂಖ್ಯೆಗೆ (2001) 2.24 ರಿಂದ 5.80 ನೌಕರರಿಂದ 1,000 ಜನಸಂಖ್ಯೆಗೆ (2011) 1.94 ರಿಂದ 5.38 ನೌಕರರ ವ್ಯಾಪ್ತಿಯಲ್ಲಿದ್ದಿತು. ವಿವರಗಳನ್ನು **ಅನುಬಂಧ–6.1**ರಲ್ಲಿ ನೀಡಲಾಗಿದೆ.

ಇದಲ್ಲದೆ, ಪ್ರಕಾರ್ಯವಾರು ಸಿಬ್ಬಂದಿಯ ಅಗತ್ಯತೆ ನಿಗದಿಪಡಿಸದಿರುವುದರಿಂದ ಸಿ&ಆರ್ ನಿಯಮಗಳು ದೋಷಪೂರಿತವಾಗಿದ್ದವು. ಪ್ರಕಾರ್ಯವಾರು ಸಿಬ್ಬಂದಿಯ ಅಗತ್ಯತೆ, ಒಂದು ವೇಳೆ ನಡೆಸಿದ್ದರೆ, ಪ್ರತಿಯೊಂದು ಹುದ್ದೆಯ ಪಾತ್ರ ಮತ್ತು ಜವಾಬ್ದಾರಿಗಳನ್ನು ಹಾಗೂ ಪ್ರತಿಯೊಂದು ಪಾತ್ರಕ್ಕೆ ಅಗತ್ಯವಿರುವ ಕೌಶಲ್ಯ ಮತ್ತು ಅರ್ಹತೆಯನ್ನು ನಿಗದಿಪಡಿಸುವ ವಿಷಯದಲ್ಲಿ ಹೆಚ್ಚಿನ ಪಾರದರ್ಶಕತೆಯನ್ನು ತರುತ್ತಿತ್ತು.

[22] 2001 ಮತ್ತು 2011ರ ಅನುಪಾತಗಳ ನಡುವಿನ 0.25ಕ್ಕಿಂತ ಕಡಿಮೆ ಇರುವ ವ್ಯತ್ಯಾಸವನ್ನು ಲೆಕ್ಕಪರಿಶೋಧನೆಯಿಂದ ಸ್ವೀಕಾರಾರ್ಹವೆಂದು ಪರಿಗಣಿಸಲಾಗಿದೆ.

ಇದು ಇಬ್ಬರು ವ್ಯಕ್ತಿಗಳು/ಹುದ್ದೆಗಳ ನಡುವಿನ ಯಾವುದೇ ಕಾರ್ಯಗಳ ವ್ಯಾಪಿಸುವಿಕೆಯನ್ನು ಸಹ ತಡೆಯುತ್ತದೆ. ಉದಾಹರಣೆಯೊಂದನ್ನು ನೀಡುವುದಾದರೆ ಪಟ್ಟಣ ಪಂಚಾಯತಿಗಳಲ್ಲಿ ಪರಿಸರ ಅಭಿಯಂತರ ಹುದ್ದೆಗಳ ಮಂಜೂರಾತಿ ಇರಲಿಲ್ಲ ಮತ್ತು ಹಾಲಿಯಿರುವ ಆರೋಗ್ಯ ನಿರೀಕ್ಷಕರು ಘನತ್ಯಾಜ್ಯ ನಿರ್ವಹಣೆಯ ಪ್ರಭಾರಿಯಾಗಿದ್ದರು.

## 6.2 ಸಿಬ್ಬಂದಿಯ ಪರ್ಯಾಪ್ತತೆ ಮತ್ತು ಕಾರ್ಯ ನಿರ್ವಹಣೆ

### 6.2.1 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಿಬ್ಬಂದಿಯ ಕೊರತೆ

ಹೆಚ್ಚಿನ ಹುದ್ದೆಗಳು ಖಾಲಿ ಉಳಿದಿರುವುದರಿಂದ ಕಾರ್ಯಗಳ ನಿರ್ವಹಣೆಯು ನಿಷ್ಪರಿಣಾಮಕಾರಿಯಾಗುತ್ತದೆ. ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿ ಸ್ಥಿತಿಯ ಪರಿಶೀಲನೆಯು, **ಕೋಷ್ಟಕ–6.3** ರಲ್ಲಿ ತೋರಿಸಿರುವಂತೆ, ವಿವಿಧ ವಿಭಾಗಗಳಲ್ಲಿ ಶೇಕಡಾ 20ರಿಂದ (ಗ್ರೂಪ್ ಡಿ) 55ರವರೆಗಿನ (ಗ್ರೂಪ್ ಸಿ) ಖಾಲಿ ಹುದ್ದೆಗಳನ್ನು ತಿಳಿಯಪಡಿಸಿತು.

**ಕೋಷ್ಟಕ–6.3: ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಿಬ್ಬಂದಿ ಸ್ಥಿತಿಯನ್ನು ತೋರಿಸುವ ತ:ಖ್ತೆ**

| ಪ್ರವರ್ಗ | ಮಂಜೂರಾದ ಬಲ | ಕಾರ್ಯ ನಿರ್ವಹಿಸುತ್ತಿರುವವರು | | | | ಖಾಲಿ ಹುದ್ದೆ | ಖಾಲಿ ಹುದ್ದೆಗಳ ಶೇಕಡಾವಾರು |
|---|---|---|---|---|---|---|---|
| | | ನೇಮಕಾತಿ | ನಿಯೋಜನೆ | ಹೊರಗುತ್ತಿಗೆ/ ದೈನಂದಿನ ಕೂಲಿ/ಇತರರು | ಒಟ್ಟು | | |
| ಗ್ರೂಪ್ ಎ | 670 | 206 | 160 | 10 | 376 | 294 | 44 |
| ಗ್ರೂಪ್ ಬಿ | 1,088 | 750 | 66 | 7 | 823 | 265 | 24 |
| ಗ್ರೂಪ್ ಸಿ | 17,149 | 5,414 | 1,027 | 1,312 | 7,753 | 9,396 | 55 |
| ಗ್ರೂಪ್ ಡಿ | 37,586 | 12,735 | 77 | 17,249 | 30,061 | 7,525 | 20 |
| **ಒಟ್ಟು** | **56,493** | **19,105** | **1,330** | **18,578** | **39,013** | **17,480** | **31** |

ಆಧಾರ: ಪೌರಾಡಳಿತ ನಿರ್ದೇಶನಾಲಯ ನೀಡಿದ ಮಾಹಿತಿ

ಪದವೃಂದವಾರು ವಿಶ್ಲೇಷಣೆಯು ಕೆಳಗಿನ ಅಂಶಗಳನ್ನು ತಿಳಿಯಪಡಿಸಿತು;

- ಮಹಾನಗರ ಪಾಲಿಕೆಗಳಲ್ಲಿ ಗ್ರೂಪ್ ಎ ನಿರ್ಣಾಯಕ ಹುದ್ದೆಗಳಲ್ಲಿ ಖಾಲಿ ಹುದ್ದೆಗಳು ಅಧಿಕವಾಗಿದ್ದು ಶೇಕಡಾ 92ರಷ್ಟು ತಾಂತ್ರಿಕ ಸಹಾಯಕರು (ಪರಿಸರ), ಶೇಕಡಾ 80ರಷ್ಟು ಉಪ ಆಯುಕ್ತರು (ಆಡಳಿತ), ಶೇಕಡಾ 30ರಷ್ಟು ಮುಖ್ಯ ಲೆಕ್ಕಪರಿಶೋಧನಾಧಿಕಾರಿ ಮತ್ತು ಶೇಕಡಾ 50ರಷ್ಟು ಲೆಕ್ಕಾಧಿಕಾರಿ ಹುದ್ದೆಗಳು ಖಾಲಿ ಇದ್ದವು. ಇದು ಘನ ತ್ಯಾಜ್ಯ ನಿರ್ವಹಣೆ, ಕಸಾಯಿಖಾನೆಗಳ ನಿಯಂತ್ರಣ ಮುಂತಾದ ಹಂಚಿಕೆಯಾಗಿದ್ದ ಪ್ರಕಾರ್ಯಗಳನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಅಡ್ಡಿ ಉಂಟು ಮಾಡಿದ್ದಲ್ಲದೆ ಆಂತರಿಕ ಲೆಕ್ಕಪರಿಶೋಧನೆ ಮತ್ತು ಸಾಕಷ್ಟು ಮೇಲ್ವಿಚಾರಣೆಯ ಅನುಪಸ್ಥಿತಿಯಲ್ಲಿ ಪರಿಣಮಿಸಿತು.
- ತಾಂತ್ರಿಕ ಹುದ್ದೆಗಳಾದ ಹಿರಿಯ/ಕಿರಿಯ ಆರೋಗ್ಯ ನಿರೀಕ್ಷಕರು ಮತ್ತು ಸಹಾಯಕ/ಕಿರಿಯ ಅಭಿಯಂತರುಗಳ ಖಾಲಿ ಹುದ್ದೆಗಳು ಶೇಕಡಾ 22ರಿಂದ 50ರ ವ್ಯಾಪ್ತಿಯಲ್ಲಿದ್ದು, ಇದು ಹಣದ ಕಡಿಮೆ ಬಳಕೆಯಲ್ಲಿ ಪರಿಣಮಿಸಿತಲ್ಲದೇ ಸಾರ್ವಜನಿಕ ಆರೋಗ್ಯ ಸೇವೆಗಳು ಮತ್ತು ಅಭಿವೃದ್ಧಿ ಕಾರ್ಯಗಳ ವಿತರಣೆಯನ್ನು ಬಾಧಿಸಿತು. ಖಾಲಿ ಹುದ್ದೆಗಳು ಮಹಾನಗರ ಪಾಲಿಕೆಗಳಲ್ಲಿ ಅಧಿಕವಾಗಿದ್ದವು.


- ಸಹಾಯಕ ಕಂದಾಯ ಅಧಿಕಾರಿ/ಕಂದಾಯ ನಿರೀಕ್ಷಕರ ಪದವೃಂದದಲ್ಲಿ ಶೇಕಡಾ 65ರಷ್ಟು ಹುದ್ದೆಗಳು ಖಾಲಿಯಿದ್ದು ಆದಾಯ/ಬಾಕಿ ಸಂಗ್ರಹದ ಮೇಲೆ ಪರಿಣಾಮ ಬೀರಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತತ್ಪರಿಣಾಮವಾಗಿ **ಕಂಡಿಕೆ 5.1.2ರಲ್ಲಿ** ಚರ್ಚಿಸಿದಂತೆ ಸ್ವಂತ ಆದಾಯವು ಕಡಿಮೆಯಾಗಿತ್ತು.
- ಮಹಾನಗರ ಪಾಲಿಕೆಗಳಲ್ಲಿ ಶೇಕಡಾ 72ರಷ್ಟು ಅಕೌಂಟೆಂಟ್ ಹುದ್ದೆಗಳು ಖಾಲಿಯಿದ್ದುದು ಸೂಕ್ತವಾದ ಲೆಕ್ಕಪತ್ರ ನಿರ್ವಹಣೆ ಮತ್ತು ಮೂಲ ದಾಖಲೆಗಳ ನಿರ್ವಹಣೆಯ ಮೇಲೆ ಪರಿಣಾಮ ಬೀರಿತು. ಇದಕ್ಕೆ ವ್ಯತಿರಿಕ್ತವಾಗಿ, ಇತರ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಶೇಕಡಾ 44ರಷ್ಟು ಅಧಿಕ ಸಂಖ್ಯೆಯ ಅಕೌಂಟೆಂಟ್‌ಗಳಿದ್ದರು. ಮಂಜೂರಾದ ಬಲಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಅಕೌಂಟೆಂಟ್‌ಗಳ ನಿಯೋಜನೆಯಿಂದ ಇದು ಸಂಭವಿಸಿತ್ತು. ಸಿ&ಆರ್ ನಿಯಮಗಳ ಅನ್ವಯ ಅಕೌಂಟೆಂಟ್ ಹುದ್ದೆಗೆ ನಿಯೋಜನೆ ಮಾಡಲು ಯಾವುದೇ ಅವಕಾಶವಿಲ್ಲದಿದ್ದರೂ, ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಿಯೋಜನೆಯ ಮೇಲೆ 201 ಅಕೌಂಟೆಂಟ್‌ಗಳಿದ್ದರು.
- ಪರೀಕ್ಷಾ–ತನಿಖೆ ನಡೆಸಿದ 40 ಸ್ಥಳೀಯ ನಗರ ಸಂಸ್ಥೆಗಳಲ್ಲಿ ಮಂಜೂರಾದ 234 ತೋಟಗಾರರ ಹುದ್ದೆಗಳಿಗೆ ಪ್ರತಿಯಾಗಿ ಕೇವಲ 128 (ಶೇಕಡಾ 55) ತೋಟಗಾರರು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದರು. ಪಟ್ಟಣ ಪಂಚಾಯತಿಗಳಾಗಿದ್ದ ಇತರ ನಾಲ್ಕು ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಅವುಗಳಲ್ಲಿ ಉದ್ಯಾನವನಗಳು ಅಸ್ತಿತ್ವದಲ್ಲಿದ್ದರೂ ತೋಟಗಾರರ ಮಂಜೂರಾದ ಹುದ್ದೆ ಇರಲಿಲ್ಲ. ಇದು ಉದ್ಯಾನವನಗಳ ನಿರ್ವಹಣೆಯ ಮೇಲೆ ಪರಿಣಾಮ ಬೀರಿತ್ತು.

ಖಾಲಿ ಹುದ್ದೆಗಳಿರುವುದರಿಂದ ದಿನನಿತ್ಯದ ಅಭಿವೃದ್ಧಿ ಕಾರ್ಯಗಳು ಬಾಧಿತವಾಗುತ್ತವೆ ಎಂದು ಮೂರನೇ ಹಣಕಾಸು ಆಯೋಗವು ಗುರುತಿಸಿತ್ತು ಮತ್ತು ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲು ಶಿಫಾರಸು ಮಾಡಿತ್ತು. ಮಾನವಬಲದ ಸ್ಥಿತಿಯನ್ನು ನಗರ ಸ್ಥಳೀಯ ಸಂಸ್ಥೆಗಳು ನಿಯಮಿತವಾಗಿ ಪೌರಾಡಳಿತ ನಿರ್ದೇಶನಾಲಯಕ್ಕೆ ಸಲ್ಲಿಸುತ್ತಿದ್ದರೂ ಸಹ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಯಾವುದೇ ಕ್ರಮ ಕೈಗೊಂಡಿರಲಿಲ್ಲ.

ಪರೀಕ್ಷಾ–ತನಿಖೆ ನಡೆಸಿದ 34[23] ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಾನವಬಲದ ವಿಶ್ಲೇಷಣೆಯು, 2019ರ ಪ್ರಕ್ಷೇಪಿತ ಜನಸಂಖ್ಯೆಯ ಅನ್ವಯ 1,000 ಜನಸಂಖ್ಯೆಗೆ ನೌಕರರ ಸಂಖ್ಯೆಯು **ನಕ್ಷೆ–6.3**ರಲ್ಲಿ ಸೂಚಿಸಿರುವಂತೆ, 0.98 ಮತ್ತು 3.85ರ ನಡುವೆ ಇದ್ದಿತು ಎಂದು ತೋರಿಸಿತು.

[23] 10 ನಗರ ಸ್ಥಳೀಯ ಸಂಸ್ಥೆಗಳಿಗೆ ಪ್ರಕ್ಷೇಪಿತ ಜನಸಂಖ್ಯೆಯು ಲಭ್ಯವಿಲ್ಲದಿರುವುದರಿಂದ, ಅವುಗಳನ್ನು ವಿಶ್ಲೇಷಣೆಗೆ ಪರಿಗಣಿಸಿರಲಿಲ್ಲ.

**ನಕ್ಷೆ–6.3: ಪರೀಕ್ಷಾ–ತನಿಖೆ ನಡೆಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ 1,000 ಜನಸಂಖ್ಯೆಗೆ ನೌಕರರ ವಿಷಯದಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಸಾಮರ್ಥ್ಯ**




ಬಾಗಲಕೋಟೆ ಮತ್ತು ಕೊಪ್ಪಳ ನಗರಸಭೆಗಳು (ಕೆಂಪು ಬಣ್ಣದಲ್ಲಿ ತೋರಿಸಲಾಗಿದೆ) ಪ್ರತಿ 1,000 ಜನರಿಗೆ ಒಂದಕ್ಕಿಂತ ಕಡಿಮೆ ನೌಕರರನ್ನು ಹೊಂದಿದ್ದರೆ, 14 ನಗರ ಸ್ಥಳೀಯ ಸಂಸ್ಥೆಗಳು (ಕಡುಕೆಂಪು ಬಣ್ಣ) 1ರಿಂದ 2 ನೌಕರರನ್ನು ಹೊಂದಿದ್ದವು, 13 ನಗರ ಸ್ಥಳೀಯ ಸಂಸ್ಥೆಗಳು (ನೀಲಿ ಬಣ್ಣ) 2ರಿಂದ 3 ನೌಕರರನ್ನು ಮತ್ತು 5 ನಗರ ಸ್ಥಳೀಯ ಸಂಸ್ಥೆಗಳು (ಚಿನ್ನದ ಬಣ್ಣ) 3ಕ್ಕೂ ಹೆಚ್ಚು ನೌಕರರನ್ನು ಹೊಂದಿದ್ದವು. ಸೇವೆಯನ್ನು ಸಮರ್ಥವಾಗಿ ನಿರ್ವಹಿಸಲು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಾಕಷ್ಟು ಮಾನವಬಲ ಇರಲಿಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

***ಶಿಫಾರಸು 11: ಪ್ರಕಾರ್ಯಗಳನ್ನು ನಿಭಾಯಿಸಲು ಅರ್ಹ ಮಾನವ ಸಂಪನ್ಮೂಲದ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಅಗತ್ಯ ಸಿಬ್ಬಂದಿಗಳ ನಿರ್ಧರಣೆ ಮತ್ತು ನೇಮಕಾತಿಗಳ ವಿಷಯಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಮಾನವ ಸಂಪನ್ಮೂಲಗಳ ಮೇಲೆ ಸಾಕಷ್ಟು ಅಧಿಕಾರಗಳನ್ನು ವಹಿಸಬೇಕು.***

### 6.2.2 ಪೌರಸಂಸ್ಥೆಯ ಆಯುಕ್ತರು/ಮುಖ್ಯಾಧಿಕಾರಿಗಳ ಕಾರ್ಯ ನಿರ್ವಹಣೆ

ನಗರ ಸ್ಥಳೀಯ ಸಂಸ್ಥೆಗಳ ಆಯುಕ್ತರು ಮತ್ತು ಮುಖ್ಯಾಧಿಕಾರಿಗಳು ಸರ್ಕಾರಿ ನೌಕರರಾಗಿರುತ್ತಾರೆ. ಪೌರಸಂಸ್ಥೆಯ ಆಯುಕ್ತರು/ಮುಖ್ಯಾಧಿಕಾರಿ ಪೌರಸಂಸ್ಥೆಯ ಕಾರ್ಯನಿರ್ವಾಹಕ ಮುಖ್ಯಸ್ಥರಾಗಿರುತ್ತಾರೆ. ಕೆಎಮ್ ಅಧಿನಿಯಮದ ಪರಿಚ್ಛೇದ 327(1)ರ ಅನ್ವಯ ಕರ್ನಾಟಕ ಪೌರಾಡಳಿತ ಸೇವೆಯ (ಕೆಎಮ್ಎಎಸ್) ಮುಖ್ಯ ಅಧಿಕಾರಿಗಳ ಪದವೃಂದದಿಂದ ಪೌರಾಡಳಿತ ನಿರ್ದೇಶನಾಲಯವು ಮುಖ್ಯಾಧಿಕಾರಿಯನ್ನು ನೇಮಿಸಬೇಕು. ಅಲ್ಲದೆ, ಕೆಎಮ್ ಅಧಿನಿಯಮದ ಪರಿಚ್ಛೇದ 365(1)ರ ಅನ್ವಯ ರಾಜ್ಯ ಸರ್ಕಾರವು ಕೆಎಮ್ಎಎಸ್–ಅಲ್ಲದ ಅಧಿಕಾರಿಗಳನ್ನು ಕೆಎಮ್ಎಎಸ್ ಅಧಿಕಾರಿಗಳಿಗೆ ನಿಗದಿಪಡಿಸಿದ ಹುದ್ದೆಗಳಿಗೆ ನೇಮಿಸಬಾರದು ಮತ್ತು ಅಂತಹ ನೇಮಕಾತಿಯು ಅಬದ್ಧ ಮತ್ತು ಕಾನೂನುಬಾಹಿರವಾಗುತ್ತದೆ. 4ನೇ ರಾಜ್ಯ ಹಣಕಾಸು ಆಯೋಗವು ಸಹ ನಗರ ಸ್ಥಳೀಯ ಸಂಸ್ಥೆಗಳ ಪೌರಸಂಸ್ಥೆಯ ಆಯುಕ್ತರು/ ಮುಖ್ಯಾಧಿಕಾರಿಗಳು ತರಬೇತಿ ಪಡೆದ ಕೆಎಮ್ಎಎಸ್ ಪದವೃಂದ ಶ್ರೇಣಿಯಿಂದ ಆಗಿರಬೇಕು ಎಂದು ಅಭಿಪ್ರಾಯಪಟ್ಟಿತ್ತು ಮತ್ತು ಈ ವಿಷಯದಲ್ಲಿ ತಕ್ಷಣದ ಕ್ರಮಗಳನ್ನು ಪ್ರಾರಂಭಿಸಬೇಕು ಎಂದು ಶಿಫಾರಸು ಮಾಡಿತ್ತು.

ಮಹಾನಗರ ಪಾಲಿಕೆಗಳನ್ನು ಹೊರತುಪಡಿಸಿ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಪೌರಸಂಸ್ಥೆಯ ಆಯುಕ್ತರು ಮತ್ತು ಮುಖ್ಯಾಧಿಕಾರಿಗಳ ಸ್ಥಳನಿಯುಕ್ತಿಯ ಪರಿಶೀಲನೆಯು, ಮಾರ್ಚ್ 2019ರ ಅಂತ್ಯದಲ್ಲಿದ್ದಂತೆ ಪೌರಸಂಸ್ಥೆಯ ಆಯುಕ್ತರು/ಮುಖ್ಯಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ 275ರಲ್ಲಿ 181 ವ್ಯಕ್ತಿಗಳು ಕೆಎಮ್‌ಎಎಸ್ ನವರಲ್ಲವೆಂದು ತೋರಿಸಿತು ಮತ್ತು ಇದು ಕೆಎಮ್ ಅಧಿನಿಯಮದ ಪರಿಚ್ಛೇದ 365(1)ಕ್ಕೆ ವಿರುದ್ಧವಾಗಿತ್ತು. ಈ 181 ವ್ಯಕ್ತಿಗಳಲ್ಲಿ, 15 ವ್ಯಕ್ತಿಗಳು ಗ್ರೂಪ್ ಬಿ ಅಧಿಕಾರಿಗಳಾಗಿದ್ದರು (ಪರಿಸರ ಎಂಜಿನಿಯರ್‌ಗಳು, ಕಂದಾಯ ಅಧಿಕಾರಿಗಳು) ಮತ್ತು 166 ವ್ಯಕ್ತಿಗಳು ಗ್ರೂಪ್ ಸಿ ನೌಕರರಾಗಿದ್ದರು (ಸಮುದಾಯ ವ್ಯವಹಾರ ಅಧಿಕಾರಿಗಳು, ವ್ಯವಸ್ಥಾಪಕರು, ಹಿರಿಯ ಆರೋಗ್ಯ ನಿರೀಕ್ಷಕರು, ಪ್ರಥಮ ದರ್ಜೆ ಸಹಾಯಕರು ಇತ್ಯಾದಿ) ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪೌರಸಂಸ್ಥೆಯ ಆಯುಕ್ತರು/ ಮುಖ್ಯಾಧಿಕಾರಿಯ ಕರ್ತವ್ಯಗಳನ್ನು ಕೆಎಮ್‌ಎಎಸ್ ಅಥವಾ ಸಾಕಷ್ಟು ಹಿರಿಯ ಹುದ್ದೆಯಲ್ಲಿಲ್ಲದ ಸಿಬ್ಬಂದಿಯು ನಿಭಾಯಿಸುವುದು ನಗರ ಸ್ಥಳೀಯ ಸಂಸ್ಥೆಗಳಿಂದ ಸೇವೆಯ ವಿತರಣೆಯ ಪರಿಣಾಮಕಾರಿತ್ವವನ್ನು ಬಾಧಿಸಬಹುದು ಮತ್ತು ಇದು ಕೆಎಮ್ ಅಧಿನಿಯಮದ ಪರಿಚ್ಛೇದ 365 (1) ರ ನಿಬಂಧನೆಗಳನ್ನು ಉಲ್ಲಂಘಿಸಿದಂತಾಗುತ್ತದೆ.

### 6.2.3 ಕೆಎಮ್‌ಎಎಸ್ ಅಧಿಕಾರಿಗಳ ಸ್ಥಳನಿಯುಕ್ತಿ

ಪೌರಾಡಳಿತ ನಿರ್ದೇಶನಾಲಯವು ಒದಗಿಸಿದ ಮಾಹಿತಿಯ ಅನ್ವಯ, ಮಾರ್ಚ್ 2020ರ ಅಂತ್ಯಕ್ಕೆ ಕೇವಲ ಆಯುಕ್ತರು/ಮುಖ್ಯಾಧಿಕಾರಿಗಳನ್ನಾಗಿ ನೇಮಿಸಬೇಕಾಗಿದ್ದ 175 ಕೆಎಮ್‌ಎಎಸ್ ಅಧಿಕಾರಿಗಳಿದ್ದರು. ಆದರೆ, ಅವರಲ್ಲಿ ಶೇಕಡಾ 30ರಷ್ಟು ಅಧಿಕಾರಿಗಳು ಅಂಗಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು ಅಥವಾ ನಿಯೋಜನೆಯ ಮೇಲೆ ವಿವಿಧ ಇಲಾಖೆಗಳಲ್ಲಿದ್ದರು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕೆಲವು ಅಧಿಕಾರಿಗಳು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಂದಾಯ ಅಧಿಕಾರಿಗಳಾಗಿ, ವ್ಯವಸ್ಥಾಪಕರಾಗಿ, ಹಿರಿಯ ಆರೋಗ್ಯ ನಿರೀಕ್ಷಕರಾಗಿ ಕರ್ತವ್ಯಗಳನ್ನು ನಿರ್ವಹಿಸುತ್ತಿರುವುದನ್ನು ಸಹ ಲೆಕ್ಕಪರಿಶೋಧನೆಯು ಗಮನಿಸಿತು. ಈ ಅಧಿಕಾರಿಗಳ ಸ್ಥಳನಿಯುಕ್ತಿಯ ವಿವರಗಳನ್ನು **ಕೋಷ್ಟಕ–6.4**ರಲ್ಲಿ ನೀಡಲಾಗಿದೆ.

**ಕೋಷ್ಟಕ–6.4: ಕೆಎಮ್‌ಎಎಸ್ ಅಧಿಕಾರಿಗಳ ಸ್ಥಳನಿಯುಕ್ತಿಯ ವಿವರಗಳು**

| ಕ್ರಮ ಸಂಖ್ಯೆ | ಸ್ಥಳನಿಯುಕ್ತಿ | ಅಧಿಕಾರಿಗಳ ಸಂಖ್ಯೆ | ವಿವರಗಳು |
|---|---|---|---|
| 1 | ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರು | 79 | ಮುಖ್ಯಾಧಿಕಾರಿಗಳಾಗಿ/ಆಯುಕ್ತರಾಗಿ |
| 2 | | 04 | ಕೌನ್ಸಿಲ್/ಸಮಿತಿಗಳ ಕಾರ್ಯದರ್ಶಿಗಳಾಗಿ |
| 3 | | 21 | ಕಂದಾಯ ಅಧಿಕಾರಿಗಳಾಗಿ/ವ್ಯವಸ್ಥಾಪಕರಾಗಿ/ವರಿಷ್ಠ ಆರೋಗ್ಯ ನಿರೀಕ್ಷಕರಾಗಿ |
| 4 | ಇತರ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರು | 34 | ಸರ್ಕಾರಿ ಇಲಾಖೆಗಳಲ್ಲಿ/ನಗರಾಭಿವೃದ್ಧಿ ಇಲಾಖೆಯ ಅಂಗ ಸಂಸ್ಥೆಗಳಲ್ಲಿ ಅಂದರೆ, ಡಿಎಮ್‌ಎ, ಯುಡಿಎ, ಕೆಯುಐಡಿಎಫ್‌ಸಿ, ಬಿಎಮ್‌ಆರ್‌ಡಿಎ ಮುಂತಾದವುಗಳಲ್ಲಿ |
| 5 | | 04 | ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕಾಲೇಜು ಶಿಕ್ಷಣ, ವಿಧಾನಸಭೆಯ ಸದಸ್ಯರು ಮತ್ತು ನಿಜಗುಣ ಅಂಬಿಗರ ಚೌಡಯ್ಯ ನಿಗಮಕ್ಕೆ ನಿಯೋಜನೆ |
| 6 | | 05 | ಬಿಬಿಎಮ್‌ಪಿಯಲ್ಲಿ |
| 7 | ಇತರೆ | 23 | ತರಬೇತಿ |
| 8 | | 02 | ಅಮಾನತ್ತು |
| 9 | | 03 | ಸ್ಥಳನಿಯುಕ್ತಿಯ ನಿರೀಕ್ಷೆಯಲ್ಲಿ |

ಆಧಾರ: ಪೌರಾಡಳಿತ ನಿರ್ದೇಶನಾಲಯ ನೀಡಿದ ಮಾಹಿತಿ

ಕೆಎಮ್‌ಎಎಸ್ ಅಧಿಕಾರಿಗಳು ಕಂದಾಯ ಅಧಿಕಾರಿಗಳ, ವ್ಯವಸ್ಥಾಪಕರ, ಹಿರಿಯ ಆರೋಗ್ಯ ನಿರೀಕ್ಷಕರ ಕರ್ತವ್ಯಗಳನ್ನು ನಿಭಾಯಿಸುತ್ತಿರುವುದು ಮತ್ತು ಮೇಲಿನ ಕಂಡಿಕೆಯಲ್ಲಿ ತಿಳಿಸಿರುವಂತೆ ಮುಖ್ಯಾಧಿಕಾರಿಗಳ/ ಆಯುಕ್ತರ ಹುದ್ದೆಗಳನ್ನು ಕಂದಾಯ ಅಧಿಕಾರಿಗಳು, ವ್ಯವಸ್ಥಾಪಕರು, ವರಿಷ್ಠ ಆರೋಗ್ಯ ನಿರೀಕ್ಷಕರು ಮುಂತಾದ ಕೆಎಮ್‌ಎಎಸ್–ಅಲ್ಲದ ಅಧಿಕಾರಿಗಳಿಂದ ಕರ್ತವ್ಯ ನಿಭಾಯಿಸುತ್ತಿರುವುದು, ಸಿ&ಆರ್ ನಿಯಮಗಳ ನಿಬಂಧನೆಗಳ ಉಲ್ಲಂಘನೆಯಾಗಿದ್ದಲ್ಲದೆ ನಗರ ಸ್ಥಳೀಯ ಸಂಸ್ಥೆಗಳ ಕಾರ್ಯನಿರ್ವಾಹಕ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಲು ನೇಮಕಗೊಂಡ ಕೆಎಮ್‌ಎಎಸ್ ಅಧಿಕಾರಿಗಳು ಕೆಎಮ್‌ಎಎಸ್ ಅಲ್ಲದ ಅಧಿಕಾರಿಗಳಡಿಯಲ್ಲಿ ಕೆಲಸ ಮಾಡುವ ವಿಪರ್ಯಾಸ ಪರಿಸ್ಥಿತಿಯನ್ನು ಸೃಷ್ಟಿಸುತ್ತದೆ. ಇದಲ್ಲದೆ, ಕೆಎಮ್‌ಎಎಸ್ ಅಧಿಕಾರಿಗಳನ್ನು ಇತರ ಇಲಾಖೆಗಳಿಗೆ ನಿಯೋಜಿಸುವುದು ಪ್ರತ್ಯೇಕ ಪೌರಾಡಳಿತ ಸೇವೆಯನ್ನು ಹೊಂದುವ ಉದ್ದೇಶವನ್ನು ಸೋಲಿಸುತ್ತದೆ.

***ಶಿಫಾರಸು–12: ಕೆಎಮ್‌ಎಎಸ್ ಸಿಬ್ಬಂದಿಯನ್ನು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ನಿಯೋಜಿಸಬೇಕು. ನಿರ್ದಿಷ್ಟವಾಗಿ ಹೇಳುವುದಾದರೆ, ನಗರ ಸ್ಥಳೀಯ ಸಂಸ್ಥೆಗಳು ಸಾಕಷ್ಟು ಹಿರಿತನ ಮತ್ತು ಸಾಮರ್ಥ್ಯ ಹೊಂದಿರುವ ವ್ಯಕ್ತಿಗಳ ನೇತೃತ್ವದಲ್ಲಿವೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.***

### 6.2.4 ನಿಯೋಜನೆ ಮೇಲೆ ಹುದ್ದೆಗಳನ್ನು ಭರ್ತಿ ಮಾಡುವುದು

ನೇರ ನೇಮಕಾತಿ, ನಿಯೋಜನೆ, ಬಡ್ತಿ ಮುಂತಾದ ವಿಧಾನಗಳ ಮೂಲಕ ವಿವಿಧ ಪದವೃಂದಗಳ ಅಡಿಯಲ್ಲಿ ಹುದ್ದೆಗಳನ್ನು ಭರ್ತಿ ಮಾಡಲು ಸಿ&ಆರ್ ನಿಯಮಗಳು ಸೂಚಿಸಿದ್ದವು. ಕೆಲವು ಹುದ್ದೆಗಳಿಗೆ ಮಾತ್ರ ನಿಯೋಜನೆಯನ್ನು ಸೂಚಿಸಲಾಗಿತ್ತು. ಗ್ರೂಪ್ ಸಿ ಅಡಿಯಲ್ಲಿ ಕಿರಿಯ ಆರೋಗ್ಯ ನಿರೀಕ್ಷಕರು, ಸಮುದಾಯ ಸಂಘಟಕರು, ಪ್ರಥಮ ದರ್ಜೆ ಸಹಾಯಕ, ದ್ವಿತೀಯ ದರ್ಜೆ ಸಹಾಯಕ ಮುಂತಾದ ಹುದ್ದೆಗಳನ್ನು ಮಹಾನಗರ ಪಾಲಿಕೆ ಮತ್ತು ಇತರ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಿಯೋಜನೆ ಮೂಲಕ ಭರ್ತಿ ಮಾಡಲಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು, ಆದರೆ ಸಿ&ಆರ್ ನಿಯಮಗಳ ಅಡಿಯಲ್ಲಿ ಈ ಹುದ್ದೆಗಳಿಗೆ ನಿಯೋಜನೆ ಮಾಡಲು ಯಾವುದೇ ಅವಕಾಶವಿರಲಿಲ್ಲ. ಮಹಾನಗರ ಪಾಲಿಕೆಗಳಲ್ಲಿನ 346 ಗ್ರೂಪ್ ಎ ಹುದ್ದೆಗಳಲ್ಲಿ, ಉಪ ಆಯುಕ್ತರು, ಕಾರ್ಯನಿರ್ವಾಹಕ ಅಭಿಯಂತರು, ಮುಖ್ಯ ಲೆಕ್ಕಾಧಿಕಾರಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು, ಸಂಖ್ಯಾಶಾಸ್ತ್ರ ಅಧಿಕಾರಿ, ಆರೋಗ್ಯಾಧಿಕಾರಿ, ಕೌನ್ಸಿಲ್‌ನ ಕಾರ್ಯದರ್ಶಿ ಮುಂತಾದ 140 (ಶೇಕಡ 40) ಹುದ್ದೆಗಳನ್ನು ನಿಯೋಜನೆ ಅಥವಾ ಹೊರಗುತ್ತಿಗೆ ಮೂಲ ನೇಮಕಾತಿಗಾಗಿ ಮೀಸಲಿಟ್ಟಿರುವುದನ್ನು ಮಂಜೂರಾದ ಸಿಬ್ಬಂದಿಗಳ ಸಂಖ್ಯೆಯ ಮತ್ತಷ್ಟು ವಿಶ್ಲೇಷಣೆಯು ತಿಳಿಯಪಡಿಸಿತು.

ನಿಯೋಜನೆಯ ಮೂಲಕ ಹೆಚ್ಚಿನ ಸಂಖ್ಯೆಯ ಹುದ್ದೆಗಳನ್ನು ಭರ್ತಿ ಮಾಡುವುದು, ವಿಶೇಷವಾಗಿ ಗ್ರೂಪ್ ಎ ಪದವೃಂದದಲ್ಲಿ ಹಾಗೂ ಸಿ&ಆರ್ ನಿಯಮಗಳ ನಿಬಂಧನೆಗಳ ಹೊರತಾಗಿಯೂ ನಿಯೋಜನೆ ಮೂಲಕ ಗ್ರೂಪ್ ಸಿ ಹುದ್ದೆಗಳನ್ನು ಭರ್ತಿ ಮಾಡುವುದು ನಗರ ಸ್ಥಳೀಯ ಸಂಸ್ಥೆಗಳ ಕಾರ್ಯನಿರ್ವಹಣೆಯ ಮೇಲೆ ಪರಿಣಾಮ ಬೀರುತ್ತದೆ. ಇದು, ಆಡಳಿತ ಮಂಡಳಿ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಆಯುಕ್ತರು/ಮುಖ್ಯಾಧಿಕಾರಿಗೆ ಅಂತಹ ಸಿಬ್ಬಂದಿಯನ್ನು ಹೊಣೆಗಾರರನ್ನಾಗಿ ಮಾಡಲಾಗುವುದಿಲ್ಲ ಏಕೆಂದರೆ ಶಿಸ್ತು ಕ್ರಮವನ್ನು ಪ್ರಾರಂಭಿಸಲಾಗಲೀ ಅಥವಾ ಅವರನ್ನು ಮಾತೃ ಇಲಾಖೆಗೆ ವಾಪಸ್ ಕಳುಹಿಸಲು ಅವರ ಮೇಲೆ ನಗರ ಸ್ಥಳೀಯ ಸಂಸ್ಥೆಗಳು ಯಾವುದೇ ನಿಯಂತ್ರಣವನ್ನು ಹೊಂದಿರುವುದಿಲ್ಲ. ಮಧ್ಯಪ್ರದೇಶದಲ್ಲಿ ಅಳವಡಿಸಿರುವಂತೆ ಪೌರ ಆರೋಗ್ಯ ಸೇವೆ, ನಗರ ಇಂಜಿನಿಯರಿಂಗ್ ಸೇವೆ ಮುಂತಾದ ವಿಶೇಷ ಉಪಪೌರ ಸೇವೆಗಳನ್ನು ಸೃಷ್ಟಿಸುವ ಅಥವಾ ಹಣಕಾಸು ತಜ್ಞ, ಸಂಪನ್ಮೂಲ ಕ್ರೋಢೀಕರಣ ತಜ್ಞ, ಐಇಸಿ/ಡಾಕ್ಯುಮೆಂಟೇಶನ್ ತಜ್ಞ, ಈವೆಂಟ್ ಮ್ಯಾನೇಜ್ಮೆಂಟ್ ತಜ್ಞ, ಸಾಮಾಜಿಕ ಅಭಿವೃದ್ಧಿ ತಜ್ಞ ಮುಂತಾದ ಸಮಕಾಲೀನ ಒಪ್ಪಂದದ ಹುದ್ದೆಗಳನ್ನು ರಚಿಸುವ ಉತ್ತಮ ಪದ್ಧತಿಯನ್ನು ರಾಜ್ಯ ಸರ್ಕಾರ ಪರಿಗಣಿಸಬಹುದು.

## 6.3 ಸಾಮರ್ಥ್ಯ ನಿರ್ಮಾಣ

ಸಿಬ್ಬಂದಿಗಳ ಸಾಮರ್ಥ್ಯಗಳನ್ನು ಬಲಪಡಿಸಲು ಮತ್ತು ಉತ್ತಮ ಸೇವೆಗಳನ್ನು ನೀಡುವ ಸಲುವಾಗಿ ಸುಧಾರಿತ ಕೌಶಲ್ಯಗಳಿಂದ ಅವರನ್ನು ಸಜ್ಜುಗೊಳಿಸುವುದಕ್ಕೆ ಸಾಮರ್ಥ್ಯ ನಿರ್ಮಾಣವು ಮುಖ್ಯವಾಗಿದೆ. ಪೌರಸಂಸ್ಥೆಯ ಉದ್ಯೋಗಿಗಳಿಗೆ ಮೈಸೂರಿನಲ್ಲಿರುವ ರಾಜ್ಯ ನಗರಾಭಿವೃದ್ಧಿ ಸಂಸ್ಥೆ (ಎಸ್‌ಐಯುಡಿ) ತರಬೇತಿ ಚಟುವಟಿಕೆಗಳನ್ನು ನಡೆಸುತ್ತದೆ. ನಗರ ಸ್ಥಳೀಯ ಸಂಸ್ಥೆಗಳ ಎಲ್ಲಾ ಪದವೃಂದಕ್ಕೆ ಮತ್ತು ಚುನಾಯಿತ ಪ್ರತಿನಿಧಿಗಳಿಗೆ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸುವ ಮತ್ತು ಸಂಘಟಿಸುವ ಹೊಣೆಗಾರಿಕೆಯನ್ನು ಎಸ್‌ಐಯುಡಿ ಹೊಂದಿದೆ. ಎಸ್‌ಐಯುಡಿಯ ಆಡಳಿತ ಮಂಡಳಿ ನಗರ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿಗೆ ವಾರ್ಷಿಕ ತರಬೇತಿ ಕಾರ್ಯ ಯೋಜನೆಯನ್ನು ಅನುಮೋದಿಸುತ್ತದೆ. ಪೌರಾಡಳಿತ ನಿರ್ದೇಶನಾಲಯವು ತರಬೇತಿಗಾಗಿ ವಿವಿಧ ನಗರ ಸ್ಥಳೀಯ ಸಂಸ್ಥೆಗಳಿಂದ ತರಬೇತಿ ಪಡೆಯುವವರನ್ನು ನಾಮನಿರ್ದೇಶನ ಮಾಡುತ್ತದೆ. ಎಸ್‌ಐಯುಡಿ/ಪೌರಾಡಳಿತ ನಿರ್ದೇಶನಾಲಯವು ತಮ್ಮ ತರಬೇತಿ ಅಗತ್ಯತೆಗಳನ್ನು ವಿಶ್ಲೇಷಿಸಲು ನಗರ ಸ್ಥಳೀಯ ಸಂಸ್ಥೆಗಳನ್ನು ಸಂಪರ್ಕಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

2014–15ರಿಂದ 2018–19ರ ಅವಧಿಯಲ್ಲಿ ಚುನಾಯಿತ ಪ್ರತಿನಿಧಿಗಳು, ಡಿಯುಡಿಸಿಯ ಯೋಜನಾ ನಿರ್ದೇಶಕರು, ಪೌರಸಂಸ್ಥೆಯ ಆಯುಕ್ತರು, ಮುಖ್ಯಾಧಿಕಾರಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಇತರ ಸಿಬ್ಬಂದಿಗಳ ತರಬೇತಿಗಾಗಿ ಎಸ್‌ಐಯುಡಿ ₹13.04 ಕೋಟಿ ವೆಚ್ಚ ಮಾಡಿತ್ತು. ಒದಗಿಸಿದ ತರಬೇತಿ ಸ್ಥಾನಗಳ ಮತ್ತು ವಾಸ್ತವವಾಗಿ ಹಾಜರಾಗಿದ್ದ ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು/ಸಿಬ್ಬಂದಿಗಳ ಸಂಖ್ಯೆಯ ಪರಿಶೀಲನೆಯು 194ರಲ್ಲಿ 128 ಕೋರ್ಸ್‌ಗಳಲ್ಲಿ ತರಬೇತಿ ಸ್ಥಾನಗಳ ಬಳಕೆಯು ಶೇಕಡಾ 75ಕ್ಕಿಂತ ಕಡಿಮೆಯಿದ್ದಿತು ಎಂಬುದನ್ನು ತೋರಿಸಿತು. ಈ 194 ಕೋರ್ಸ್‌ಗಳನ್ನು 15 ವರ್ಗಗಳಡಿ ವಿಂಗಡಿಸಲಾಗಿದೆ ಮತ್ತು ವರ್ಗವಾರು ವಿವರಗಳನ್ನು **ಅನುಬಂಧ–6.2**ರಲ್ಲಿ ನೀಡಲಾಗಿದೆ. ಮೇಲಿನ ಅವಧಿಯಲ್ಲಿ ಚುನಾಯಿತ ಪ್ರತಿನಿಧಿಗಳಿಗೆ 125 ತರಬೇತಿ ಕಾರ್ಯಕ್ರಮಗಳನ್ನು ಸಹ ಎಸ್‌ಐಯುಡಿ ನಡೆಸಿತ್ತು. ಸ್ಥಾನಗಳು ಕೇವಲ ಶೇಕಡಾ 33ರಿಂದ 55ರವರೆಗೆ ಭರ್ತಿಯಾಗಿದ್ದನ್ನು ನಾವು ಗಮನಿಸಿದೆವು. ತರಬೇತಿ ಸೌಲಭ್ಯಗಳ ಸಾಧಾರಣ ಬಳಕೆಯಿಂದಾಗಿ ಸಿಬ್ಬಂದಿ ಕೌಶಲ್ಯಗಳನ್ನು ಹೊಂದದಿರುವುದರಲ್ಲಿ ಪರಿಣಮಿಸಿತು ಮತ್ತು ಚುನಾಯಿತ ಪ್ರತಿನಿಧಿಗಳ ಸಾಧಾರಣ ಭಾಗವಹಿಸುವಿಕೆಯು ಕಳವಳಕ್ಕೆ ಕಾರಣವಾಗಿದೆ.

### 6.3.1 ಮೌಲ್ಯಮಾಪನದ ಅನುಪಸ್ಥಿತಿ

ತರಬೇತಿಯು ನಿರಂತರ ಪ್ರಕ್ರಿಯೆಯಾಗಿರುತ್ತದೆ ಮತ್ತು ಅದನ್ನು ನಿರಂತರವಾಗಿ ಪರಿಶೀಲಿಸುತ್ತಿರಬೇಕು. ಇದನ್ನು ಮೌಲ್ಯಮಾಪನದ ಮೂಲಕ ಮಾಡಬಹುದು. ಅಪೇಕ್ಷಿತ ಗುರಿಗಳನ್ನು ತಲುಪಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸಲು ಮತ್ತು ಕೋರ್ಸನ್ನು ಹೆಚ್ಚು ಪರಿಣಾಮಕಾರಿಯಾಗಿಸಲು ಅದನ್ನು ಪರಿಷ್ಕರಿಸಿ ಮರು ವ್ಯಾಖ್ಯಾನಿಸಲು ಮೌಲ್ಯಮಾಪನದ ಅಗತ್ಯವಿದೆ. ನಗರ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿಗೆ ನೀಡಿದ ತರಬೇತಿಯು ತಮ್ಮ ಕರ್ತವ್ಯಗಳ ನಿರ್ವಹಣೆಯ ಮೇಲಿನ ಪರಿಣಾಮವನ್ನು ಮೌಲ್ಯಮಾಪನ ಮಾಡಲು ಯಾವುದೇ ಕಾರ್ಯವಿಧಾನವು ಅಸ್ತಿತ್ವದಲ್ಲಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಮೌಲ್ಯಮಾಪನದ ಅನುಪಸ್ಥಿತಿಯಲ್ಲಿ ನೀಡಿದ ತರಬೇತಿಯು ಭಾಗವಹಿಸಿದವರಿಗೆ, ಅವರ ಕೌಶಲ್ಯಗಳನ್ನು ಸುಧಾರಿಸಲು ಸಹಾಯ ಮಾಡಿತೇ ಮತ್ತು ಕೋರ್ಸ್ ವಿನ್ಯಾಸಕ್ಕೆ ಪರಿಷ್ಕರಣೆಯ ಅಗತ್ಯವಿದ್ದಿತೆ ಎಂಬುದನ್ನು ಕಂಡುಹಿಡಿಯಲು ಲೆಕ್ಕಪರಿಶೋಧನೆಗೆ ಸಾಧ್ಯವಾಗಲಿಲ್ಲ. ಇದರಿಂದ, ತರಬೇತಿಯು ವಾಡಿಕೆಯ ವಿಷಯವಾಗಿತ್ತು ಎಂಬುದನು ಸ್ಪಷ್ಟವಾಗುತ್ತದೆ. ಇಲಾಖೆಯು ತರಬೇತಿ ಪಡೆದ ಸಿಬ್ಬಂದಿಯ ದತ್ತಸಂಚಯವನ್ನು ನಿರ್ವಹಿಸಿರಲಿಲ್ಲ ಎಂಬುದನ್ನೂ ಸಹ ಲೆಕ್ಕಪರಿಶೋಧನೆಯು ಗಮನಿಸಿತು.

## 6.4 ಕಾರ್ಯ ನಿರ್ವಹಣೆ

ಕಾರ್ಯ ನಿರ್ವಹಣೆಯು, ನಿರ್ವಹಣೆಯ ಅಗತ್ಯ ಸಾಧನವಾಗಿದೆ ಮತ್ತು ಸೇವಾ ವಿತರಣೆಯಲ್ಲಿ ತೊಡಗಿರುವ ನೌಕರರ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಅದು ಕರ್ತವ್ಯಗಳ ವರ್ಗೀಕರಣ, ಕಾರ್ಯಕ್ಷಮತೆಯ ಮಾನದಂಡಗಳನ್ನು ವ್ಯಾಖ್ಯಾನಿಸುವುದು, ಸೂಕ್ತವಾದ ಸ್ಥಳದಲ್ಲಿ ಸೂಕ್ತವಾದ ಸಿಬ್ಬಂದಿಯನ್ನು ನಿಯೋಜಿಸುವುದು ಮತ್ತು ಗುರಿಗಳನ್ನು ಸಾಧಿಸುವ ಸಿಬ್ಬಂದಿಯ ಸಾಮರ್ಥ್ಯವನ್ನು ಒಳಗೊಂಡಿರುತ್ತದೆ.

ವಿನಾಯಿತಿ ನೀಡದ ಹೊರತು, ಎಲ್ಲಾ ಉದ್ಯೋಗಿಗಳಿಗೆ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದನ್ನು ಸಿ&ಆರ್ ನಿಯಮಗಳು ಕಡ್ಡಾಯ ಮಾಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು, ಮತ್ತು ಪುರಸಭೆ ಮತ್ತು ಸ್ಥಳೀಯ ಮಂಡಳಿಗಳ ಪರೀಕ್ಷೆ, ಸಾಮಾನ್ಯ ಕಾನೂನು I ಮತ್ತು II ಹಾಗೂ ಅಕೌಂಟ್ಸ್ ಪರೀಕ್ಷೆಯು ಎಲ್ಲಾ ಪದವೃಂದಕ್ಕೆ ಕಡ್ಡಾಯವಾಗಿತ್ತು. ಅಕೌಂಟ್ಸ್ ಪರೀಕ್ಷೆಯನ್ನು ಅಕೌಂಟ್ಸ್ ಲೋಯರ್ ಮತ್ತು ಅಕೌಂಟ್ಸ್ ಹೈಯರ್ ಎಂದು ವರ್ಗೀಕರಿಸಲಾಗಿದೆ. ದ್ವಿತೀಯ ದರ್ಜೆಯ ಸಹಾಯಕ ಮತ್ತು ತೋಟಗಾರಿಕೆ ಸಹಾಯಕರಂತಹ ಪದವೃಂದಕ್ಕೆ ಅಕೌಂಟ್ಸ್ ಲೋಯರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು ಸಾಕಾಗಿದ್ದೂ ಕಚೇರಿ ವ್ಯವಸ್ಥಾಪಕರು, ಅಕೌಂಟ್ಸ್ ಅಧೀಕ್ಷಕ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು, ಕಿರಿಯ ಅಭಿಯಂತರು, ಪರಿಸರ ಅಭಿಯಂತರು, ಪ್ರಥಮ ದರ್ಜೆಯ ಸಹಾಯಕ, ವರ್ಕ್ ಇನ್ಸ್‌ಪೆಕ್ಟರ್, ಆರೋಗ್ಯ ನಿರೀಕ್ಷಕರು, ಕಂದಾಯ ನಿರೀಕ್ಷಕರು ಮುಂತಾದವರಿಗೆ ಅಕೌಂಟ್ಸ್ ಹೈಯರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು ಕಡ್ಡಾಯವಾಗಿತ್ತು. ಸಿ&ಆರ್ ನಿಯಮಗಳನ್ನು ಪ್ರಕಟಿಸಿದ ನಂತರ ಆದ ನೇರ ನೇಮಕಾತಿಗಳು ಪೌರಾಡಳಿತ ನಿರ್ದೇಶನಾಲಯವು ನಿಗದಿಪಡಿಸಿರುವ ಮೂಲ ಮಟ್ಟದ ಕಂಪ್ಯೂಟರ್ ಕೋರ್ಸ್‌ಗೆ ಒಳಗಾಗಿ ಮತ್ತು ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು ಅಗತ್ಯವಾಗಿತ್ತು.

ಯಾವುದೇ ಉದ್ಯೋಗಿ ಹುದ್ದೆಗೆ ನಿಗದಿಪಡಿಸಿದ ಸೇವಾ ಪರೀಕ್ಷೆಯಲ್ಲಿ ಉತ್ತೀರ್ಣರಾಗದಿದ್ದರೆ, ಅವನು/ಅವಳು ಬಡ್ತಿಗೆ ಅರ್ಹರಾಗುವುದಿಲ್ಲ. ಇದಲ್ಲದೆ, ವೇತನದಲ್ಲಿ ವಾರ್ಷಿಕ ವೃದ್ಧಿಯನ್ನು ಗಳಿಸಲು ಮತ್ತು ಕಾಯಂ ಹುದ್ದೆಯ ಪ್ರತಿಯಾಗಿ ದೃಢೀಕರಣಕ್ಕಾಗಿ, ಅಧಿಕಾರಿಯು ಅವನು/ಅವಳು ನೇಮಕಗೊಂಡ ಪದವೃಂದಕ್ಕಾಗಿ ನಿರ್ದಿಷ್ಟಪಡಿಸಿದ ಸೇವಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕಿತ್ತು.

ಮೇಲಿನ ಅವಶ್ಯಕತೆಗಳು ನಿರಂತರ ವೃತ್ತಿಪರ ಅಭಿವೃದ್ಧಿಗೆ ಖಂಡಿತವಾಗಿಯೂ ಸಹಾಯ ಮಾಡುತ್ತವೆಯಾದರೂ ಕೆಳಗೆ ಸೂಚಿಸಿದಂತಹ ಕಾರ್ಯಕ್ಷಮತೆ ಸೂಚಕಗಳು ಮತ್ತು ಕಾರ್ಯಕ್ಷಮತೆಯ ಮಾಪನಗಳನ್ನು ಗುರುತಿಸುವುದು ಅಪೇಕ್ಷಣೀಯವಾಗಿದೆ

- ಕಂದಾಯ ಸಂಗ್ರಹಣೆ – ಮಾಸಿಕ ಗುರಿಗಳ ನಿಗದಿ, ಗುರಿ ಸಾಧಿಸಿದ್ದಕ್ಕೆ ಪ್ರೋತ್ಸಾಹನೆ ಇತ್ಯಾದಿ, ಇದರಿಂದಾಗಿ ಬೇಡಿಕೆ ಮತ್ತು ಸಂಗ್ರಹ ಅನುಪಾತವನ್ನು ಕಡಿಮೆ ಮಾಡಿದಂತಾಗುತ್ತದೆ.
- ನಿಧಿ ನಿರ್ವಹಣೆ – ಚಟುವಟಿಕೆ/ಕಾರ್ಯವಾರು ಮತ್ತು ಅಗತ್ಯತೆ ಆಧಾರಿತ ನಿಧಿ ಹಂಚಿಕೆ, ನಿಧಿ ಬಳಕೆಯ ಆವರ್ತಕ ಪರಿಶೀಲನೆ ಇತ್ಯಾದಿ
- ಆಸ್ತಿ ನಿರ್ವಹಣೆ – ರಚಿಸಿದ ಸ್ವತ್ತುಗಳ ಗುರುತಿಸುವಿಕೆ, ಅಂತಹ ಸ್ವತ್ತುಗಳನ್ನು ದಾಖಲಿಸಲು ದತ್ತಸಂಚಯದ ರಚನೆ (ಸ್ಟಾಕ್ ರಿಜಿಸ್ಟರ್), ಆವರ್ತಕ ಮೌಲ್ಯಮಾಪನ ಮತ್ತು ಅವುಗಳ ರಕ್ಷಣೆ

ರಾಜ್ಯ ಸರ್ಕಾರ/ನಗರ ಸ್ಥಳೀಯ ಸಂಸ್ಥೆಗಳು ಅಂತಹ ಕಾರ್ಯಕ್ಷಮತೆ ಸೂಚಕಗಳನ್ನು ಪರಿಚಯಿಸುವುದನ್ನು ಪರಿಗಣಿಸಬಹುದು.

# 7 ಅಧ್ಯಾಯ VII
# ನಿರ್ಣಯ

74ನೇ ತಿದ್ದುಪಡಿಯು ಸಂವಿಧಾನದಲ್ಲಿ 243P ಯಿಂದ 243ZG ವರೆಗಿನ ಅನುಚ್ಛೇದಗಳನ್ನು ಒಳಗೊಂಡಿರುವ ಭಾಗ IX A (ಪೌರಸಂಸ್ಥೆಗಳು) ಯನ್ನು ಪರಿಚಯಿಸಿತು. 1 ಜೂನ್ 1993ರಿಂದ ಜಾರಿಗೆ ಬಂದ ಈ ತಿದ್ದುಪಡಿಯು ಸ್ಥಳೀಯ ಸಂಸ್ಥೆಗಳನ್ನು ಸ್ವಾಯತ್ತ ಸರ್ಕಾರ ಸಂಸ್ಥೆಗಳಾಗಿ ಕಾರ್ಯ ನಿರ್ವಹಿಸಲು ಬೇಕಾಗಿರುವ ಅಗತ್ಯವಾದ ಅಧಿಕಾರ ಹಾಗೂ ಆಧಿಪತ್ಯವನ್ನು ನೀಡಲು ಮತ್ತು ಜವಾಬ್ದಾರಿಗಳನ್ನು ವಹಿಸಲು ನಿಬಂಧನೆಗಳನ್ನು ರಚಿಸಲು ರಾಜ್ಯ ಶಾಸಕಾಂಗಗಳನ್ನು ಅಧಿಕೃತಿಸಿತು (ಅನುಚ್ಛೇದ 243W ). 12ನೇ ಅನುಸೂಚಿಯು ನಗರ ಸ್ಥಳೀಯ ಸಂಸ್ಥೆಗಳು ನಿರ್ವಹಿಸಬೇಕಾಗಿರುವ 18 ಪ್ರಕಾರ್ಯಗಳನ್ನು ಪಟ್ಟಿ ಮಾಡುತ್ತದೆ.

## 1 ಲೆಕ್ಕಪರಿಶೋಧನಾ ಉದ್ದೇಶ

***74ನೇ ಸಂವಿಧಾನ ತಿದ್ದುಪಡಿ ಕಾಯ್ದೆಯ ನಿಬಂಧನೆಗಳನ್ನು ರಾಜ್ಯ ಶಾಸನಗಳಲ್ಲಿ ಸಮರ್ಪಕವಾಗಿ ಅಳವಡಿಸಲಾಗಿದೆಯೇ?***

ಪ್ರತಿ ರಾಜ್ಯವು 74ನೇ ಸಂವಿಧಾನ ತಿದ್ದುಪಡಿ ಕಾಯ್ದೆಯನ್ನು ಅನುಷ್ಠಾನಗೊಳಿಸಲು ಶಾಸನವನ್ನು ಜಾರಿಗೊಳಿಸಬೇಕಾಗಿತ್ತು. ರಾಜ್ಯದಲ್ಲಿನ ನಗರ ಸ್ಥಳೀಯ ಸಂಸ್ಥೆಗಳನ್ನು ಕೆಎಮ್ ಅಧಿನಿಯಮ, 1964 ಮತ್ತು ಕೆಎಮ್‌ಸಿ ಅಧಿನಿಯಮ, 1976 ನಿಯಂತ್ರಿಸುತ್ತಿದೆ. 74ನೇ ಸಂವಿಧಾನ ತಿದ್ದುಪಡಿ ಕಾಯ್ದೆಯ ನಿಬಂಧನೆಗಳನ್ನು ಅನುಸರಿಸಲು ರಾಜ್ಯ ಸರ್ಕಾರವು ಈ ಕಾಯ್ದೆಗಳಿಗೆ ಅಗತ್ಯ ತಿದ್ದುಪಡಿಗಳನ್ನು ಮಾಡಿತು. ಆದರೆ, ಈ ತಿದ್ದುಪಡಿಗಳನ್ನು ದೃಢವಾದ ಕ್ರಮದಿಂದ ಬೆಂಬಲಿಸಲಿಲ್ಲವಾಗಿ ಸಂವಿಧಾನ ತಿದ್ದುಪಡಿಯ ಮನೋಭಾವವನ್ನು, ಅದರಲ್ಲೂ ಪ್ರಮುಖವಾಗಿ ಪ್ರಕಾರ್ಯಗಳ ಹಂಚಿಕೆ ಮತ್ತು ಸೂಕ್ತವಾದ ಸಾಂಸ್ಥಿಕ ವ್ಯವಸ್ಥೆ ರಚಿಸುವಲ್ಲಿ, ಸೋಲಿಸಿತು.

## 2 ಲೆಕ್ಕಪರಿಶೋಧನಾ ಉದ್ದೇಶ

***ಸೂಕ್ತವಾಗಿ ವಿನ್ಯಾಸಗೊಳಿಸಲಾದ ಸಂಸ್ಥೆಗಳು/ಸಾಂಸ್ಥಿಕ ವ್ಯವಸ್ಥೆ ಮತ್ತು ಅದರ ಕಾರ್ಯಚಟುವಟಿಕೆಗಳ ಮೂಲಕ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಪ್ರಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ರಾಜ್ಯ ಸರ್ಕಾರವು ಅಧಿಕಾರ ನೀಡಿತ್ತೇ?***

**ಪ್ರಕಾರ್ಯಗಳ ವರ್ಗಾವಣೆ** – ರಾಜ್ಯ ಸರ್ಕಾರವು 18 ರಲ್ಲಿ 17 ಪ್ರಕಾರ್ಯಗಳನ್ನು ವರ್ಗಾಯಿಸಿತು. ಅಗ್ನಿಶಾಮಕ ಸೇವೆಗಳನ್ನು ವರ್ಗಾಯಿಸಲಿಲ್ಲ. 17 ಪ್ರಕಾರ್ಯಗಳಲ್ಲಿ ಮಹಾನಗರ ಪಾಲಿಕೆಗಳಿಗೆ 12 ಕಡ್ಡಾಯವಾಗಿದ್ದವು ಮತ್ತು 5 ವಿವೇಚನಾತ್ಮಕವಾಗಿದ್ದವು ಮತ್ತು ಇದು ನಗರಸಭೆ/ಪುರಸಭೆ/ಪಟ್ಟಣ ಪಂಚಾಯತಿಗಳಿಗೆ ಕ್ರಮವಾಗಿ 11 ಮತ್ತು 6 ಆಗಿದ್ದವು. ಇದಲ್ಲದೆ, ನಗರ ಸ್ಥಳೀಯ ಸಂಸ್ಥೆಗಳು ಕೇವಲ ಮೂರು ಪ್ರಕಾರ್ಯಗಳಿಗೆ ಮಾತ್ರ ಏಕಮಾತ್ರ

ಹೊಣೆಗಾರರಾಗಿದ್ದವು. ಅವುಗಳು ಎರಡು ಪ್ರಕಾರ್ಯಗಳಲ್ಲಿ ಯಾವುದೇ ಪಾತ್ರವನ್ನು ಹೊಂದಿರಲಿಲ್ಲ ಮತ್ತು ಎಂಟು ಪ್ರಕಾರ್ಯಗಳಲ್ಲಿ ಸೀಮಿತ ಪಾತ್ರವನ್ನು ಹೊಂದಿದ್ದವು. ನಗರ ಸ್ಥಳೀಯ ಸಂಸ್ಥೆಗಳು ಮೂರು ಪ್ರಕಾರ್ಯಗಳಲ್ಲಿ ಕೇವಲ ಅನುಷ್ಠಾನ ಸಂಸ್ಥೆಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರೆ, ರಸ್ತೆಗಳು ಮತ್ತು ಸೇತುವೆಗಳಡಿಯಲ್ಲಿ ಅನುಷ್ಠಾನ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿದ್ದವು ಮತ್ತು ಈ ಪ್ರಕಾರ್ಯವನ್ನು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಕಾರ್ಯಗತಗೊಳಿಸುವ ಜವಾಬ್ದಾರಿಯನ್ನು ಹೊಂದಿದ್ದವು. ಆದುದರಿಂದ, ಹಂಚಿಕೆಯಾದ ಪ್ರಕಾರ್ಯಗಳ ನಿರ್ವಹಣೆಯನ್ನು ಬಹಳಷ್ಟು ಮಟ್ಟಿಗೆ ನಿರ್ಬಂಧಿಸಲಾಗಿತ್ತು.

**ಕೌನ್ಸಿಲ್‌ಗಳ ರಚನೆ** – 273 ನಗರ ಸ್ಥಳೀಯ ಸಂಸ್ಥೆಗಳಲ್ಲಿ 23ರಲ್ಲಿ ಚುನಾವಣೆಗಳು ನಡೆಯುವುದು ಬಾಕಿ ಇದ್ದರೂ ಸಹ ನಡೆದಿರಲಿಲ್ಲ, ಏಕೆಂದರೆ ವಾರ್ಡ್‌ಗಳಿಗೆ ಸಂಬಂಧಿಸಿದಂತೆ ಸರ್ಕಾರದ ಮೀಸಲಾತಿ ನೀತಿಗೆ ಸಂಬಂಧಿಸಿದ ನ್ಯಾಯಾಲಯದ ಪ್ರಕರಣಗಳಿದ್ದವು. ಚುನಾವಣೆ ನಡೆದ ಉಳಿದ 250 ನಗರ ಸ್ಥಳೀಯ ಸಂಸ್ಥೆಗಳ ಪೈಕಿ, 187ರಲ್ಲಿ ಮೇಯರ್/ಉಪಮೇಯರ್ ಮತ್ತು ಅಧ್ಯಕ್ಷ/ಉಪಾಧ್ಯಕ್ಷರ ಹುದ್ದೆಗಳಿಗೆ ಮೀಸಲಾತಿಯಲ್ಲಿ ಪರ್ಯಾಯಕ್ಕೆ ಸಂಬಂಧಿಸಿದ ನ್ಯಾಯಾಲಯದ ಪ್ರಕರಣಗಳಿಂದಾಗಿ ಕೌನ್ಸಿಲ್‌ಗಳನ್ನು ರಚಿಸಿರಲಿಲ್ಲ. ಆದ್ದರಿಂದ ಈ 210 ನಗರ ಸ್ಥಳೀಯ ಸಂಸ್ಥೆಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸಲಾಯಿತು. ಇದು ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ಅರ್ಥಹೀನಗೊಳಿಸಿತು.

**ಮೇಯರ್ ಅಧಿಕಾರಾವಧಿ** – ರಾಜ್ಯದಲ್ಲಿ, ಮಹಾನಗರ ಪಾಲಿಕೆಗಳ ಮೇಯರ್/ಉಪಮೇಯರ್‌ಗಳ ಅಧಿಕಾರಾವಧಿಯು ಚುನಾವಣೆಯ ದಿನಾಂಕದಿಂದ ಒಂದು ವರ್ಷವಾದರೆ ಇತರೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅವಧಿಯು ಚುನಾವಣೆಯ ದಿನಾಂಕದಿಂದ ಮೂವತ್ತು ತಿಂಗಳಾಗಿರುತ್ತದೆ. ಪೌರಸಂಸ್ಥೆಯ ಅವಧಿಯೊಂದಿಗೆ ಅವರುಗಳ ಅಧಿಕಾರಾವಧಿಯು ಸರಿಸಮಾನವಾಗಿರಲಿಲ್ಲ. ಸ್ಥಿರತೆಯನ್ನು ತರಲು ಮತ್ತು ದೀರ್ಘಕಾಲೀನ ದೃಷ್ಟಿಯಿಂದ ಮೇಯರ್ ಅವಧಿಯು ತುಂಬಾ ಕಡಿಮೆಯಿದ್ದಿತು. ಕರ್ನಾಟಕದ ನಗರಗಳ ಮೇಯರ್‌ಗಳು ದುರ್ಬಲ ನೆಲೆಗಟ್ಟಿನಲ್ಲಿದ್ದಾರೆ.

**ಸಮಿತಿಗಳು**–ಬಿಬಿಎಮ್‌ಪಿ ಹೊರತುಪಡಿಸಿ ಯಾವುದೇ ಮಹಾನಗರ ಪಾಲಿಕೆಗಳಲ್ಲಿ ವಾರ್ಡ್ ಸಮಿತಿಗಳನ್ನು ರಚಿಸಿರಲಿಲ್ಲ. ಹೀಗೆ, ಸ್ಥಳೀಯ ಆಡಳಿತದಲ್ಲಿ ಸಮುದಾಯದ ಭಾಗವಹಿಸುವಿಕೆ ಇರಲಿಲ್ಲ. 30ರಲ್ಲಿ 29 ಜಿಲ್ಲೆಗಳಲ್ಲಿ ಜಿಲ್ಲಾ ಯೋಜನಾ ಸಮಿತಿಗಳನ್ನು ರಚಿಸಲಾಗಿದ್ದರೂ, ನಿಯಮಿತವಾಗಿ ಸಭೆಗಳನ್ನು ನಡೆಸಿರಲಿಲ್ಲವಾಗಿ ಪಂಚಾಯಿತಿಗಳು ಮತ್ತು ಪೌರಸಂಸ್ಥೆಗಳ ನಡುವಿನ ಸಾಮಾನ್ಯ ಹಿತಾಸಕ್ತಿಯ ವಿಷಯಗಳನ್ನು ಒಳಗೊಂಡ ಏಕೀಕೃತ ಜಿಲ್ಲಾ ಅಭಿವೃದ್ಧಿ ಯೋಜನೆಯನ್ನು ತಯಾರಿಸಲಾಗಲಿಲ್ಲ. ಮಹಾನಗರ ಯೋಜನಾ ಸಮಿತಿಯು ಬೆಂಗಳೂರು ಪ್ರದೇಶಕ್ಕೆ ರಚನೆಯಾಗಿದ್ದರೂ ಸಮಗ್ರ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಿರಲಿಲ್ಲ.

**ರಾಜ್ಯ ಹಣಕಾಸು ಆಯೋಗ** – ರಾಜ್ಯ ಹಣಕಾಸು ಆಯೋಗಗಳ ಸ್ಥಾಪನೆಯಲ್ಲಿ 10ರಿಂದ 1,606 ದಿನಗಳವರೆಗೆ (1ರಿಂದ 4ನೇ ರಾಜ್ಯ ಹಣಕಾಸು ಆಯೋಗಗಳು) ವಿಳಂಬವಿದ್ದಿತು. ಹೀಗೆ, 6ನೇ ರಾಜ್ಯ ಹಣಕಾಸು ಆಯೋಗದ ಬದಲಿಗೆ 4ನೇ ರಾಜ್ಯ ಹಣಕಾಸು ಆಯೋಗವು ಜಾರಿಯಲ್ಲಿದ್ದಿತು. ರಾಜ್ಯ ಹಣಕಾಸು ಆಯೋಗದ ಶಿಫಾರಸುಗಳನ್ನು ಒಪ್ಪುವಲ್ಲಿ ಮತ್ತು ಅನುಷ್ಠಾನಗೊಳಿಸುವಲ್ಲಿ ಸಹ 238 ದಿನಗಳಿಂದ 1,284 ದಿನಗಳ ವಿಳಂಬವಾಗಿತ್ತು. ರಾಜ್ಯ ಹಣಕಾಸು ಆಯೋಗದ ಹಲವಾರು ಶಿಫಾರಸುಗಳನ್ನು ರಾಜ್ಯ ಸರ್ಕಾರವು ಜಾರಿ ಮಾಡಿರಲಿಲ್ಲ ಮತ್ತು ಹಣಕಾಸಿನ ಹಂಚಿಕೆಗೆ ಸಂಬಂಧಿಸಿದ ಶಿಫಾರಸುಗಳಿಗೆ ಮಾರ್ಪಾಡುಗಳನ್ನು ಕೈಗೊಂಡಿತ್ತು. ನಗರ ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸುವ ಪ್ರಕ್ರಿಯೆಗೆ ಇದು ಹಿನ್ನಡೆಯಾಗಿತ್ತು.

**ಜಿಲ್ಲಾ ನಗರಾಭಿವೃದ್ಧಿ ಕೋಶ** – ಪೌರ ನಿಧಿಯಡಿ ಕೈಗೊಳ್ಳಬೇಕಾದ ಅಭಿವೃದ್ಧಿ ಕಾರ್ಯಗಳಿಗಾಗಿ ನಗರ ಸ್ಥಳೀಯ ಸಂಸ್ಥೆಗಳ ಕಾರ್ಯ ಯೋಜನೆಗಳನ್ನು ಕೌನ್ಸಿಲ್ ಅನುಮೋದಿಸಿದ ನಂತರ ಜಿಲ್ಲಾ ನಗರಾಭಿವೃದ್ಧಿ ಕೋಶ ಅನುಮೋದಿಸುತ್ತಿತ್ತು. ಈ ವ್ಯವಸ್ಥೆಯು ನಗರ ಸ್ಥಳೀಯ ಸಂಸ್ಥೆಗಳ ಸ್ವಾಯತ್ತತೆಯನ್ನು ದುರ್ಬಲಗೊಳಿಸಿತ್ತು.

**ನಗರ ಸ್ಥಳೀಯ ಸಂಸ್ಥೆಗಳ ಮೇಲೆ ಅಂಗಸಂಸ್ಥೆಗಳ ಪರಿಣಾಮ** – ನಗರ/ಪಟ್ಟಣ ಯೋಜನೆ, ಭೂಬಳಕೆ ನಿಯಂತ್ರಣ, ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಕೊಳೆಗೇರಿ ಅಭಿವೃದ್ಧಿ ಕಾರ್ಯಗಳನ್ನು ರಾಜ್ಯದಲ್ಲಿ ಅಂಗಸಂಸ್ಥೆಗಳು ಒದಗಿಸುತ್ತಿದ್ದವು. ಈ ಅಂಗಸಂಸ್ಥೆಗಳು ತಮ್ಮದೇ ಆದ ಆಡಳಿತ ಮಂಡಳಿಗಳನ್ನು ಹೊಂದಿದ್ದು, ಅವುಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಿರಲಿಲ್ಲ. ಅಂಗಸಂಸ್ಥೆಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಹೊಣೆಗಾರರನ್ನಾಗಿ ಮಾಡಲು ರಾಜ್ಯವು ಶಾಸನಗಳನ್ನು ತಿದ್ದುಪಡಿ ಮಾಡಲಿಲ್ಲ. ಈ ವ್ಯವಸ್ಥೆಯು ನಗರ ಸ್ಥಳೀಯ ಸಂಸ್ಥೆಗಳು ತಮಗೆ ಅಧ್ಯಾದೇಶಿಸಿದ ಪ್ರಕಾರ್ಯಗಳನ್ನು ನಿರ್ವಹಿಸುವ ಸಾಮರ್ಥ್ಯಕ್ಕೆ ಅಡ್ಡಿಯುಂಟು ಮಾಡಿತ್ತು ಮತ್ತು ಸಾರ್ವಜನಿಕರಿಗೆ ಹೊಣೆಗಾರರಾಗುವ ಉದ್ದೇಶವನ್ನು ದುರ್ಬಲಗೊಳಿಸಿತ್ತು.

## 3 ಲೆಕ್ಕಪರಿಶೋಧನಾ ಉದ್ದೇಶ

***ನಗರ ಸ್ಥಳೀಯ ಸಂಸ್ಥೆಗಳಿಗೆ ತಮ್ಮ ಪ್ರಕಾರ್ಯಗಳಿಗೆ ಅನುಗುಣವಾಗಿ ಹಣಕಾಸಿನ ಸಂಪನ್ಮೂಲಗಳನ್ನು ಸಂಗ್ರಹಿಸಲು ಅವಕಾಶ ಮತ್ತು ಅಧಿಕಾರವಿದೆಯೇ?***

74ನೇ ಸಂವಿಧಾನ ತಿದ್ದುಪಡಿ ಕಾಯ್ದೆಯು ನಗರ ಸ್ಥಳೀಯ ಸಂಸ್ಥೆಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಹಣಕಾಸಿನ ವರ್ಗಾವಣೆಗೆ ಅವಕಾಶ ನೀಡುವುದರ ಜೊತೆಗೆ ತಮ್ಮ ಸ್ವಂತ ಆದಾಯವನ್ನು ವೃದ್ಧಿಸಿಕೊಳ್ಳಲು ಅಧಿಕಾರವನ್ನು ನೀಡಿತು. 2014–15ರಿಂದ 2018–19ರ ಅವಧಿಯಲ್ಲಿನ ಹಣಕಾಸಿನ ವರ್ಗಾವಣೆಗಳು ನಗರ ಸ್ಥಳೀಯ ಸಂಸ್ಥೆಗಳ ರಾಜಸ್ವದ ಶೇಕಡಾ 63 ರಷ್ಟಿದ್ದಿತು. ಆದರೆ, ರಾಜ್ಯ ಸರ್ಕಾರದ ಬದ್ಧತೆ ಹಣವನ್ನು ಬಿಡುಗಡೆ ಮಾಡುವಲ್ಲಿ ಕೊರತೆಯಿದ್ದಿತು. ರಾಜ್ಯ ಹಣಕಾಸು ಆಯೋಗಗಳ ಶಿಫಾರಸುಗಳ ಅನ್ವಯ ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಬೇಕಿದ್ದ ₹44,691 ಕೋಟಿಗಳಿಗೆ ಪ್ರತಿಯಾಗಿ 2014–15ರಿಂದ 2018–19ರ ಅವಧಿಯಲ್ಲಿ ಕೇವಲ ₹17,119 ಕೋಟಿಗಳನ್ನು ಬಿಡುಗಡೆ ಮಾಡಲಾಗಿತ್ತು. ನಗರ ಸ್ಥಳೀಯ ಸಂಸ್ಥೆಗಳ ಪರವಾಗಿ ಸಾಲಗಳ ಮರುಪಾವತಿಗೆಂದು ಅಂಗಸಂಸ್ಥೆಗಳಿಗೆ ಬಿಡುಗಡೆಯಾದ ₹12,007.65 ಕೋಟಿಗಳ ಅನುದಾನವನ್ನು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆಯಾಗಬೇಕಿದ್ದ ಮೊತ್ತದಿಂದ ಕಡಿತಗೊಳಿಸಿದ್ದು ಯಾವುದೇ ಸಾಲವನ್ನು ಪಡೆಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಕಡಿಮೆ ಅನುದಾನ ಬಿಡುಗಡೆಯಾಗುವಲ್ಲಿ ಪರಿಣಮಿಸಿತು. ಸ್ಥಿರ ಸ್ವತ್ತುಗಳ ವರ್ಗಾವಣೆಯ ಮೇಲಿನ ಶುಲ್ಕದ ರೂಪದ ನಿಯೋಜಿತ ರಾಜಸ್ವವನ್ನು 2014–18ರ ಅವಧಿಯಲ್ಲಿ ವಿಳಂಬದಿಂದ ಬಿಡುಗಡೆ ಮಾಡಲಾಗಿತ್ತು ಮತ್ತು 2018–19ನೇ ಅವಧಿಯಲ್ಲಿ ಇನ್ನೂ ಬಿಡುಗಡೆ ಮಾಡಿರಲಿಲ್ಲ.

2014–15ರಿಂದ 2018–19ರ ಅವಧಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಒಟ್ಟು ರಾಜಸ್ವಕ್ಕೆ ಸ್ವಂತ ಆದಾಯದ ಪಾಲು ಕೇವಲ ಶೇಕಡಾ 37ರಷ್ಟಿತ್ತು. ನಗರ ಸ್ಥಳೀಯ ಸಂಸ್ಥೆಗಳು ತಮ್ಮದೇ ಆದ ಆದಾಯವನ್ನು ಉತ್ಪಾದಿಸುವಲ್ಲಿ ಸ್ವಾಯತ್ತತೆಯನ್ನು ಹೊಂದಿರಲಿಲ್ಲ. ಆಸ್ತಿ ತೆರಿಗೆ ಮತ್ತು

ಜಾಹಿರಾತು ತೆರಿಗೆಗಳಂತಹ ಕೆಲವು ತೆರಿಗೆಗಳನ್ನು ಸಂಗ್ರಹಿಸುವ ಅಧಿಕಾರವು ನಗರ ಸ್ಥಳೀಯ ಸಂಸ್ಥೆಗಳ ಬಳಿಯಿದ್ದರೆ, ದರಗಳು ಮತ್ತು ಪರಿಷ್ಕರಣೆಗೆ ಸಂಬಂಧಿಸಿದ ಅಧಿಕಾರಗಳು (ಜಾಹೀರಾತು ತೆರಿಗೆ), ಸಂಗ್ರಹಣೆಯ ವಿಧಾನ (ಆಸ್ತಿ ತೆರಿಗೆ), ಮೌಲ್ಯಮಾಪನ ವಿಧಾನ, ವಿನಾಯಿತಿಗಳು, ರಿಯಾಯಿತಿಗಳು (ಆಸ್ತಿ ತೆರಿಗೆ, ಜಾಹೀರಾತು ತೆರಿಗೆ) ಇತ್ಯಾದಿಗಳು ರಾಜ್ಯ ಸರ್ಕಾರದ ವಶದಲ್ಲಿದ್ದವು. ರಾಜ್ಯ ಸರ್ಕಾರದ ಹಸ್ತಕ್ಷೇಪವು ನಗರ ಸ್ಥಳೀಯ ಸಂಸ್ಥೆಗಳನ್ನು ನಿರ್ಬಂಧಿಸಿತ್ತು. ಇದಲ್ಲದೆ, ಆಸ್ತಿಗಳ ವಿಶ್ವಾಸಾರ್ಹ ಮತ್ತು ಸಂಪೂರ್ಣ ದತ್ತಸಂಚಯದ ಅನುಪಸ್ಥಿತಿ, ಬೇಡಿಕೆ, ವಸೂಲಾತಿ ಮತ್ತು ಬಾಕಿಗಳ ವಹಿಗಳ ನಿರ್ವಹಣೆಯಲ್ಲಿನ ಕೊರತೆ, ಅಧಿಕಾರವನ್ನು ಹೊಂದಿದ್ದರೂ ನಿಯತಕಾಲಿಕವಾಗಿ ದರಗಳನ್ನು ಪರಿಷ್ಕರಿಸಲಿಲ್ಲವಾದ್ದದು, ಮುಂತಾದ ಲೋಪಗಳು ನಗರ ಸ್ಥಳೀಯ ಸಂಸ್ಥೆಗಳ ಆದಾಯದ ಉತ್ಪಾದನೆಗೆ ಅಡಚಣೆ ಉಂಟು ಮಾಡಿದ್ದವು.

ಆಯವ್ಯಯ ತಯಾರಿಕೆಯು ದೋಷಪೂರಿತ ಮತ್ತು ಅವಾಸ್ತವಿಕವಾಗಿತ್ತು. ಪ್ರತಿ ಪೌರ ಸೇವೆಯ ವೆಚ್ಚದ ವೈಜ್ಞಾನಿಕ ಅಂದಾಜು ನಡೆಸಿರಲಿಲ್ಲವಾಗಿ ಅದು ಅಂದಾಜುಗಳು ಮತ್ತು ವಾಸ್ತವಿಕತೆಗಳ ನಡುವೆ ಭಾರಿ ವ್ಯತ್ಯಾಸಗಳಿಗೆ ಕಾರಣವಾಯಿತು. ನಗರ ಸ್ಥಳೀಯ ಸಂಸ್ಥೆಗಳು ರಾಜಸ್ವ ವೆಚ್ಚದ ಕೇವಲ ಶೇಕಡಾ 56ರಷ್ಟು ಸ್ವಂತ ಸಂಪನ್ಮೂಲಗಳನ್ನು ಉತ್ಪಾದಿಸಲು ಸಮರ್ಥವಾಗಿದ್ದವು ಮತ್ತು ಲಭ್ಯವಿರುವ ನಿಧಿಯ ಸರಾಸರಿ ಶೇಕಡಾ 69ರಷ್ಟನ್ನು ಬಳಸಿಕೊಂಡಿದ್ದವು. ವೆಚ್ಚ ನಿರ್ಬಂಧಗಳಲ್ಲಿ, ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಿರುವ ಸೀಮಿತ ಆರ್ಥಿಕ ಮತ್ತು ಆಡಳಿತಾತ್ಮಕ ಅಧಿಕಾರಗಳು, ಕೇಂದ್ರ ಹಣಕಾಸು ಆಯೋಗದ ಅನುದಾನ ಹಂಚಿಕೆ ಮತ್ತು ಬಳಕೆಗೆ ರಾಜ್ಯ ಸರ್ಕಾರವು ನೀಡಿರುವ ಕಠಿಣ ಮಾರ್ಗಸೂಚಿಗಳು ಮತ್ತು ಹೆಚ್ಚಿನ ಸಂಖ್ಯೆಯ ಖಾಲಿ ಹುದ್ದೆಗಳು, ಇವುಗಳನ್ನು ಒಳಗೊಂಡಿತ್ತು.

4

## ಲೆಕ್ಕಪರಿಶೋಧನಾ ಉದ್ದೇಶ

***ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಪ್ರಕಾರ್ಯಗಳಿಗೆ ಅನುಗುಣವಾಗಿ ಮಾನವ ಸಂಪನ್ಮೂಲವನ್ನು ಸಜ್ಜುಗೊಳಿಸಲು ಮತ್ತು ಪ್ರೋತ್ಸಾಹಿಸಲು ಅಧಿಕಾರವಿದೆಯೇ?***

ಸಿಬ್ಬಂದಿ ಅಗತ್ಯತೆಯನ್ನು ನಿರ್ಣಯಿಸುವ ಮತ್ತು ಸಿಬ್ಬಂದಿಯನ್ನು ನೇಮಕ ಮಾಡುವ ಅಧಿಕಾರವನ್ನು ನಗರ ಸ್ಥಳೀಯ ಸಂಸ್ಥೆಗಳು ಹೊಂದಿರಲಿಲ್ಲ. ಈ ಅಧಿಕಾರಗಳು ರಾಜ್ಯ ಸರ್ಕಾರದ ಬಳಿಯಿದ್ದವು. ಅಗತ್ಯತೆಯ ನಿರ್ಧರಣೆಗಾಗಿ ಜನಸಂಖ್ಯೆಯನ್ನು ಮಾತ್ರ ಪರಿಗಣಿಸಲಾಯಿತು. ಇದಲ್ಲದೆ, ವರ್ಗೀಕರಣ, ನೇಮಕಾತಿ ವಿಧಾನ, ಸೇವಾ ಷರತ್ತುಗಳು, ವೇತನ ಮತ್ತು ಭತ್ಯೆಗಳ ನಿಯಂತ್ರಣ, ನಗರ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿಯ ಮೇಲೆ ಶಿಸ್ತು ಕ್ರಮವನ್ನು ಪ್ರಾರಂಭಿಸಲು, ನಗರ ಸ್ಥಳೀಯ ಸಂಸ್ಥೆಗಳಿಗೆ ಅಥವಾ ಇತರ ಸರ್ಕಾರಿ ಇಲಾಖೆಗಳಿಗೆ ಸಿಬ್ಬಂದಿಗಳನ್ನು ವರ್ಗಾಯಿಸುವ ಅಧಿಕಾರ, ಇವುಗಳನ್ನು ರಾಜ್ಯ ಸರ್ಕಾರವು ಹೊಂದಿತ್ತು.

ರಾಜ್ಯ ಸರ್ಕಾರವು ರಚಿಸಿದ ಸಿ&ಆರ್ ನಿಯಮಗಳು ಸಿಬ್ಬಂದಿಗಳ ಪ್ರಕಾರ್ಯವಾರು ಅಗತ್ಯತೆಯನ್ನು ನಿರ್ದಿಷ್ಟಪಡಿಸುವಲ್ಲಿ ವಿಫಲವಾಗಿದ್ದವು. ತತ್ಪರಿಣಾಮವಾಗಿ, ಪ್ರತಿಯೊಂದು ಹುದ್ದೆಯ ಪಾತ್ರ ಮತ್ತು ಜವಾಬ್ದಾರಿಗಳನ್ನು ಹಾಗೂ ಪ್ರತಿಯೊಂದು ಪಾತ್ರಕ್ಕೆ ಅಗತ್ಯವಿರುವ ಕೌಶಲ್ಯ ಮತ್ತು ಅರ್ಹತೆ ನಿಗದಿಪಡಿಸುವ ಇತ್ಯಾದಿಗಳಲ್ಲಿ ಪಾರದರ್ಶಕತೆ ಇರಲಿಲ್ಲ.

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಾಕಷ್ಟು ಮಾನವಬಲ ಇರಲಿಲ್ಲ ಏಕೆಂದರೆ ಎಲ್ಲಾ ಪದವೃಂದಗಳಲ್ಲಿಯೂ ಭಾರಿ ಸಂಖ್ಯೆಯ ಖಾಲಿ ಹುದ್ದೆಗಳಿದ್ದಿತು ಮತ್ತು ಅದು ಸೇವೆಗಳ ಪರಿಣಾಮಕಾರಿ ನಿರ್ವಹಣೆಯನ್ನು ಬಾಧಿಸಿತ್ತು. ಮಾನವಬಲದ ಸ್ಥಿತಿಯ ಬಗ್ಗೆ ರಾಜ್ಯ ಸರ್ಕಾರಕ್ಕೆ ಅರಿವಿದ್ದರೂ, ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅದು ಕ್ರಮ ಕೈಗೊಂಡಿರಲಿಲ್ಲ. ಇದಲ್ಲದೆ, ಕೆಎಮ್ಎಎಸ್–ರಹಿತ 181 ವ್ಯಕ್ತಿಗಳು ಪೌರಸಂಸ್ಥೆ ಆಯುಕ್ತರು/ಮುಖ್ಯಾಧಿಕಾರಿಯ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದರು, ಇದು ಶಾಸನಬದ್ಧ ನಿಬಂಧನೆಗಳ ಉಲ್ಲಂಘನೆಯಾಗಿತ್ತು. ಇದಕ್ಕೆ ವ್ಯತಿರಿಕ್ತವಾಗಿ, 21 ಕೆಎಮ್ಎಎಸ್ ಅಧಿಕಾರಿಗಳು ಕಂದಾಯ ಅಧಿಕಾರಿಗಳ/ವ್ಯವಸ್ಥಾಪಕರ/ವರಿಷ್ಠ ಆರೋಗ್ಯ ನಿರೀಕ್ಷಕರ ಕರ್ತವ್ಯಗಳನ್ನು ನಿಭಾಯಿಸುತ್ತಿದ್ದರು. ಇದು ನಗರ ಸ್ಥಳೀಯ ಸಂಸ್ಥೆಗಳಿಂದ ಸೇವಾ ನಿರ್ವಹಣೆಯ ಮೇಲೆ ಪರಿಣಾಮ ಬೀರುತ್ತದೆ. ಸಾಮರ್ಥ್ಯ ನಿರ್ಮಾಣದಲ್ಲಿಯೂ ಸಹ ಕೊರತೆಯಿದ್ದಿತು.

**ಬೆಂಗಳೂರು** **(ಇ.ಪಿ.ನಿವೇದಿತ)**
**ದಿನಾಂಕ** **ಪ್ರಧಾನ ಮಹಾಲೇಖಾಪಾಲರು**
**ಲೆಕ್ಕಪರಿಶೋಧನೆ–I**
**ಕರ್ನಾಟಕ**


**ಮೇಲು ಸಹಿ ಮಾಡಿದೆ**


**ನವದೆಹಲಿ** **(ರಾಜೀವ್ ಮೆಹ್ರಿಷಿ)**
**ದಿನಾಂಕ** **ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**


# ಅನುಬಂಧ–1.1

(ಉಲ್ಲೇಖ:ಕಂಡಿಕೆ: 1.4, ಪುಟ 2)

**ರಾಜ್ಯದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಸಂಘಟನಾ ರಚನೆ**



## ಅನುಬಂಧ–1.2

(ಉಲ್ಲೇಖ:ಕಂಡಿಕೆ: 1.4, ಪುಟ 2)

### ಅಂಗಸಂಸ್ಥೆಗಳ ಪಟ್ಟಿ ಮತ್ತು ಅವುಗಳ ಕಾರ್ಯಗಳು

| ಕ್ರಮ ಸಂಖ್ಯೆ | ಅಂಗಸಂಸ್ಥೆ | ಕಾರ್ಯಗಳು |
|---|---|---|
| 1 | **ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ** | ಆಗಸ್ಟ್ 1974ರಲ್ಲಿ ಸ್ಥಾಪನೆಯಾಯಿತು. ಬೆಂಗಳೂರು ನಗರವನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ನಗರ ಪ್ರದೇಶಗಳಿಗೆ ನೀರು ಸರಬರಾಜು ಮತ್ತು ಒಳಚರಂಡಿ ಸೌಲಭ್ಯಗಳನ್ನು ಒದಗಿಸುವ ಜವಾಬ್ದಾರಿ ಹೊಂದಿದೆ. ಎಲ್ಲೆಲ್ಲಿ ವಹಿಸಿದ್ದರೋ ಅಲ್ಲಲ್ಲಿ ಅದು ಕಾರ್ಯಾಚರಣೆ ಮತ್ತು ನಿರ್ವಹಣೆಗೆಗೂ ಸಹ ಜವಾಬ್ದಾರಯಾಗಿದೆ. |
| 2 | **ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ** | ನವೆಂಬರ್ 1993 ರಲ್ಲಿ ಸ್ಥಾಪನೆಯಾಯಿತು. ರಾಜ್ಯದ ನಗರ ಪ್ರದೇಶಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ತಯಾರಿಸಲು, ರೂಪಿಸಲು ಮತ್ತು ಕಾರ್ಯಗತಗೊಳಿಸಲು ಮತ್ತು ತಾಂತ್ರಿಕ ಮತ್ತು ಆರ್ಥಿಕ ಸಲಹೆಯನ್ನು ಒದಗಿಸುವ ಜವಾಬ್ದಾರಿ ಹೊಂದಿದೆ. |
| 3 | **ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ** | ಜುಲೈ 1975ರಲ್ಲಿ ಸ್ಥಾಪನೆಯಾಯಿತು. ರಾಜ್ಯದಲ್ಲಿ ಕೊಳೆಗೇರಿ ನಿವಾಸಿಗಳ ಸುಧಾರಣೆ/ತೆರವು/ ಪುನರ್ವಸತಿಗಳ ಜವಾಬ್ದಾರಿಯಾಗಿದೆ. |
| 4 | **ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ** | ಸೆಪ್ಟೆಂಬರ್ 1964 ರಲ್ಲಿ ಸ್ಥಾಪನೆಯಾಯಿತು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶದ ವ್ಯಾಪ್ತಿಯಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ವಿಲೇವಾರಿಗೆ ಜವಾಬ್ದಾರಿಯಾಗಿದೆ. |
| 5 | **ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ** | 1976 ರಲ್ಲಿ ಸ್ಥಾಪನೆಯಾಯಿತು. ಬೆಂಗಳೂರು ಮಹಾನಗರಕ್ಕಾಗಿ ಸಮಗ್ರ ಅಭಿವೃದ್ಧಿ ಯೋಜನೆ ಮತ್ತು ಮೂಲಸೌಕರ್ಯಗಳ ಅಭಿವೃದ್ಧಿ, ಅಭಿವೃದ್ಧಿ–ಸಂಬಂಧಿತ ನಿವೇಶನಗಳು ಮತ್ತು ಸೇವೆಗಳನ್ನು ಒದಗಿಸುವುದು, ಬೆಂಗಳೂರಿನಲ್ಲಿ ಹಿಂದುಳಿದ ನಾಗರಿಕರ ವಸತಿ ಅಗತ್ಯಗಳನ್ನು ಒದಗಿಸುವುದು. |
| 6 | **ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ** | 2007ರಲ್ಲಿ ರಚಿತವಾಯಿತು. ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಗ್ರಾಮೀಣ ಜಿಲ್ಲೆ ಮತ್ತು ರಾಮನಗರ ಜಿಲ್ಲೆಯನ್ನು ಒಳಗೊಂಡಿರುವ ಬೆಂಗಳೂರು ಮಹಾನಗರ (ಬಿಎಂಆರ್) ವ್ಯಾಪ್ತಿಯ ಪ್ರದೇಶಗಳ ಯೋಜನೆ, ಸಮನ್ವಯ ಮತ್ತು ಮೇಲ್ವಿಚಾರಣೆಯ ಜವಾಬ್ದಾರಿ ಹೊಂದಿದೆ. |
| 7 | **ರಾಜ್ಯ ರಸ್ತೆ ಸಾರಿಗೆ ನಿಗಮಗಳು (ಕೆಎಸ್‌ಆರ್‌ಟಿಸಿ, ಎನ್‌ಡಬ್ಲ್ಯೂಕೆಆರ್‌ಟಿಸಿ, ಎನ್‌ಇಕೆಆರ್‌ಟಿಸಿ, ಬಿಎಂಟಿಸಿ)** | ರಾಜ್ಯ ರಸ್ತೆ ನಿಗಮವನ್ನು ಆಗಸ್ಟ್ 1961ರಲ್ಲಿ ಸ್ಥಾಪಿಸಲಾಯಿತು ಮತ್ತು ನಂತರ ಅದನ್ನು (ಫೆಬ್ರವರಿ 1997) ನಾಲ್ಕು ಪ್ರತ್ಯೇಕ ನಿಗಮಗಳಾಗಿ ವಿಭಜಿಸಲಾಯಿತು. ಈ ನಿಗಮಗಳು ರಾಜ್ಯ ಮತ್ತು ನಗರಗಳಲ್ಲಿ ಪ್ರಯಾಣಿಸುವ ಸಾರ್ವಜನಿಕರಿಗೆ ಗುಣಮಟ್ಟದ ಸಾರಿಗೆ ಸೇವೆಯನ್ನು ಒದಗಿಸುವ ಜವಾಬ್ದಾರಿಯನ್ನು ಹೊಂದಿವೆ. |
| 8 | **ನಗರಾಭಿವೃದ್ಧಿ ಪ್ರಾಧಿಕಾರಗಳು** | ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆ 1987ರ ಅಡಿಯಲ್ಲಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಸ್ಥಾಪಿಸಲಾದ ನಗರಾಭಿವೃದ್ಧಿ ಪ್ರಾಧಿಕಾರಗಳು ನಗರ ಪ್ರದೇಶದ ಅಭಿವೃದ್ಧಿಯನ್ನು ಯೋಜಿಸುವ ಮತ್ತು ಉತ್ತೇಜಿಸುವ ಮತ್ತು ಭದ್ರತೆಯ ಜವಾಬ್ದಾರಿಯನ್ನು ಹೊಂದಿವೆ ಮತ್ತು ಈ ಉದ್ದೇಶಗಳಿಗಾಗಿ ಪ್ರಾಧಿಕಾರಗಳು ಅದರ ವ್ಯಾಪ್ತಿಯಲ್ಲಿರುವ ನಗರ ಪ್ರದೇಶದ ಒಳಗೆ ಅಥವಾ ಹೊರಗೆ ಚರ ಮತ್ತು ಸ್ಥಿರ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳುವ, ನಿರ್ವಹಿಸುವ ಮತ್ತು ವಿಲೇವಾರಿ ಮಾಡುವ ಅಧಿಕಾರ, ಕಟ್ಟಡಗಳು, ಇಂಜಿನಿಯರಿಂಗ್ ಮತ್ತು ಇತರ ಕಾರ್ಯಾಚರಣೆಗಳನ್ನು ಕೈಗೊಳ್ಳಲು ಮತ್ತು ಸಾಮಾನ್ಯವಾಗಿ ಅಂತಹ ಅಭಿವೃದ್ಧಿಯ ಉದ್ದೇಶಕ್ಕಾಗಿ ಮತ್ತು ಅದಕ್ಕೆ ಪ್ರಾಸಂಗಿಕವಾದ ಉದ್ದೇಶಗಳಿಗಾಗಿ ಅಗತ್ಯವಿರುವ ಅಥವಾ ಸೂಕ್ತವಾದ ಎಲ್ಲ ಕೆಲಸಗಳನ್ನು ಮಾಡಲು. |
| 9 | **ನಗರ ಯೋಜನಾ ಅಧಿಕಾರಿಗಳು** | ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961ರ ಅಡಿಯಲ್ಲಿ ಸ್ಥಾಪಿಸಲಾದ ನಗರ ಯೋಜನಾ ಪ್ರಾಧಿಕಾರಗಳು ನಗರ ಮತ್ತು ಗ್ರಾಮೀಣ ವಸಾಹತುಗಳಿಗೆ ಮಾಸ್ಟರ್ ಪ್ಲ್ಯಾನ್‌ಗಳನ್ನು ಸಿದ್ಧಪಡಿಸುವುದು, ಬಡಾವಣೆಗಳನ್ನು ರೂಪಿಸಲು ಅನುಮೋದನೆ, ನಗರಗಳು ಮತ್ತು ಪಟ್ಟಣಗಳ ಕ್ರಮಬದ್ಧ ಅಭಿವೃದ್ಧಿಗೆ ವಿವಿಧ ಸರ್ಕಾರಿ ಇಲಾಖೆಗಳಿಗೆ/ಸ್ಥಳೀಯ ಸಂಸ್ಥೆಗಳಿಗೆ ತಾಂತ್ರಿಕ ನೆರವು ನೀಡುವುದು ಇತ್ಯಾದಿಗಳಿಗೆ ಜವಾಬ್ದಾರಿಯಾಗಿವೆ. |
| 10 | **ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ** | 1966ರಲ್ಲಿ ಸ್ಥಾಪನೆಯಾಯಿತು. ಕೈಗಾರಿಕೆಗಳ ತ್ವರಿತ ಮತ್ತು ಕ್ರಮಬದ್ಧವಾದ ಸ್ಥಾಪನೆ ಮತ್ತು ಅಭಿವೃದ್ಧಿಯನ್ನು ಉತ್ತೇಜಿಸುವ ಮತ್ತು ಕರ್ನಾಟಕದ ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕಾ ಮೂಲಸೌಕರ್ಯ ಮತ್ತು ಇತರ ಸೌಲಭ್ಯಗಳನ್ನು ಒದಗಿಸುವ ಜವಾಬ್ದಾರಿ ಹೊಂದಿದೆ. |

ಆಧಾರ: ಅಂಗಸಂಸ್ಥೆಗಳು ಒದಗಿಸಿದ ಮಾಹಿತಿ

## ಅನುಬಂಧ–2.1

(ಉಲ್ಲೇಖ:ಕಂಡಿಕೆ: 2.3, ಪುಟ 4)

**ಆಯ್ಕೆ ಮಾಡಿದ ನಗರ ಸ್ಥಳೀಯ ಸಂಸ್ಥೆಗಳ ಪಟ್ಟಿ**

| ಕ್ರಮ ಸಂಖ್ಯೆ | ವಿಭಾಗ | ಜಿಲ್ಲೆ | ಮಾದರಿಗಾಗಿ ಆಯ್ಕೆ ಮಾಡಿದ ಘಟಕ | | | |
|---|---|---|---|---|---|---|
| | | | ನಗರಪಾಲಿಕೆ | ನಗರಸಭೆ | ಪುರಸಭೆ | ಪಟ್ಟಣ ಪಂಚಾಯಿತಿ |
| 1 | ಬೆಳಗಾವಿ | ಬಾಗಲಕೋಟೆ | | ಬಾಗಲಕೋಟೆ | | |
| 2 | | ಬೆಳಗಾವಿ | | ನಿಪ್ಪಾಣಿ | ಸಂಕೇಶ್ವರ, ಬೈಲಹೊಂಗಲ | |
| 3 | | ಧಾರವಾಡ | ಹುಬ್ಬಳ್ಳಿ–ಧಾರವಾಡ | | | |
| 4 | | ಗದಗ | | | ಲಕ್ಷ್ಮೇಶ್ವರ | |
| 5 | | ಹಾವೇರಿ | | ರಾಣಿಬೆನ್ನೂರು | ಹಾನಗಲ್, ಸವಣೂರು | ಹಿರೇಕೆರೂರು |
| 6 | | ಉತ್ತರ ಕನ್ನಡ | | ಕಾರವಾರ | ಭಟ್ಕಳ | |
| 7 | | ವಿಜಯಪುರ | | | ಬಸವನ ಬಾಗೇವಾಡಿ | |
| 8 | ಬೆಂಗಳೂರು | ಬೆಂಗಳೂರು ಗ್ರಾಮಾಂತರ | | ದೊಡ್ಡಬಳ್ಳಾಪುರ | ವಿಜಯಪುರ | |
| 9 | | ಬೆಂಗಳೂರು ನಗರ | | | | |
| 10 | | ಚಿಕ್ಕಬಳ್ಳಾಪುರ | | | | |
| 11 | | ಚಿತ್ರದುರ್ಗ | | ಚಿತ್ರದುರ್ಗ | | |
| 12 | | ದಾವಣಗೆರೆ | ದಾವಣಗೆರೆ | | ಹರಪನಹಳ್ಳಿ | |
| 13 | | ಕೋಲಾರ | | ಕೋಲಾರ | ಶ್ರೀನಿವಾಸಪುರ | |
| 14 | | ರಾಮನಗರ | | ಚನ್ನಪಟ್ಟಣ | | |
| 15 | | ಶಿವಮೊಗ್ಗ | | ಭದ್ರಾವತಿ | | ತೀರ್ಥಹಳ್ಳಿ |
| 16 | | ತುಮಕೂರು | | ತಿಪಟೂರು | ಮಧುಗಿರಿ | |
| 17 | ಕಲಬುರಗಿ | ಬಳ್ಳಾರಿ | | | ಕಂಪ್ಲಿ | ಕಮಲಾಪುರ |
| 18 | | ಬೀದರ್ | | ಬೀದರ್ | | |
| 19 | | ಕಲಬುರಗಿ | ಕಲಬುರಗಿ | ಶಹಾಬಾದ್ | ಆಲಂದ್, ವಾಡಿ | |
| 20 | | ಕೊಪ್ಪಳ | | ಗಂಗಾವತಿ, ಕೊಪ್ಪಳ | | |
| 21 | | ರಾಯಚೂರು | | | ಮಾನ್ವಿ | |

| ಕ್ರಮ ಸಂಖ್ಯೆ | ವಿಭಾಗ | ಜಿಲ್ಲೆ | ಮಾದರಿಗಾಗಿ ಆಯ್ಕೆ ಮಾಡಿದ ಘಟಕ | | | |
|---|---|---|---|---|---|---|
| | | | ನಗರಪಾಲಿಕೆ | ನಗರಸಭೆ | ಪುರಸಭೆ | ಪಟ್ಟಣ ಪಂಚಾಯಿತಿ |
| 22 | | ಯಾದಗಿರ್ | | | | |
| 23 | ಮೈಸೂರು | ಚಾಮರಾಜನಗರ | | ಕೊಳ್ಳೇಗಾಲ | | |
| 24 | | ಚಿಕ್ಕಮಗಳೂರು | | | | ಮೂಡಿಗೆರೆ |
| 25 | | ದಕ್ಷಿಣ ಕನ್ನಡ | ಮಂಗಳೂರು | | | |
| 26 | | ಹಾಸನ | | ಅರಸೀಕೆರೆ | ಸಕಲೇಶಪುರ | |
| 27 | | ಕೊಡಗು | | | | |
| 28 | | ಮಂಡ್ಯ | | ಮಂಡ್ಯ | ಮದ್ದೂರು | |
| 29 | | ಮೈಸೂರು | | | ಬನ್ನೂರು | |
| 30 | | ಉಡುಪಿ | | | ಕುಂದಾಪುರ | |

## ಅನುಬಂಧ–4.1

(ಉಲ್ಲೇಖ:ಕಂಡಿಕೆ: 4.2.6.2, ಪುಟ 25)

**ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸದಿರುವುದು**

| ಕ್ರಮ ಸಂಖ್ಯೆ | ಶಿಫಾರಸ್ಸುಗಳು | ಸರ್ಕಾರವು ತೆಗೆದುಕೊಂಡ ಕ್ರಮ |
|---|---|---|
| ನಾಲ್ಕನೇ ಹಣಕಾಸು ಆಯೋಗ | | |
| 1 | ಪೌರಸಂಸ್ಥೆಗಳ ವೆಚ್ಚದ ಅಧಿಕಾರಕ್ಕೆ ಸಂಬಂಧಿಸಿದ ನಿಯಮಗಳನ್ನು ಅವುಗಳ ಕ್ರಿಯಾತ್ಮಕ ಅಗತ್ಯತೆಗಳಿಗೆ ಅನುಗುಣವಾಗಿ ನಿಯಮಿತವಾಗಿ ಪರಿಷ್ಕರಿಸಬೇಕಾದ ಅಗತ್ಯವಿದೆ | ಕಾರ್ಯಗಳಿಗೆ ಸಂಬಂಧಿಸಿದಂತೆ ಅಧಿಕಾರಗಳ ನಿಯೋಜನೆಯನ್ನು ಪರಿಷ್ಕರಿಸಿಲ್ಲ |
| 2 | ಉಪದ್ರವ ತಡೆಗಟ್ಟಲು ಹಾಗೂ ಜಾರಿಗೊಳಿಸುವ ಕಾರ್ಯಗಳಿಗಾಗಿ ಅಧಿನಿಯಮಗಳ ಅಡಿಯಲ್ಲಿ ಒದಗಿಸಲಾದ ದಂಡಗಳು ಮತ್ತು ಶುಲ್ಕಗಳಿಗೆ ಸಂಬಂಧಿಸಿದ ನಿಯಮಗಳು ಬಹಳ ಕಡಿಮೆಯಿವೆ ಮತ್ತು ದಶಕಗಳಿಂದ ಪರಿಷ್ಕರಿಸಿಲ್ಲ. | ದಂಡ ಮತ್ತು ಶುಲ್ಕಗಳಿಗೆ ಸಂಬಂಧಿಸಿದ ನಿಯಮಗಳನ್ನು ಪರಿಷ್ಕರಿಸಲಾಗಿಲ್ಲ |
| 3 | ಐಐಎಂಬಿ, ಐಐಎಸ್ಸಿ, ಐಐಟಿ ಮತ್ತು ಇತರ ಪ್ರಮುಖ ಸಂಸ್ಥೆಗಳ ಸಹಕಾರದೊಂದಿಗೆ ನಗರ ನಿರ್ವಹಣೆಗೆ ನಗರ ವ್ಯವಸ್ಥಾಪಕರು/ನಗರ ತಜ್ಞರಿಗೆ ತರಬೇತಿ ನೀಡಲು ಒಂದು ಸಂಸ್ಥೆಯನ್ನು ಸ್ಥಾಪಿಸಬೇಕು. | ಇನ್ನೂ ರಚನೆಯಾಗಬೇಕಿದೆ |
| 4 | ಪುರಸಭೆಯ ವ್ಯವಹಾರಗಳ ನಿರ್ಣಾಯಕ ವಿಷಯಗಳ ಬಗ್ಗೆ ಸಂಬಂಧಪಟ್ಟ ರಾಜ್ಯ/ ಇಲಾಖೆಗೆ ಸಲಹೆ ನೀಡಲು ರಾಜ್ಯ ಪೌರ ಸಲಹಾ ಸಮಿತಿಯನ್ನು ರಚಿಸಬೇಕು. | ರಾಜ್ಯ ಪೌರ ಸಲಹಾ ಸಮಿತಿಯನ್ನು ರಚಿಸಲಾಗಿಲ್ಲ |
| 5 | ಜಿಲ್ಲೆಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಪಿಪಿಪಿ ಸಲಹೆಗಾರರಾಗಿ ಕಾರ್ಯನಿರ್ವಹಿಸಲು ಡಿಯುಡಿಸಿ ಕಚೇರಿಯನ್ನು ಪ್ರೋತ್ಸಾಹಿಸಬೇಕು ಅಥವಾ ಬೇರೆ ರೀತಿಯಲ್ಲಿ ಹೇಳಬೇಕೆಂದರೆ ಬೃಹತ್ ಸಂಸ್ಥೆಗಳೊಂದಿಗೆ ಪ್ರಾರಂಭಿಸಬೇಕು. | ಈ ನಿಟ್ಟಿನಲ್ಲಿ ಸರ್ಕಾರ ಇನ್ನೂ ಆದೇಶ ಹೊರಡಿಸಬೇಕಿದೆ |
| ಮೂರನೇ ಹಣಕಾಸು ಆಯೋಗ | | |
| 6 | ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಮೇಲೆ ಅಧಿಕಾರ ಹೊಂದಿರುವ ಸಾರ್ವಜನಿಕ ತನಿಖಾಧಿಕಾರಿ ವ್ಯವಸ್ಥೆಯನ್ನು ಕರ್ನಾಟಕದಲ್ಲಿ ಪರಿಚಯಿಸಬಹುದು. | ನೇಮಕಗೊಂಡಿಲ್ಲ. ಲೋಕಾಯುಕ್ತರು ಕರ್ನಾಟಕದಲ್ಲಿ ಸಾರ್ವಜನಿಕ ತನಿಖಾಧಿಕಾರಿ ಆಗಿ ಕಾರ್ಯ ನಿರ್ವಹಿಸುತ್ತಾರೆ |
| 7 | ಬೀದಿ ದೀಪಗಳಿಗೆ ಪರ್ಯಾಯ ಶಕ್ತಿಯ ಮೂಲಗಳನ್ನು (ಸೌರಶಕ್ತಿ, ಪವನ ಶಕ್ತಿ) ಬಳಸಬಹುದು | ನಗರ ಸ್ಥಳೀಯ ಸಂಸ್ಥೆಗಳು ಇನ್ನೂ ಕ್ರಮ ತೆಗೆದುಕೊಳ್ಳಬೇಕಿದೆ |
| 8 | ಎಲ್ಲಾ ನಗರ ಪ್ರದೇಶಗಳಿಗೆ ಒಳಚರಂಡಿ ವ್ಯವಸ್ಥೆ ಒದಗಿಸಲು ಸರ್ಕಾರ ಹೆಚ್ಚುವರಿ ಅನುದಾನ ನೀಡಬೇಕು. | ಒಳಚರಂಡಿಗಾಗಿ ಪ್ರತ್ಯೇಕ ನಿಧಿಯನ್ನು ಸರ್ಕಾರವು ನೀಡಿಲ್ಲ. |
| ಎರಡನೇ ಹಣಕಾಸು ಆಯೋಗ | | |

| ಕ್ರಮ ಸಂಖ್ಯೆ | ಶಿಫಾರಸ್ಸುಗಳು | ಸರ್ಕಾರವು ತೆಗೆದುಕೊಂಡ ಕ್ರಮ |
|---|---|---|
| 9 | ಬಾಕಿ ಇರುವ ಸಾಲ ಕಂತುಗಳ ಬಡ್ಡಿಯನ್ನು ರಾಜ್ಯ ಸರ್ಕಾರವು ಸಹಾಯಧನವಾಗಿ ನೀಡಬೇಕು. ಇದು ನಗರ ಸ್ಥಳೀಯ ಸಂಸ್ಥೆಗಳಿಗೆ ಶಿಫಾರಸು ಮಾಡಲಾದ ಹಂಚಿಕೆಯ ಹೊರಗೆ ಇರಬೇಕು. ಸಾಲದ ಕಂತುಗಳನ್ನು ನಿಯಮಿತವಾಗಿ ಮರುಪಾವತಿ ಮಾಡುವ ಸಂಸ್ಥೆಗಳಿಗೆ ಮಾತ್ರ ಬಡ್ಡಿಗೆ ಸಹಾಯಧನ ನೀಡಬೇಕು. | ಸಾಲ ಮರುಪಾವತಿಯನ್ನು ಹಂಚಿಕೆಯ ಭಾಗವಾಗಿ ಸೇರಿಸಲಾಗಿದೆ. |
| 10 | ಸರ್ಕಾರವು ಮಾನವ ಸಂಪನ್ಮೂಲ ನಿರ್ವಹಣಾ ನೀತಿಯನ್ನು ರೂಪಿಸಬೇಕು ಮತ್ತು ಇದರಲ್ಲಿ ನಿಯಮಿತವಾಗಿ ನೇಮಕಾತಿ ಮತ್ತು ಸಿಬ್ಬಂದಿಗಳ ತರಬೇತಿ ಇರಬೇಕು. ಅರ್ಹರಲ್ಲದ ಮತ್ತು ಕನಿಷ್ಠ ಪದವೃಂದದ ಅಧಿಕಾರಿಗಳಿಗೆ ಪುರಸಭೆಗಳ ಮತ್ತು ಪಟ್ಟಣ ಪಂಚಾಯಿತಿಗಳ ಮುಖ್ಯಾಧಿಕಾರಿಗಳ ಹುದ್ದೆಗಳ ಉಸ್ತುವಾರಿ ವಹಿಸಲಾಗಿದೆ. ಈ ವ್ಯಕ್ತಿಗಳನ್ನು ಅರ್ಹ ವ್ಯಕ್ತಿಗಳಿಂದ ಬದಲಾಯಿಸಬೇಕು. | ಮಾನವ ಸಂಪನ್ಮೂಲ ನಿರ್ವಹಣಾ ನೀತಿಯನ್ನು ನಿಗದಿಪಡಿಸಿಲ್ಲ. |
| | ಮೊದಲನೇ ಹಣಕಾಸು ಆಯೋಗ | |
| 11 | ನಗರ ಮತ್ತು ಗ್ರಾಮೀಣ ಪ್ರದೇಶಗಳಿಗೆರಡಕ್ಕೂ ಸಾಮಾನ್ಯ ಮೌಲ್ಯಮಾಪನ ಪ್ರಾಧಿಕಾರದ ರಚನೆ. | ರಚಿಸಿಲ್ಲ |
| 12 | ಕೆಯುಡಬ್ಲ್ಯುಎಸ್‌ಡಿಬಿಗೆ ಕೇವಲ ನಿರ್ಮಾಣ ಮತ್ತು ಸಗಟು ಪ್ರಮಾಣದ ನೀರಿನ ಸರಬರಾಜನ್ನು ವಹಿಸಬೇಕು ಮತ್ತು ನಗರ ಸ್ಥಳೀಯ ಸಂಸ್ಥೆಗಳು ನೀರಿನ ವಿತರಣೆ ಮತ್ತು ದರಗಳ ಸಂಗ್ರಹಣದ ಉಸ್ತುವಾರಿ ವಹಿಸಬೇಕು. | ಕೆಲವು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೆಯುಡಬ್ಲ್ಯುಎಸ್‌ಡಿಬಿ ಕಾರ್ಯಾಚರಣೆ ಮತ್ತು ನಿರ್ವಹಣೆಯ ಉಸ್ತುವಾರಿಯಾಗಿದೆ |
| 13 | ಬೆಂಗಳೂರು ಹೊರತುಪಡಿಸಿ ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಕುಡಿಯುವ ನೀರು ಸರಬರಾಜನ್ನು ರಾಜ್ಯ ಮಟ್ಟದಲ್ಲಿ ಒಂದು ಇಲಾಖೆಗೆ ವಹಿಸಬಹುದು. ಕೆಯುಡಬ್ಲ್ಯುಎಸ್&ಡಿಬಿಗೆ ಸಮಗ್ರ ನೀರು ಸರಬರಾಜು ಕಾರ್ಯಕ್ರಮದ ಅನುಷ್ಠಾನದ ಜವಾಬ್ದಾರಿಯನ್ನು ವಹಿಸಬಹುದು. | ನಗರ ಮತ್ತು ಗ್ರಾಮೀಣ ಪ್ರದೇಶಗಳಿಗೆ ಎರಡು ಪ್ರತ್ಯೇಕ ಏಜೆನ್ಸಿಗಳಿವೆ.<br>ಕೆಆರ್‌ಡಬ್ಲ್ಯು&ಎಸ್‌ಎ ಮತ್ತು ಕೆಯುಡಬ್ಲ್ಯುಎಸ್&ಡಿಬಿ |
| 14 | ಚುನಾಯಿತ ನಗರ ಸ್ಥಳೀಯ ಸಂಸ್ಥೆಗಳೊಂದಿಗೆ ನಗರ ನಾಗರಿಕ ಸೇವಾ ಸಂಸ್ಥೆಗಳ ಏಕೀಕರಣ. | ಮಾಡಿಲ್ಲ |
| 15 | ಮಹಾನಗರ ಪಾಲಿಕೆಗಳು ಮತ್ತು ಇತರೆ ಪೌರ ಸಂಸ್ಥೆಗಳಿಗೆ ಸಂಬಂಧಿಸಿದ ಒಂದು ಸಾಮಾನ್ಯ ಶಾಸನವನ್ನು ಸಂವಿಧಾನದ 74ನೇ ತಿದ್ದುಪಡಿಯ ನಿಬಂಧನೆಗಳೊಂದಿಗೆ ಸರ್ಕಾರವು ಜಾರಿಗೆ ತರಬಹುದು. ಇದಕ್ಕೆ 'ಕರ್ನಾಟಕ ನಗರ ಸ್ಥಳೀಯ ಸಂಸ್ಥೆಗಳ ಕಾಯಿದೆ" ಎಂಬ ಶೀರ್ಷಿಕೆ ಇಡಬಹುದು. | ಮಹಾನಗರ ಪಾಲಿಕೆಗಳು ಮತ್ತು ಇತರೆ ಪೌರ ಸಂಸ್ಥೆಗಳಿಗೆ ಒಂದೇ ಅಧಿನಿಯಮ ಜಾರಿ ಮಾಡಿಲ್ಲ |
| 16 | ಗ್ರಂಥಾಲಯ ಉಪಕರ, ಬಿಕ್ಷಾಟನೆ ಉಪಕರ, ಶಿಕ್ಷಣ ಉಪಕರ, ಆರೋಗ್ಯ ಉಪಕರ ಮತ್ತು ನೀರಿನ ಉಪಕರ ಮುಂತಾದ ಉಪಕರಗಳನ್ನು ರದ್ದುಪಡಿಸಬೇಕು | ರದ್ದುಗೊಳಿಸಿಲ್ಲ |

| ಕ್ರಮ ಸಂಖ್ಯೆ | ಶಿಫಾರಸ್ಸುಗಳು | ಸರ್ಕಾರವು ತೆಗೆದುಕೊಂಡ ಕ್ರಮ |
|---|---|---|
| 17 | ದೊಡ್ಡ ನಗರಗಳು ಮತ್ತು ಪಟ್ಟಣಗಳಲ್ಲಿ ಸಾಕಷ್ಟು ಆದಾಯವನ್ನು ತರುವ ಸಾಧ್ಯತೆಯಿರುವುದರಿಂದ ಎಲ್ಲಾ ವಾಣಿಜ್ಯ ಪ್ರದೇಶಗಳಲ್ಲಿ ಮೋಟಾರು ವಾಹನಗಳಿಗೆ ಪಾರ್ಕಿಂಗ್ ಶುಲ್ಕವನ್ನು ವಿಧಿಸಬೇಕು. ಇದಲ್ಲದೆ, ನಗರ ಸ್ಥಳೀಯ ಸಂಸ್ಥೆಗಳು ಕೆಟ್ಟುನಿಂತಿರುವ ವಾಹನಗಳಿಗೆ 'ಎಳೆದುಕೊಂಡು ಹೋಗುವ ಸೇವೆಯನ್ನು' ಒದಗಿಸಬೇಕು ಮತ್ತು ಅದಕ್ಕೆ ಶುಲ್ಕ ವಿಧಿಸಬೇಕು. | ಅಂತಹ ಶುಲ್ಕವನ್ನು ವಿಧಿಸಲು ಸರ್ಕಾರ ಅಥವಾ ನಗರ ಸ್ಥಳೀಯ ಸಂಸ್ಥೆಗಳು ಯಾವುದೇ ಕ್ರಮ ತೆಗೆದುಕೊಂಡಿಲ್ಲ. |
| 18 | ನಗರವಾಸಿಗಳಿಗೆ ಸಲ್ಲಿಸುವ ಸೇವೆಗಳಿಗಾಗಿ ನೀರಿನ ಸಂಪೂರ್ಣ ವೆಚ್ಚವನ್ನು ಶುಲ್ಕವಾಗಿ ವಿಧಿಸಬೇಕು. | ಸಂಪೂರ್ಣ ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚವನ್ನು ವಸೂಲು ಮಾಡಿಲ್ಲ |
| 19 | ಬಿಡಿಎ ಸೇರಿದಂತೆ ಅಸ್ತಿತ್ವದಲ್ಲಿರುವ ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ಆಯಾ ಚುನಾಯಿತ ಪೌರಸಂಸ್ಥೆಗಳ ಅಡಿಯಲ್ಲಿ ತರಬೇಕು. ಕೊಳೆಗೇರಿ ಸುಧಾರಣೆಯನ್ನು ಸಹ ಈ ಪೌರಸಂಸ್ಥೆಗಳ ಅಡಿಯಲ್ಲಿ ತರಬೇಕು. | ನಗರ ಸ್ಥಳೀಯ ಸಂಸ್ಥೆಗಳ ಅಡಿಯಲ್ಲಿ ತರಲು ಆಯಾ ಅಧಿನಿಯಮಗಳನ್ನು ಸರ್ಕಾರ ತಿದ್ದುಪಡಿ ಮಾಡಿಲ್ಲ, |
| 20 | ಅಸ್ತಿತ್ವದಲ್ಲಿರುವ ಪಟ್ಟಣ ಯೋಜನಾ ಘಟಕಗಳನ್ನು ಪೌರಸಂಸ್ಥೆಗಳಿಗೆ ವರ್ಗಾಯಿಸಬಹುದು. ನಗರ ಅರಣ್ಯೀಕರಣದಂತಹ ಕಾರ್ಯಗಳನ್ನು ಸಹ ಚುನಾಯಿತ ಪೌರಸಂಸ್ಥೆಗಳಿಗೆ ವಹಿಸಬೇಕು. | ಟಿಪಿಎಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ವರ್ಗಾವಣೆ ಮಾಡಿಲ್ಲ. |
| 21 | ಪೌರಾಡಳಿತ ನಿರ್ದೇಶನಾಲಯವನ್ನು ರದ್ದುಗೊಳಿಸಲು ಆಯೋಗ ಶಿಫಾರಸು ಮಾಡಿದೆ. | ಪೌರಾಡಳಿತ ನಿರ್ದೇಶನಾಲಯವನ್ನು ರದ್ದು ಮಾಡಿಲ್ಲ. |
| 22 | ಪೌರ ನೌಕರರ ಸೇವಾ ಷರತ್ತುಗಳಿಗೆ ಸಂಬಂಧಿಸಿದ ಎಲ್ಲಾ ನಿರ್ಧಾರಗಳನ್ನು ಆಯಾ ನಗರ ಸ್ಥಳೀಯ ಸಂಸ್ಥೆಗಳು ತೆಗೆದುಕೊಳ್ಳಬಹುದು. | ನಗರ ಸ್ಥಳೀಯ ಸಂಸ್ಥೆ ಸಿಬ್ಬಂದಿಯ ಸೇವಾ ಷರತ್ತುಗಳಿಗೆ ಸಂಬಂಧಿಸಿದಂತೆ ನಗರ ಸ್ಥಳೀಯ ಸಂಸ್ಥೆಗಳಿಗೆ ಯಾವುದೇ ಪಾತ್ರವಿಲ್ಲ |

*ಆಧಾರ: ರಾಜ್ಯ ಹಣಕಾಸು ಆಯೋಗದ ವರದಿಗಳು ಮತ್ತು ನಗರಾಭಿವೃದ್ಧಿ ಇಲಾಖೆ ಹಾಗೂ ಪೌರಾಡಳಿತ ನಿರ್ದೇಶನಾಲಯ ನೀಡಿದ ಮಾಹಿತಿ.*

# ಅನುಬಂಧ–5.1

(ಉಲ್ಲೇಖ:ಕಂಡಿಕೆ: 5.1.2.7, ಪುಟ 45)

**ನಾಲ್ಕನೇ ಹಣಕಾಸು ಆಯೋಗವು ಗುರುತಿಸಿದ್ದ ರಾಜಸ್ವ ಸಂಪನ್ಮೂಲಗಳ ವಿವರಗಳು, ವಿಧಿಸುವಿಕೆ ಮತ್ತು ಶಾಸನಬದ್ಧ ನಿಬಂಧನೆಗಳ ಸ್ಥಿತಿ**

| ಕ್ರಮ ಸಂಖ್ಯೆ | ರಾಜಸ್ವ ಸಂಪನ್ಮೂಲ | ವಿಧಿಸುವಿಕೆಯ ಸ್ಥಿತಿ | ಅಧಿನಿಯಮ ಮತ್ತು ನಿಯಮಗಳ ನಿಬಂಧನೆಗಳು | | |
|---|---|---|---|---|---|
| | | | **ಕೆಎಮ್‌ಸಿ ಅಧಿನಿಯಮ** | **ಕೆಎಮ್ ಅಧಿನಿಯಮ** | **ಕರ್ನಾಟಕ ಸರ್ಕಾರದ ಆದೇಶಗಳು ಮತ್ತು ಸುತ್ತೋಲೆಗಳು** |
| | | | ತೆರಿಗೆ ರಾಜಸ್ವ | | |
| **1** | ಆಸ್ತಿ ತೆರಿಗೆ | ವಿಧಿಸಲಾಗಿದೆ | ಪರಿಚ್ಛೇದ–103 ಬಿ (i) | ಪರಿಚ್ಛೇದ – 94–1 ಬಿ (i) | |
| **2** | ಜಾಹೀರಾತು ತೆರಿಗೆ | ವಿಧಿಸಲಾಗಿದೆ | ಪರಿಚ್ಛೇದ –103 ಬಿ (vi) | ಪರಿಚ್ಛೇದ –94–1 ಬಿ (xiii) | |
| **3** | ಮೋಟರ್‌ರೈಸಡ್ ವಾಹನಗಳ ಮೇಲೆ ತೆರಿಗೆ | ವಿಧಿಸಲಾಗಿದೆ (ನಗರಪಾಲಿಕೆಗಳಿಂದ ಮಾತ್ರ) | ಪರಿಚ್ಛೇದ –103 ಬಿ (v) 2003ರಲ್ಲಿ ಬಿಡಲಾಗಿದೆ | | |
| **4** | ದೋಣಿಗಳು | ವಿಧಿಸಲಾಗಿದೆ (ಕಡಲ ತೀರಕ್ಕೆ ಮಾತ್ರ ಅನ್ವಯ) | ಅನುಸೂಚಿ V | | |
| **5** | ಪ್ರಾಣಿಗಳು ಮತ್ತು ನಾಯಿಗಳು | ವಿಧಿಸಿಲ್ಲ | ಅನುಸೂಚಿ V | | |
| | | | ತೆರಿಗೆಯೇತರ ರಾಜಸ್ವ | | |
| **1** | ಜನನ ಮತ್ತು ಮರಣ ಪ್ರಮಾಣಪತ್ರ ಶುಲ್ಕ | ವಿಧಿಸಲಾಗಿದೆ | | | ಕರ್ನಾಟಕ ಜನನ ಮತ್ತು ಮರಣ ನೋಂದಣಿ ನಿಯಮ 1999 (ಅನುಬಮಧ–II) & ಡಿಎಮ್‌ಎ:ಎಮ್‌ಆರ್‌ಸಿ:ಸಿಆರ್–10:2007–08 ದಿನಾಂಕ. 06.08.2010 |
| **2** | ಮಾರುಕಟ್ಟೆ ಶುಲ್ಕ | ವಿಧಿಸಲಾಗಿದೆ | ಸಾರ್ವಜನಿಕ ಮಾರುಕಟೆಗಳು : ಪರಿಚ್ಛೇದ –369 ಖಾಸಗಿ ಮಾರುಕಟ್ಟೆಗಳು: ಪರಿಚ್ಛೇದ 372 (2) | ಪರಿಚ್ಛೇದ 244 (1) | |
| **3** | ಸಂತೆ ಶುಲ್ಕ | ವಿಧಿಸಲಾಗಿದೆ | | ಪರಿಚ್ಛೇದ –137 | |
| **4** | ಬಸ್ ನಿಲ್ದಾಣ ಶುಲ್ಕ | ವಿಧಿಸಲಾಗಿದೆ | ಪರಿಚ್ಛೇದ –348 | ಪರಿಚ್ಛೇದ –138 | |
| **5** | ಕಟ್ಟಡ ನಕ್ಷೆ/ಪರವಾನಗಿ ಅನುಮೋದನಾ ಶುಲ್ಕ | ವಿಧಿಸಲಾಗಿದೆ | | | ಕರ್ನಾಟಕ ಪುರಸಭೆಗಳ ಮಾಡೆಲ್ ಕಟ್ಟಡ ಬೈಲಾಗಳು–2017ರ ಕಂಡಿಕೆ ಸಂಖ್ಯೆ 3.10.2 |
| **6** | ವ್ಯಾಪಾರ ಪರವಾನಗಿ | ವಿಧಿಸಲಾಗಿದೆ | ಪರಿಚ್ಛೇದ –2(19) & 369 | ಪರಿಚ್ಛೇದ –256 (a) & ಅನುಸೂಚಿ XIII ರ ಭಾಗ I | |
| **7** | ಖಾತಾ/ಮ್ಯುಟೇಶನ್ ಶುಲ್ಕ | ವಿಧಿಸಲಾಗಿದೆ | | | ಸುತ್ತೋಲೆ ದಿನಾಂಕ 30.01.2006 ಡಿಎಮ್‌ಎ:ಎಸ್‌ಎಎಸ್/35/2005–06 |
| **8** | ಅಂಗಡಿಗಳು/ಮಾರುಕಟ್ಟೆಗಳು/ವಾಣಿಜ್ಯ ಸಂಕೀರ್ಣಗಳಿಗೆ ಬಾಡಿಗೆ | ವಿಧಿಸಲಾಗಿದೆ | | | ಸರ್ಕಾರಿ ಆದೇಶ ಸಂಖ್ಯೆ.ಯುಡಿಡಿ/509/ ಜಿಇಎಲ್/2104 ದಿನಾಂಕ 19.1.2015 |
| **9** | ಪಾರ್ಕಿಂಗ್ ಶುಲ್ಕ | ವಿಧಿಸಲಾಗಿದೆ | ಪರಿಚ್ಛೇದ –348 | | |
| **10** | ರಸ್ತೆ ಅಗೆಯುವ ಶುಲ್ಕ | ವಿಧಿಸಲಾಗಿದೆ | | | ಪರಿಷತ್ತಿನ ನಿರ್ಣಯದ ಅನ್ವಯ |

| ಕ್ರಮ ಸಂಖ್ಯೆ | ರಾಜಸ್ವ ಸಂಪನ್ಮೂಲ | ವಿಧಿಸುವಿಕೆಯ ಸ್ಥಿತಿ | ಅಧಿನಿಯಮ ಮತ್ತು ನಿಯಮಗಳ ನಿಬಂಧನೆಗಳು | | |
|---|---|---|---|---|---|
| 11 | ಪುರಭವನ ಶುಲ್ಕ | ಪುರಭವನಗಳು ಎಲ್ಲಿವೆಯೋ ಅಲ್ಲಿ ವಿಧಿಸಲಾಗಿದೆ | | | ಪರಿಷತ್ತಿನ ನಿರ್ಣಯದ ಅನ್ವಯ |
| 12 | ನೆಲಬಾಡಿಗೆ | ವಿಧಿಸಲಾಗಿದೆ | | | ಪರಿಷತ್ತಿನ ನಿರ್ಣಯದ ಅನ್ವಯ |
| 13 | ಹಸಿರು ಶುಲ್ಕಗಳು | ವಿಧಿಸಿಲ್ಲ | | | ಪರಿಷತ್ತಿನ ನಿರ್ಣಯದ ಅನ್ವಯ |
| 14 | ಅಭಿವೃದ್ಧಿ ಶುಲ್ಕಗಳು | ಯುಡಿಎ/ಟಿಪಿಎ ಗಳಿಂದ ವಿಧಿಸಲಾಗಿದೆ | | | ಕರ್ನಾಟಕ ಟೌನ್ ಪ್ಲಾನಿಂಗ್ ಪ್ರಾಧಿಕಾರ ನಿಯಮ 1965ರ ನಿಯಮ 37 |
| 15 | ನೀರಿನ ಶುಲ್ಕ | ವಿಧಿಸಲಾಗಿದೆ | ಪರಿಚ್ಛೇದ –144 | ಪರಿಚ್ಛೇದ 139 | ಜಿಒ ಯುಡಿಡಿ /07/ ಯುಬ್ಲ್ಯುಎಸ್ 2011 ದಿನಾಂಕ. 20.07.2011 |
| 16 | ಸುಧಾರಣಾ ಶುಲ್ಕ | ವಿಧಿಸಲಾಗಿದೆ | | ಪರಿಚ್ಛೇದ 161 | ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ಅನ್ವಯ |
| 17 | ಕೊಳೆಗೇರಿ ಅಭಿವೃದ್ಧಿ ಶುಲ್ಕ | ವಿಧಿಸಲಾಗಿದೆ | | | ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ಅನ್ವಯ |
| 18 | ಘನತ್ಯಾಜ್ಯ ನಿರ್ವಹಣೆ ಉಪಕರ | ವಿಧಿಸಲಾಗಿದೆ | ಪರಿಚ್ಛೇದ –103 B | | |
| 19 | ಒಳಚರಂಡಿ ಶುಲ್ಕ | ವಿಧಿಸಲಾಗಿದೆ | | | ಜಿಒ ಯುಡಿಡಿ/07/ ಯುಬ್ಲ್ಯುಎಸ್ 2011 ದಿನಾಂಕ 20.07.2011 |
| 20 | ಹರಾಜು ಶುಲ್ಕ | ಸಾಂದರ್ಭಿಕ | | | ಪರಿಷತ್ತಿನ ನಿರ್ಣಯದ ಅನ್ವಯ ಮತ್ತು ಸ್ಪರ್ಧಾತ್ಮಕ ಬಿಡ್ಡಿಂಗ್ |
| 21 | ಒಳಚರಂಡಿ ಸಂಪರ್ಕ ಶುಲ್ಕ | ವಿಧಿಸಲಾಗಿದೆ | | | |
| 22 | ನೀರಿನ ಸಂಪರ್ಕ ಶುಲ್ಕ | ವಿಧಿಸಲಾಗಿದೆ | | | ಜಿಒ ಯುಡಿಡಿ/07/ಯುಬ್ಲ್ಯುಎಸ್ 2011 ದಿನಾಂಕ 20.07.2011 |
| 23 | ಮೊಬೈಲ್ ಟವರ್ | ವಿಧಿಸಲಾಗಿದೆ | | | ಗೆಜೆಟ್ ಅಧಿಸೂಚನೆ ದಿನಾಂಕ 24.2.2016 |
| 24 | ಕೇಬಲ್ ಹಾಕುವ ಶುಲ್ಕಗಳು | ವಿಧಿಸಿಲ್ಲ | | | ಪರಿಷತ್ತಿನ ನಿರ್ಣಯದ ಅನ್ವಯ |
| 25 | ಇತರೆ ಶುಲ್ಕಗಳು & ಸುಂಕಗಳು (ದೋಣಿ, ಫೆರ್ರಿ, ಕಸಾಯಿಖಾನೆ ಶುಲ್ಕ, ಹಸುವಿನ ಶೆಡ್) | ವಿಧಿಸಿಲ್ಲ | ಪರಿಚ್ಛೇದ 364, 348 | ಪರಿಚ್ಛೇದ 324, 244, 71 | |
| 26 | ಸ್ಮಶಾಣ ಮತ್ತು ಸಮಾದಿ | ವಿಧಿಸಲಾಗಿದೆ | ಪರಿಚ್ಛೇದ – 393 (1) | | |
| 27 | ನಕಲು | ವಿಧಿಸಲಾಗಿದೆ | | | ಪರಿಷತ್ತಿನ ನಿರ್ಣಯದ ಅನ್ವಯ |
| 28 | ಟೆಂಡರ್ ನಮೂನೆಗಳು | ವಿಧಿಸಲಾಗಿದೆ | | | ಕೆಟಿಪಿಪಿ ಅಧಿನಿಯಮ ಅನ್ವಯ |
| 29 | ನಾಯಿ ಶುಲ್ಕ | ವಿಧಿಸಿಲ್ಲ | | | ಪರಿಷತ್ತಿನ ನಿರ್ಣಯದ ಅನ್ವಯ |
| 30 | ದಂಡಗಳು | ವಿಧಿಸಲಾಗಿದೆ | ಅನುಸೂಚಿ–XI & XII | ಪರಿಚ್ಛೇದ –107, 187ಬಿ, 275, 370 | |

ಆಧಾರ: ಕೆಎಮ್ ಮತ್ತು ಕೆಎಮ್‌ಸಿ ಅಧಿನಿಯಮಗಳು; ಸರ್ಕಾರಿ ಆದೇಶಗಳು ಮತ್ತು ಯುಎಲ್‌ಬಿಗಳು ಒದಗಿಸಿದ ಮಾಹಿತಿ

## ಅನುಬಂಧ–6.1

(ಉಲ್ಲೇಖ:ಕಂಡಿಕೆ: 6.1.3, ಪುಟ 58)

**ಪರೀಕ್ಷಾ–ತನಿಖೆ ನಡೆಸಿದ ಯುಎಲ್‌ಬಿಗಳಲ್ಲಿ 1000 ಜನಸಂಖ್ಯೆಗೆ ಪ್ರತಿಯಾಗಿ ಉದ್ಯೋಗಿಗಳ ಸಂಖ್ಯೆಯನ್ನು ತೋರಿಸುವ ಕೋಷ್ಟಕ**

| ಕ್ರಮ ಸಂಖ್ಯೆ | ಪ್ರವರ್ಗ | ನಗರ ಸ್ಥಳೀಯ ಸಂಸ್ಥೆಯ ಹೆಸರು | 2001ರ ಜನಗಣತಿಯ ಅನ್ವಯ ಜನಸಂಖ್ಯೆ | 2011ರ ಜನಗಣತಿಯ ಅನ್ವಯ ಜನಸಂಖ್ಯೆ | *2019ರ ವರ್ಷಕ್ಕೆ ಪ್ರಕ್ಷೇಪಿತ ಜನಸಂಖ್ಯೆ | ಮಂಜೂರಾದ ಬಲ | ಕೆಲಸ ಮಾಡುತ್ತಿರುವ ಸಿಬ್ಬಂದಿ (ಒಪಿಪಿ ಅನ್ವಯ) | 2001ರ ಜನಸಂಖ್ಯೆಯ 1,000 ಜನಸಂಖ್ಯೆಗೆ (ಮಂಜೂರಾದ ಬಲ) | 2011ರ ಜನಸಂಖ್ಯೆಯ 1,000 ಜನಸಂಖ್ಯೆಗೆ (ಮಂಜೂರಾದ ಬಲ) | 2019ರ ಪ್ರಕ್ಷೇಪಿತ ಜನಸಂಖ್ಯೆಯ 1,000ಕ್ಕೆ (ಮಂಜೂರಾದ ಬಲ) |
|---|---|---|---|---|---|---|---|---|---|---|
| **1** | ಸಿಸಿ | ದಾವಣಗೆರೆ | 3,64,523 | 4,34,971 | 4,89,603 | 1,725 | 1,210 | 4.73 | 3.97 | 2.47 |
| **2** | ಸಿಸಿ | ಹೆಚ್‌ಡಿಎಮ್‌ಸಿ | 7,86,195 | 9,43,788 | 10,85,060 | 3,794 | 3,521 | 4.83 | 4.02 | 3.24 |
| **3** | ಸಿಸಿ | ಕಲಬುರಗಿ | 4,30,265 | 5,43,147 | 6,29,850 | 1,725 | 1,544 | 4.01 | 3.18 | 2.45 |
| **4** | ಸಿಸಿ | ಮಂಗಳೂರು | 4,11,327 | 4,99,487 | 6,19,941 | 1,725 | 1,208 | 4.19 | 3.45 | 1.95 |
| **5** | ಸಿಎಮ್‌ಸಿ | ಅರಸೀಕೆರೆ | 45,166 | 53,216 | 63,075 | 237 | 198 | 5.25 | 4.45 | 3.14 |
| **6** | ಸಿಎಮ್‌ಸಿ | ಬಾಗಲಕೋಟೆ | 90,988 | 1,11,933 | 1,34,085 | 236 | 133 | 2.59 | 2.11 | 0.99 |
| **7** | ಸಿಎಮ್‌ಸಿ | ಭದ್ರಾವತಿ | 1,60,662 | 1,51,102 | 1,61,751 | 418 | 364 | 2.60 | 2.77 | 2.25 |
| **8** | ಸಿಎಮ್‌ಸಿ | ಬೀದರ್ | 1,74,257 | 2,16,020 | 2,51,684 | 418 | 353 | 2.40 | 1.94 | 1.40 |
| **9** | ಸಿಎಮ್‌ಸಿ | ಚನ್ನಪಟ್ಟಣ | 63,577 | 71,942 | 85,613 | 236 | 158 | 3.71 | 3.28 | 1.85 |
| **10** | ಸಿಎಮ್‌ಸಿ | ಚಿತ್ರದುರ್ಗ | 1,25,170 | 1,45,853 | 1,74,999 | 467 | 413 | 3.73 | 3.20 | 2.36 |
| **11** | ಸಿಎಮ್‌ಸಿ | ದೊಡ್ಡಬಳ್ಳಾಪುರ | 71,606 | 93,105 | 1,30,820 | 236 | 273 | 3.30 | 2.53 | 2.09 |
| **12** | ಸಿಎಮ್‌ಸಿ | ಗಂಗಾವತಿ | 1,01,392 | 1,14,642 | 1,30,522 | 300 | 282 | 2.96 | 2.62 | 2.16 |
| **13** | ಸಿಎಮ್‌ಸಿ | ಕಾರವಾರ | 75,038 | 77,139 | 86,549 | 385 | 168 | 5.13 | 4.99 | 1.94 |
| **14** | ಸಿಎಮ್‌ಸಿ | ಕೋಲಾರ | 1,13,907 | 1,38,462 | 1,59,749 | 418 | 273 | 3.67 | 3.02 | 1.71 |

| ಕ್ರಮ ಸಂಖ್ಯೆ | ಪ್ರವರ್ಗ | ನಗರ ಸ್ಥಳೀಯ ಸಂಸ್ಥೆಯ ಹೆಸರು | 2001ರ ಜನಗಣತಿಯ ಅನ್ವಯ ಜನಸಂಖ್ಯೆ | 2011ರ ಜನಗಣತಿಯ ಅನ್ವಯ ಜನಸಂಖ್ಯೆ | *2019ರ ವರ್ಷಕ್ಕೆ ಪ್ರಕ್ಷೇಪಿತ ಜನಸಂಖ್ಯೆ | ಮಂಜೂರಾದ ಬಲ | ಕೆಲಸ ಮಾಡುತ್ತಿರುವ ಸಿಬ್ಬಂದಿ (ಒಪಿಪಿ ಅನ್ವಯ) | 2001ರ ಜನಸಂಖ್ಯೆಯ 1,000 ಜನಸಂಖ್ಯೆಗೆ (ಮಂಜೂರಾದ ಬಲ) | 2011ರ ಜನಸಂಖ್ಯೆಯ 1,000 ಜನಸಂಖ್ಯೆಗೆ (ಮಂಜೂರಾದ ಬಲ) | 2019ರ ಪ್ರಕ್ಷೇಪಿತ ಜನಸಂಖ್ಯೆಯ 1,000ಕ್ಕೆ (ಮಂಜೂರಾದ ಬಲ) |
|---|---|---|---|---|---|---|---|---|---|---|
| **15** | ಸಿಎಮ್‌ಸಿ | ಕೊಳ್ಳೇಗಾಲ | 52,607 | 57,149 | 78,277 | 236 | 162 | 4.49 | 4.13 | 2.07 |
| **16** | ಸಿಎಮ್‌ಸಿ | ಕೊಪ್ಪಳ | 56,160 | 70,698 | 90,609 | 236 | 89 | 4.20 | 3.34 | 0.98 |
| **17** | ಸಿಎಮ್‌ಸಿ | ಮಂಡ್ಯ | 1,31,179 | 1,37,358 | 1,47,867 | 418 | 271 | 3.19 | 3.04 | 1.83 |
| **18** | ಸಿಎಮ್‌ಸಿ | ನಿಪ್ಪಾಣಿ | 58,081 | 62,865 | NA | 236 | 176 | 4.06 | 3.75 | |
| **19** | ಸಿಎಮ್‌ಸಿ | ರಾಣಿಬೆನ್ನೂರು | 89,618 | 1,06,406 | 1,37,646 | 296 | 249 | 3.30 | 2.78 | 1.81 |
| **20** | ಸಿಎಮ್‌ಸಿ | ಶಹಾಬಾದ್ | 50,562 | 47,582 | NA | 204 | 75 | 4.03 | 4.29 | |
| **21** | ಸಿಎಮ್‌ಸಿ | ತಿಪಟೂರು | 53,104 | 59,543 | 68,326 | 236 | 192 | 4.44 | 3.96 | 2.81 |
| **22** | ಟಿಎಮ್‌ಸಿ | ಆಳಂದ | 35,245 | 42,371 | 49,261 | 130 | 85 | 3.69 | 3.07 | 1.73 |
| **23** | ಟಿಎಮ್‌ಸಿ | ಬೈಲಹೊಂಗಲ | 43,225 | 49,182 | NA | 97 | 57 | 2.24 | 1.97 | |
| **24** | ಟಿಎಮ್‌ಸಿ | ಬನ್ನೂರು | 23,239 | 21,896 | NA | 97 | 58 | 4.17 | 4.43 | |
| **25** | ಟಿಎಮ್‌ಸಿ | ಬಸವನಬಾಗೇವಾಡಿ | 28,560 | 33,198 | 40,087 | 97 | 70 | 3.40 | 2.92 | 1.75 |
| **26** | ಟಿಎಮ್‌ಸಿ | ಭಟ್ಕಳ | 31,774 | 32,000 | 52,856 | 97 | 92 | 3.05 | 3.03 | 1.74 |
| **27** | ಟಿಎಮ್‌ಸಿ | ಹಾನಗಲ್ | 25,009 | 28,159 | 33,126 | 103 | 82 | 4.12 | 3.66 | 2.48 |
| **28** | ಟಿಎಮ್‌ಸಿ | ಹರಪನಹಳ್ಳಿ | 41,907 | 47,039 | 52,810 | 138 | 127 | 3.29 | 2.93 | 2.40 |
| **29** | ಟಿಎಮ್‌ಸಿ | ಕಂಪ್ಲಿ | 35,380 | 39,307 | NA | 125 | 92 | 3.53 | 3.18 | |
| **30** | ಟಿಎಮ್‌ಸಿ | ಕುಂದಾಪುರ | 28,591 | 30,444 | 59,846 | 108 | 103 | 3.78 | 3.55 | 1.72 |
| **31** | ಟಿಎಮ್‌ಸಿ | ಲಕ್ಷ್ಮೇಶ್ವರ | 33,417 | 36,754 | NA | 120 | 84 | 3.59 | 3.26 | |

| ಕ್ರಮ ಸಂಖ್ಯೆ | ಪ್ರವರ್ಗ | ನಗರ ಸ್ಥಳೀಯ ಸಂಸ್ಥೆಯ ಹೆಸರು | 2001ರ ಜನಗಣತಿಯ ಅನ್ವಯ ಜನಸಂಖ್ಯೆ | 2011ರ ಜನಗಣತಿಯ ಅನ್ವಯ ಜನಸಂಖ್ಯೆ | *2019ರ ವರ್ಷಕ್ಕೆ ಪ್ರಕ್ಷೇಪಿತ ಜನಸಂಖ್ಯೆ | ಮಂಜೂರಾದ ಬಲ | ಕೆಲಸ ಮಾಡುತ್ತಿರುವ ಸಿಬ್ಬಂದಿ (ಒವಿಪಿ ಅನ್ವಯ) | 2001ರ ಜನಸಂಖ್ಯೆಯ 1,000 ಜನಸಂಖ್ಯೆಗೆ (ಮಂಜೂರಾದ ಬಲ) | 2011ರ ಜನಸಂಖ್ಯೆಯ 1,000 ಜನಸಂಖ್ಯೆಗೆ (ಮಂಜೂರಾದ ಬಲ) | 2019ರ ಪ್ರಕ್ಷೇಪಿತ ಜನಸಂಖ್ಯೆಯ 1,000ಕ್ಕೆ (ಮಂಜೂರಾದ ಬಲ) |
|---|---|---|---|---|---|---|---|---|---|---|
| 32 | ಟಿಎಮ್‌ಸಿ | ಮದ್ದೂರು | 26,521 | 28,754 | 37,904 | 110 | 103 | 4.15 | 3.83 | 2.72 |
| 33 | ಟಿಎಮ್‌ಸಿ | ಮಧುಗಿರಿ | 26,304 | 29,159 | 33,486 | 122 | 112 | 4.64 | 4.18 | 3.34 |
| 34 | ಟಿಎಮ್‌ಸಿ | ಮಾನ್ವಿ | 37,613 | 46,465 | 51,476 | 97 | 130 | 2.58 | 2.09 | 2.53 |
| 35 | ಟಿಎಮ್‌ಸಿ | ಸಕಲೇಶಪುರ | 23,176 | 23,352 | 27,699 | 92 | 61 | 3.97 | 3.94 | 2.20 |
| 36 | ಟಿಎಮ್‌ಸಿ | ಸಂಕೇಶ್ವರ | 32,511 | 34,637 | NA | 97 | 88 | 2.98 | 2.80 | |
| 37 | ಟಿಎಮ್‌ಸಿ | ಸವಣೂರು | 35,563 | 40,567 | 46,024 | 129 | 76 | 3.63 | 3.18 | 1.65 |
| 38 | ಟಿಎಮ್‌ಸಿ | ಶ್ರೀನಿವಾಸಪುರ | 22,959 | 26,793 | 31,003 | 97 | 71 | 4.22 | 3.62 | 2.29 |
| 39 | ಟಿಎಮ್‌ಸಿ | ವಿಜಯಪುರ | 29,540 | 34,866 | NA | 118 | 88 | 3.99 | 3.38 | |
| 40 | ಟಿಎಮ್‌ಸಿ | ವಾಡಿ | 30,012 | 37,988 | NA | 124 | 89 | 4.13 | 3.26 | |
| 41 | ಟಿಪಿ | ಹಿರೇಕೇರೂರು | 15,872 | 19,191 | 22,064 | 62 | 83 | 3.91 | 3.23 | 3.76 |
| 42 | ಟಿಪಿ | ಕಮಲಾಪುರ | 21,830 | 25,552 | NA | 66 | 58 | 3.02 | 2.58 | |
| 43 | ಟಿಪಿ | ಮೂಡಿಗೆರೆ | 8,963 | 9,667 | 12,636 | 52 | 23 | 5.80 | 5.38 | 1.82 |
| 44 | ಟಿಪಿ | ತೀರ್ಥಹಳ್ಳಿ | 14,808 | 14,528 | 15,598 | 55 | 60 | 3.71 | 3.79 | 3.85 |

* ಅರ್ಥಶಾಸ್ತ್ರ ಮತ್ತು ಸಂಖ್ಯಾಶಾಸ್ತ್ರದ ನಿರ್ದೇಶನಾಲಯದ ಅನ್ವಯ

ಆಧಾರ: ನಗರ ಸ್ಥಳೀಯ ಸಂಸ್ಥೆಗಳು ಸಲ್ಲಿಸಿದ ಮಾಹಿತಿ



©
ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು
www.saiindia.gov.in

www.agkar.cag.gov.in